# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**
**(ತ್ರೈಮಾಸಿಕ ಪತ್ರಿಕೆ)**
**ಏಪ್ರಿಲ್, ಮೇ ಮತ್ತು ಜೂನ್ –2025**
**ಸಂಪುಟ–VII ಸಂಖ್ಯೆ – 2**

**ಪ್ರಕಟಣೆ:**
**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**
**ಕರ್ನಾಟಕ ವಿಧಾನ ಸಭೆ ಸಚಿವಾಲಯ,**
**ಕೊಠಡಿ ಸಂಖ್ಯೆ: 28, ನೆಲಮಹಡಿ, ವಿಧಾನಸೌಧ,**
**ಬೆಂಗಳೂರು – 560 233.**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

**ಸೂಚನೆ:–** ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ **http://kla.kar.nic.in** ನಲ್ಲೂ ಲಭ್ಯವಿದೆ

# ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ – VII ರ ಎರಡನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2025ನೇ ಸಾಲಿನ ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

ಮಾನ್ಯ ಸದಸ್ಯರುಗಳು ತಮ್ಮ ಲೇಖನಗಳನ್ನು ನೀಡಿದಲ್ಲಿ, ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ: 05–12–2025

## ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

### ಕರ್ನಾಟಕ ವಿಧಾನ ಸಭೆ ಸಚಿವಾಲಯ

1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ : ಕಾರ್ಯದರ್ಶಿ
2. ಶ್ರೀ ಬಿ.ಎಸ್. ಮಹಾಲಿಂಗೇಶ್ : ನಿರ್ದೇಶಕರು
3. ಶ್ರೀ ಬಿ.ಎಂ.ಶಂಭು : ಜಂಟಿ ನಿರ್ದೇಶಕರು
4. ಶ್ರೀಮತಿ ವಿ.ಭಾಗ್ಯ : ಉಪ ನಿರ್ದೇಶಕರು
5. ಶ್ರೀ ಬಿ.ಎ.ಸತೀಶ್ : ಸಹಾಯಕ ನಿರ್ದೇಶಕರು

### ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ
2. ಶ್ರೀಮತಿ ಎಸ್. ನಿರ್ಮಲ : ಕಾರ್ಯದರ್ಶಿ–2

# ಕರ್ನಾಟಕ ಶಾಸಕಾಂಗ ಪತ್ರಿಕೆ

## (ತ್ರೈಮಾಸಿಕ ಪತ್ರಿಕೆ)

## ಏಪ್ರಿಲ್, ಮೇ ಮತ್ತು ಜೂನ್– 2025

## ಸಂಪುಟ–VII ಸಂಖ್ಯೆ– 2


## ಪರಿವಿಡಿ

## ಭಾಗ–1

## ಕರ್ನಾಟಕ ವಿಧಾನ ಮಂಡಲದ ಸುದ್ದಿಗಳು


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1 | **ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು** | 3–28 |
| 2 | BJP may move a court against MLAs' suspension | 29 |
| 3 | ಬಿಜೆಸಿಇ ಬೈಕ್ ರ್‍ಯಾಲಿಗೆ ಖಾದರ್ ಚಾಲನೆ | 30 |
| 4 | ಸಸ್ಪೆಂಡ್ ಶಾಸಕರಿಂದ ವಿಷಾದ ವಾಪಸ್ಸಿಗೆ ಸಕರಾತ್ಮಕ ನಿಲುವು | 30–31 |
| 5 | ಪಾಕ್ ಆಕ್ರಮಿತ ಕಾಶ್ಮೀರ ವಶಕ್ಕೆ ಹೊರಟ್ಟಿ ಆಗ್ರಹ | 31–32 |
| 6 | ಜಾತಿಗಣತಿಗೆ ಕೈ ಹಾಕಿದರೆ ಜೇನಗೂಡಿಗೆ ಕೈ ಹಾಕಿದಂತೆ | 32 |
| 7 | ಸುಹಾಸ್ ಶೆಟ್ಟಿ ಹತ್ಯೆ ಎನ್ಐಎಗೆ ವಹಿಸಲು ಅಭ್ಯಂತರವಿಲ್ಲ: ಸ್ಪೀಕರ್ | 32 |
| 8 | ಪಾಕಿಸ್ತಾನದ ವಿರುದ್ಧ ಸಂಘರ್ಷ ನಿಲ್ಲಿಸಬಾರದಿತ್ತು | 33 |
| 9 | ವಿಧಾನಸಭಾ ಸ್ಪೀಕರ್‌ಗಳ ರಾಷ್ಟ್ರೀಯ ಸಮಿತಿಗೆ ಯು.ಟಿ.ಖಾದರ್ ನೇಮಕ | 33 |
| 10 | ಸಭಾಧ್ಯಕ್ಷ ಯು.ಟಿ.ಖಾದರ್ ಮಲೇಶಿಯಾ ಪ್ರವಾಸ | 34 |
| 11 | ಮಕ್ಕಳಿಗೆ ಆನ್‌ಲೈನ್ ಶಿಕ್ಷಣ, ಮೊಬೈಲ್ ಬಳಕೆ ನಿಷೇಧಿಸಿ | 34–35 |
| 12 | ಬೆಂಗಳೂರಿನಲ್ಲಿ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನ | 36 |
| 13 | ವಿಧಾನಸೌಧಕ್ಕೆ ಬಿಹಾರದ ನಿಯೋಗ | 36 |
| 14 | ಶಿಕ್ಷಕರ ಮೇಲಿನ ಪಠ್ಯೇತರ ಹೊರೆ ಇಳಿಸಿ | 36–37 |

| ಭಾಗ–2<br>ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು | | |
|---|---|---|
| 1 | ವಿಶೇಷ ಸದನ ಸಮಿತಿಯ ಅವಧಿಯನ್ನು ವಿಸ್ತರಿಸಿರುವ ಬಗ್ಗೆ ಲಘು ಪ್ರಕಟಣೆ | 41 |
| 2 | ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಗೆ ಸದಸ್ಯರನ್ನು ನಾಮ ನಿರ್ದೇಶನ ಮಾಡಿರುವ ಬಗ್ಗೆ ಲಘು ಪ್ರಕಟಣೆ | 42 |
| 3 | ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಉಪ ಸಮಿತಿ ರಚನೆ ಬಗ್ಗೆ | 43–44 |
| 4 | ವಿಧಾನ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಾ, ಅಶಿಸ್ತು ಹಾಗೂ ಅಗೌರವದಿಂದ ವರ್ತಿಸಿದ ಮಾನ್ಯ ಸದಸ್ಯರುಗಳ ಅಮಾನತು ಹಿಂಪಡೆದಿರುವ ಬಗ್ಗೆ | 45–46 |

| ಭಾಗ–3<br>ಸಂಸತ್ ಸುದ್ದಿಗಳು | | |
|---|---|---|
| 1 | ವಲಸೆ ಮತ್ತು ವಿದೇಶಿಯರ ಮಸೂದೆ ರಾಜ್ಯ ಸಭೆಯಲ್ಲೂ ಅಂಗೀಕಾರ | 50 |
| 2 | ವಕ್ಫ್ ಕಾಯ್ದೆ ಜಾರಿ | 50 |
| 3 | ಸರ್ವಪಕ್ಷ ನಿಯೋಗದಲ್ಲಿ ರಾಜ್ಯದ ಇಬ್ಬರು ಸಂಸದರು | 50–51 |
| 4 | ಜುಲೈ 21 ರಿಂದ ಸಂಸತ್ ಮುಂಗಾರು ಅಧಿವೇಶನ: ಸಚಿವ ಕಿರಣ್ ರಿಜಿಜು | 51–52 |
| 5 | ಪ್ರಶ್ನೆಯಲ್ಲಿ ತೇಜಸ್ವಿಸೂರ್ಯ ನಂ.1 | 52 |

| | ಭಾಗ–4<br>ಕೇಂದ್ರ ಸರ್ಕಾರ ಸುದ್ದಿಗಳು | |
|---|---|---|
| 1 | ಸಾಗರ ಸುರಕ್ಷತೆಗೆ ಭಾರತ ದಿಟ್ಟ ಹೆಜ್ಜೆ | 56 |
| 2 | FM: Set aside political differences, support One Nation, One Poll | 56–57 |
| 3 | ನ್ಯಾಯಾಂಗ–ಪೊಲೀಸ್ ವ್ಯವಸ್ಥೆಯಲ್ಲಿ ಕರ್ನಾಟಕ ನಂ.1 | 57–58 |
| 4 | 17 ಸಂಸದರಿಗೆ ಸಂಸದ ರತ್ನ ಪ್ರಶಸ್ತಿ | 58 |
| 5 | ಕರ್ನಾಟಕ ದೇಶದಲ್ಲೇ ನಂ.3 ಅತ್ಯುತ್ತಮ ಸಾಧನ ರಾಜ್ಯ | 58–59 |
| 6 | 4ನೇ ಬೃಹತ್ ಆರ್ಥಿಕತೆ | 59–60 |
| 7 | Gen. Dwivedi felicitates BSF Officer Neha Bhandari | 60 |

| | ಭಾಗ–5<br>ರಾಜ್ಯ ಸರ್ಕಾರದ ಸುದ್ದಿಗಳು | |
|---|---|---|
| 1 | ಸಾಧಕರಿಗೆ ಜಗಜೀವನ್ ರಾಂ ಪ್ರಶಸ್ತಿ ಪ್ರದಾನ | 64 |
| 2 | ಸ್ಮಾರ್ಟ್ ಸಿಟಿ ಅಭಿವೃದ್ಧಿಗಾಗಿ ಜರ್ಮನಿ ಜತೆ ಮಹತ್ವದ ಒಪ್ಪಂದ | 64 |
| 3 | 'ಸಕಾಲ', 'ಪೋಡಿ' ಅರ್ಜಿ ವಿಲೇವಾರಿ:ದ.ಕ.ನಂ.1 | 65 |
| 4 | ಹೆಣ್ಮಕ್ಕಳಿಗೆ ಶೇ.50 ಸೀಟು ಕಡ್ಡಾಯ | 65–66 |
| 5 | 'ಗ್ರೇಟರ್ ಬೆಂಗಳೂರು'ಗೆ ಅಸ್ತು | 66–67 |
| 6 | ಇ–ಸ್ವತ್ತು ಸುಧಾರಣೆಗೆ ಸಮಿತಿ | 68 |
| 7 | ವಿದ್ಯಾಸಿರಿ ಮೊತ್ತ ರೂ.2.000ಕ್ಕೆ ಏರಿಕೆ | 68–69 |
| 8 | ಎಲ್‌ಕೆಜಿಗೆ 4, ಯುಕೆಜಿಗೆ 5 ವರ್ಷ ಪೂರ್ಣ ಕಡ್ಡಾಯ: ಮತ್ತೆ ಸುತ್ತೋಲೆ | 69 |
| 9 | ಯೋಧರಿಗೆ ರಾಜೇಂದ್ರ ಕುಮಾರ್ ರೂ.3ಕೋಟಿ | 70 |
| 10 | ರಾಷ್ಟ್ರಪತಿ ಅಂಗಳಕ್ಕೆ ಸಹಕಾರ ಬಿಲ್ | 70–71 |
| 11 | ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಗೌರವ ಡಾಕ್ಟರೇಟ್ | 71 |
| 12 | ಅಂಗವಿಕಲ ಸರ್ಕಾರಿ ನೌಕರರಿಗೆ ಬಡ್ತಿಯಲ್ಲಿ 4%ರಷ್ಟು ಮೀಸಲಾತಿ | 71 |
| 13 | ಪ್ಯಾನ್ ಇಲ್ಲದೆ ಆಸ್ತಿ ನೋಂದಣಿ ಆಗಲ್ಲ | 72 |
| 14 | ಆಂಧ್ರಕ್ಕೆ ನಾಲ್ಕು ಕುಮ್ಕಿ ಆನೆ | 72–73 |
| 15 | ವಿಧಾನಸೌಧ ಮಾರ್ಗದರ್ಶಿ ನಡಿಗೆ ಜನರಿಂದ ಮೆಚ್ಚುಗೆ | 73–74 |
| 16 | CM's Dashboard launched | 74–75 |
| 17 | ಮೂವರು ಶಾಸಕರ ವಿರುದ್ಧ ಎಫ್‌ಐಆರ್ | 75 |
| 18 | ಬುಕರ್ ಬಾನು, ಭಾಸ್ತಿಗೆ ರೂ.10ಲಕ್ಷ ಪುರಸ್ಕಾರ:ಸಿಎಂ | 76 |
| 19 | ವಿಧಾನಸೌಧ ಮೆಟ್ಟಿಲುಗಳ ಮೇಲೆ ಆರ್‌ಸಿಬಿಗೆ ಸನ್ಮಾನ | 76 |
| 20 | ಕಟ್ಟಡ ನಕ್ಷೆಗಾಗಿ ಇ–ಖಾತಾ ಕಡ್ಡಾಯ | 77 |
| 21 | ಪಿ.ಎಂ.ಕುಸುಮ್ 'ಸಿ' ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ | 77–78 |
| 22 | ಕೆಲಸದ ಅವಧಿ 10 ಗಂಟೆಗೆ ಹೆಚ್ಚಳ | 78–79 |
| 23 | ಮೆಟ್ರೋ ನಿಗಮಕ್ಕೆ ರಾಷ್ಟ್ರೀಯ ಪ್ರಶಸ್ತಿ | 79 |
| 24 | Janardhana Reddy's Assembly membership restored | 79–80 |
| 25 | ಗುತ್ತಿಗೆ ಸಿಬ್ಬಂದಿಗೆ ₹5 ಲಕ್ಷವರೆಗೆ ಕ್ಯಾಶ್‌ಲೆಸ್ ಚಿಕಿತ್ಸೆ | 80 |
| 26 | ಬಮುಲ್ ಅಧ್ಯಕ್ಷರಾಗಿ ಡಿ.ಕೆ.ಸುರೇಶ್ ಆಯ್ಕೆ | 80–81 |
| 27 | ರಾಜ್ಯದ ಆರೋಗ್ಯ ಇಲಾಖೆಗೆ ವಿಶ್ವಸಂಸ್ಥೆಯ ಪ್ರಶಸ್ತಿ | 81–82 |
| 28 | ಇ–ಹಾಜರಾತಿ ಕಡ್ಡಾಯ | 82–83 |
| 29 | ಸಿಬಿಎಸ್‌ಇ 10ನೇ ತರಗತಿಯ ಪರೀಕ್ಷೆಗೆ ಕರ್ನಾಟಕ ಮಾದರಿ | 83 |
| 30 | ಆಡಳಿತದಲ್ಲಿ ಕನ್ನಡವೇ ಅಂತಿಮ | 84 |
| 31 | ಹಿರಿಯ ಕಲಾವಿದರ ಮಾಸಾಶನ ರೂ.2500ಕ್ಕೆ ಹೆಚ್ಚಿಸಿದ ರಾಜ್ಯ ಸರ್ಕಾರ | 84 |
| 32 | ಕೆಂಪೇಗೌಡರು ದೂರದೃಷ್ಟಿ ಆಡಳಿತಗಾರ: ಸಿಎಂ | 85 |
| 33 | ಕೆಎಂಎಫ್ ನಂದಿನಿ ದೇಶದ ನಂ.4 ಬ್ರ್ಯಾಂಡ್ | 85–86 |

| | ಭಾಗ – 6<br>ನ್ಯಾಯಾಲಯ ಸುದ್ದಿಗಳು | |
|---|---|---|
| 1 | ಏಕರೂಪ ನಾಗರಿಕ ಸಂಹಿತೆ ಅಗತ್ಯತೆ ಇದೆ: ಹೈಕೋರ್ಟ್ | 89 |
| 2 | SC judgment on T.N. Governor addresses a Constitutional silence | 89–90 |
| 3 | Make rules to act against officials who do not enforce law stopping transfer of SC/ST land: HC | 90–91 |
| 4 | Absence of ticket can't deny 9/6 compensation in train accidents, says High Court | 91–92 |
| 5 | Digitally integrate details of all properties, PAN, Aadhaar of a person with death certificate: High Court | 92–93 |
| 6 | Don't withhold RTE funds over\| NEP row: Madras HC to Centre | 93 |

| | ಭಾಗ – 7<br>ಹೊರರಾಜ್ಯ ಸುದ್ದಿಗಳು | |
|---|---|---|
| 1 | Stalin request CMs to oppose Presidential Reference | 97–98 |
| 2 | Arunachal declares 2025-35 as 'decade of hydropower' | 98–99 |
| 3 | ಶಾಲೆಗಳಲ್ಲಿ ದಿನಪತ್ರಿಕೆ ಓದು ಕಡ್ಡಾಯ | 99–100 |
| 4 | Maharashtra scraps three-language policy | 100 |

| | ಭಾಗ – 8<br>ಅಂತರಾಷ್ಟ್ರೀಯ ಸುದ್ದಿಗಳು | |
|---|---|---|
| 1 | ಭಾರತ ನಿಯೋಗದ ಜಪಾನ್, ಯುಎಇ ಭೇಟಿ ಯಶಸ್ವಿ | 103 |
| 2 | Colombia retracted message offering condolences to Pak. for loss of lives, says Tharoor | 103–104 |
| 3 | 7 NCP MLAs join NDPP, Rio gets absolute majority | 104 |
| 4 | India’s population hits 146.39 crore:UNFPA | 104 |

| | **ಭಾಗ – 09**<br>**ಪ್ರಮುಖ ಲೇಖನಗಳು** | |
|---|---|---|
| 1 | ವಿಧಾನಸಭೆಯೆಂಬ ಅನುಭವ ಮಂಟಪದಲ್ಲಿ ಸಂಬಂಧಗಳ ಪಾತ್ರ | 107–109 |
| 2 | ಒತ್ತಡವೇ ಆಧುನಿಕ ಮಾನವನ ಪರಮಶತ್ರು | 109–111 |
| 3 | ಯೋಧನನ್ನೂ ದೇವರೆಂದು ಪೂಜಿಸುವ ಸಂಸ್ಕೃತಿ ನಮ್ಮದು! | 111–114 |
| 4 | ಎಲ್ಲರೆದೆಯಲ್ಲಿ ಒಂದು ಹಣತೆ ಹಚ್ಚಿದ ಬಾನು | 115–116 |

| | **ಭಾಗ – 10**<br>**ಶ್ರದ್ಧಾಂಜಲಿ** | |
|---|---|---|
| 1 | ಶ್ರೀ ಬೇಗಾನೆ ರಾಮಯ್ಯ, ವಿಧಾನಸಭಾ ಮಾಜಿ ಸದಸ್ಯರು | 119 |
| 2 | ಶ್ರೀ ಡೆರ್ರಿಕ್ ಎಂ.ಬಿ. ಘುಲಿನ್ ಘಾ, ವಿಧಾನಸಭಾ ಮಾಜಿ ಸದಸ್ಯರು | 120 |
| 3 | ಶ್ರೀ ಡೇವಿಡ್ ಸಿಮೆಯೋನ್ ಮಾಜಿ ಉಪ ಸಭಾಪತಿಗಳು | 121 |
| 4 | ಶ್ರೀ ಎನ್. ರಾಜಣ್ಣ, ವಿಧಾನಸಭೆ ಮಾಜಿ ಸದಸ್ಯರು | 122 |
| 5 | ಶ್ರೀ ಕಾಕಸೋ ಪಾಂಡುರಂಗ ಪಾಟೀಲ್, ವಿಧಾನಸಭಾ ಮಾಜಿ ಸದಸ್ಯರು | 123 |


ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪ್ರತಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ.

ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

# ಭಾಗ–1

# ವಿಧಾನ ಮಂಡಲ ಸುದ್ದಿಗಳು

# 1. ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು

## i. ವಿಧಾನಸೌಧಕ್ಕೆ ಶಾಶ್ವತ ವಿದ್ಯುತ್ ದೀಪಾಲಂಕಾರದ ಲೋಕಾರ್ಪಣೆ ಸಮಾರಂಭ

ದಿನಾಂಕ:06.04.2025ರಂದು ನಡೆದ ವಿಧಾನಸೌಧಕ್ಕೆ ಶಾಶ್ವತ ವಿದ್ಯುತ್ ದೀಪಾಲಂಕಾರದ ಲೋಕಾರ್ಪಣೆಯ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯರವರು, ಸನ್ಮಾನ್ಯ ಉಪಮುಖ್ಯಮಂತ್ರಿಯವರಾದ ಶ್ರೀ ಡಿ.ಕೆ.ಶಿವಕುಮಾರ್‌ರವರು, ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಫರೀದ್‌ರವರು, ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್‌ರವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಸದರಿ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಶ್ರೀ ಗೋವಿಂದರಾಜು ಹಾಗೂ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಸೀರ್ ಅಹಮದ್ ಅವರುಗಳು ಉಪಸ್ಥಿತರಿದ್ದರು.








## ii. ಗುರುವಂದನ ಕಾರ್ಯಕ್ರಮ

ದಿನಾಂಕ:10.04.2025ರಂದು ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ ದಂಪತಿಗಳು ದತ್ತು ಪಡೆದ ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆಯ 2005–06ನೇ ಸಾಲಿನ ವಿವಿಧ ತರಗತಿಗಳಿಂದ ಗುರುವಂದನ ಕಾರ್ಯಕ್ರಮಕ್ಕೆ ಹಾಗೂ ಶಾಲೆಯ ಬಯಲು ಜಾಗದಲ್ಲಿ ಆಟದ ಮೈದಾನದ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಪ್ರಸ್ತುತ ಶಾಲಾ ಶಿಕ್ಷಣದಲ್ಲಿ ಹುಟ್ಟಿದ ಊರು, ಹೆತ್ತವರ ಮಹತ್ವ, ಕಲಿತ ಶಾಲೆ, ಕಲಿಸಿದ ಗುರುಗಳು, ಉಪಕಾರ ಮಾಡಿದವರನ್ನು ಸ್ಮರಿಸುವಂತಹ ಈ ಐದು ಗುಣಗಳ ಮಹತ್ವದ ಅರಿವನ್ನು ವಿದ್ಯಾಲಯಗಳಲ್ಲಿ ಮೂಡಿಸಿದರೆ ಖಂಡಿತವಾಗಿಯೂ ಆ ಒಬ್ಬ ಉತ್ತಮ ನಾಗರಿಕನಾಗುತ್ತಾನೆ. ಈ ಜಗತ್ತಿನಲ್ಲಿ ತಂದೆ ತಾಯಿ ಕಲಿಸಿದ ಗುರುವಿಗಿಂತ ದೊಡ್ಡವರಾರು ಇಲ್ಲವೆಂದು ಮಾನ್ಯ ಸಭಾಪತಿಯವರು ಅಭಿಪ್ರಾಯಪಟ್ಟರು.








## iii. ಅಂಬೇಡ್ಕರ್ ಜನ್ಮದಿನೋತ್ಸವ ಸಮಾರಂಭ

ದಿನಾಂಕ:14.04.2025ರಂದು ಸಮಾಜ ಕಲ್ಯಾಣ ಇಲಾಖೆಯು ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆಯೋಜಿಸಿದ್ದ ಅಂಬೇಡ್ಕರ್ ಜನ್ಮದಿನೋತ್ಸವ ಸಮಾರಂಭದಲ್ಲಿ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಮಾನ್ಯ ಸಭಾಪತಿಯವರು, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪಮುಖ್ಯಮಂತ್ರಿಗಳು, ಹಾಗೂ ಶ್ರೀ ಹೆಚ್.ಸಿ. ಮಹಾದೇವಪ್ಪರವರು, ಸಮಾಜ ಕಲ್ಯಾಣ ಸಚಿವರು ಹಾಗೂ ಸಚಿವರು, ಶಾಸಕರು ಭಾಗವಹಿಸಿದ್ದರು.





## iv. ಮಸ್ಕತ್ ಗಡಿನಾಡ ಉತ್ಸವ

ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ, ಕಾಸರಗೋಡು, ಒಮಾನ್ ಘಟಕ ಮಸ್ಕತ್ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಕರ್ನಾಟಕ ಸರ್ಕಾರ ಮತ್ತು ಒಮಾನ್‌ನ ಎಲ್ಲಾ ಕನ್ನಡ ಪರ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ದಿನಾಂಕ:18.04.2025ರಂದು ಮಸ್ಕತ್‌ನ ಮಜಾನ್ ಹೈಟ್ಸ್ ಸಭಾಂಗಣದಲ್ಲಿ ನಡೆದ ಮಸ್ಕತ್ ಗಡಿನಾಡ ಉತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಸ್ಕತ್‌ಗೆ ಆಗಮಿಸಿದ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಕರ್ನಾಟಕ ವಿಧಾನಪರಿಷತ್ ಇವರನ್ನು ಮಸ್ಕತ್ ವಿಮಾನ ನಿಲ್ದಾಣದಲ್ಲಿ ಒಮಾನ್ ಇಂಡಿಯನ್ ಸೋಷಿಯಲ್ ಕ್ಲಬ್‌ನ ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ ಎಸ್.ಡಿ.ಟಿ.ಪ್ರಸಾದ್, ಮಸ್ಕತ್ ಕನ್ನಡ ಸಂಘದ ಅಧ್ಯಕ್ಷ ಮಂಜುನಾಥ ಸಂಗಟ್ಟಿ, ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಒಮಾನ್ ಘಟಕದ ಅಧ್ಯಕ್ಷ ಅಬೂಬಕರ್ ರೋಯಲ್ ಬೊಳ್ಳಾರ್ ಹಾಗೂ ಸಲಹಾ ಸಮಿತಿ ಸದಸ್ಯ ಶಿವಾನಂದ ಕೋಟಿಯಾನ್, ನ್ಯೂ ವೈಬ್ರೆಂಟ್ ಪಿಯು ಕಾಲೇಜ್ ಮೂಡಬಿದಿರೆಯ ನಿರ್ದೇಶಕ ಅಮರೇಶ ವಾಟಗಲ್, ಮುಂತಾದವರು ಸೇರಿ ಸ್ವಾಗತಿಸಿದರು. ಒಮಾನ ದೇಶ ಪ್ರವಾಸದಲ್ಲಿರುವ ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿಯವರು ಒಮಾನ್ ಮ್ಯಾನೇಜರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಯ ಕಚೇರಿಯಲ್ಲಿ ಅಧ್ಯಕ್ಷ ಶೈಖೈಝುಲ್ ಅಬ್ದುಲ್ಲ ಅಲ್ರವಾಸ್ರೊಂದಿಗೆ ಮಾತುಕತೆ ನಡೆಸಿದರು. ಹಿರಿಯ ಆರ್ಥಿಕ ತಜ್ಞ ಎನ್. ರಮಾನಂದ ಪ್ರಭು, ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಒಮಾನ ಘಟಕದ ಅಧ್ಯಕ್ಷ ಅಬೂಬಕರ್

ರೋಯಲ್ ಬೊಳ್ಳಾರ್, ಸಭಾಪತಿಗಳ ಆಪ್ತಕಾರ್ಯದರ್ಶಿ ಡಾ. ವಿಶ್ವನಾಥ್ ಮುಂತಾದವರು ಜೊತೆಗಿದ್ದರು.



## v. ಕಡಲ ಕೊರೆತ ಕುರಿತು ಸಭೆ

ದಿನಾಂಕ:28.04.2025ರಂದು ಸನ್ಮಾನ್ಯ ಸಭಾಧ್ಯಕ್ಷರು ಕಡಲ ಕೊರೆತ ಕುರಿತು ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯ ಕಾರ್ಯದರ್ಶಿ ಹಾಗೂ ಇತರೆ ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತಿರುವ ಸಂದರ್ಭ.





## vi. ಕೇರಳದ ಮುನ್ಸಿಪಲ್ ಅಧ್ಯಕ್ಷರುಗಳು ಹಾಗೂ ಸದಸ್ಯರುಗಳೊಂದಿಗೆ ಸಭೆ

ದಿನಾಂಕ:28.04.2025ರಂದು ಕೇರಳ ರಾಜ್ಯದ ವಿವಿಧ ಮುನ್ಸಿಪಲ್ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸನ್ಮಾನ್ಯ ಸಭಾಧ್ಯಕ್ಷರು ಭೇಟಿ ಮಾಡಿ ಸಭೆ ನಡೆಸಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡರು. ಸಭೆಯಲ್ಲಿ ಕ್ಯಾಪ್ಟನ್ ಗೋಪಿನಾಥ್ ಸಹ ಉಪಸ್ಥಿತರಿದ್ದರು.










## vii. ದ.ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿ ಉದ್ಘಾಟನೆ ಹಾಗೂ ಕಾಮಗಾರಿಗಳ ಸಭೆ

ದಿನಾಂಕ:08.05.2025ರಂದು ಸನ್ಮಾನ್ಯ ಸಭಾಧ್ಯಕ್ಷರು ಮತ್ತು ಸನ್ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್‌ರವರು, ದಿನಾಂಕ:16.05.2025ರಂದು ಸನ್ಮಾನ್ಯ ಮುಖ್ಯಮಂತ್ರಿಯವರು ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ನೀಡುವ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಉದ್ಘಾಟನೆ ಸೇರಿದಂತೆ ಇತರೆ ಕಾಮಗಾರಿಗಳಿಗೆ ಅಡಿಗಲ್ಲು ಹಾಗೂ ಪೂರ್ಣಗೊಂಡ ಕಾಮಗಾರಿಗಳ ಉದ್ಘಾಟನೆ ಕುರಿತು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ ಕಾರ್ಯದರ್ಶಿಯವರ ಉಪಸ್ಥಿತಿಯಲ್ಲಿ ದಕ್ಷಿಣ ಕನ್ನಡ

ಜಿಲ್ಲಾಧಿಕಾರಿ, ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾಪಂಚಾಯತ್ ಅವರುಗಳೊಂದಿಗೆ ಚರ್ಚಿಸುತ್ತಿರುವ ಸಂದರ್ಭ.





**viii. ಶಿಕ್ಷಣ ಇಲಾಖಾ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ**

ದಿನಾಂಕ:08.05.2025ರಂದು ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸನ್ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪರವರ ಉಪಸ್ಥಿತಿಯಲ್ಲಿ ಅನುದಾನಿತ ಮತ್ತು ಖಾಸಗಿ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷರು ಮತ್ತು ಇತರೆ ಪ್ರತಿನಿಧಿಗಳೊಂದಿಗೆ ನಡೆಸಿದ ಸಭೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಪದವಿ ಪೂರ್ವ ಶಿಕ್ಷಣದ ಆಯುಕ್ತರು ಹಾಗೂ ಇತರೆ ಅಧಿಕಾರಿಗಳು ಭಾಗವಹಿಸಿದ್ದರು.





**ix. ಸಾರ್ವಜನಿಕರಿಗೆ ವಿಧಾನ ಸೌಧ ವೀಕ್ಷಣೆಗೆ ಅನುಮತಿ ಹಾಗೂ ಪ್ರವೇಶ ಶುಲ್ಕದ ಬಗ್ಗೆ ಚರ್ಚೆ**

ಸನ್ಮಾನ್ಯ ಸಭಾಧ್ಯಕ್ಷರು, ರಜಾ ದಿನಗಳಂದು ಸಾರ್ವಜನಿಕರಿಗೆ ವಿಧಾನ ಸಭೆ ಸಭಾಂಗಣ ಸೇರಿದಂತೆ ವಿಧಾನಸೌಧ ವೀಕ್ಷಣೆಗೆ ಅನುಮತಿ ಹಾಗೂ ಸಾರ್ವಜನಿಕರಿಗೆ ಈ ಕುರಿತು ವಿಧಿಸಲಾಗುವ ಪ್ರವೇಶ ಶುಲ್ಕದ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಕಾರ್ಯದರ್ಶಿಯವರು, ಪ್ರವಾಸೋದ್ಯಮ

ಇಲಾಖೆ ಕಾರ್ಯದರ್ಶಿಯವರು, ಪೊಲೀಸ್ ಅಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವ ಸಂದರ್ಭ.



### x. ಗ್ರಂಥಾಲಯ ಸಮಿತಿ ಸಭೆ

ದಿನಾಂಕ:15.05.2025ರಂದು ವಿಧಾನ ಪರಿಷತ್ತಿನ ಸಭಾಪತಿಗಳು ಹಾಗೂ ವಿಧಾನಮಂಡಲ ಗ್ರಂಥಾಲಯ ಸಮಿತಿಯ ಅಧ್ಯಕ್ಷರಾದ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು ಸಮಿತಿಯ ಸದಸ್ಯರೊಂದಿಗೆ ಸಭೆ ನಡೆಸುತ್ತಿರುವ ಸಂದರ್ಭ.



### xi. ವಿಧಾನಸೌಧಕ್ಕೆ ಗೈಡೆಡ್ ಟೂರ್ ವ್ಯವಸ್ಥೆ ಮಾಡುವ ಕುರಿತು ಚರ್ಚೆ

ದಿನಾಂಕ:20.05.2025ರಂದು ಸನ್ಮಾನ್ಯ ಸಭಾಧ್ಯಕ್ಷರು ವಿಧಾನಸೌಧಕ್ಕೆ ಗೈಡೆಡ್ ಟೂರ್ ವ್ಯವಸ್ಥೆ ಮಾಡುವ ಕುರಿತು ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಮತ್ತು ಆಯುಕ್ತರು ಹಾಗೂ ಕರ್ನಾಟಕ

ರಾಜ್ಯ ಪ್ರವಾಸೋದ್ಯಮ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಡಾ॥ ರಾಜೇಂದ್ರ ಕೆ.ವಿ.ರವರು ಹಾಗೂ ಇತರೆ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವ ಸಂದರ್ಭ.





## xii. ಮಾನ್ಯ ಸಭಾಪತಿಗಳು ಮದುವೆ ಸಮಾರಂಭದಲ್ಲಿ ಭಾಗಿ

ದಿನಾಂಕ:25.05.2025ರಂದು ಬೆಂಗಳೂರಿನಲ್ಲಿ ನಡೆದ ಶ್ರೀ ಎಸ್.ಎಲ್. ಭೋಜೇಗೌಡರು, ಶಾಸಕರು, ಕರ್ನಾಟಕ ವಿಧಾನಪರಿಷತ್ತು ಇವರ ಮಗನ ಮದುವೆ ಆರತಕ್ಷತೆಯಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು ವಧು–ವರರಿಗೆ ಶುಭಾಶಯ ಕೋರಿದರು.



## xiii. ವಿಧಾನಸೌಧ ಮಾರ್ಗದರ್ಶಿ ಪ್ರವಾಸ ಯೋಜನೆ ಉದ್ಘಾಟನೆ

ದಿನಾಂಕ:25.05.2025ರಂದು ವಿಧಾನಸೌಧದ ಬಾಂಕ್ವೆಟ್ ಸಭಾಂಗಣದಲ್ಲಿ ಪ್ರವಾಸೋದ್ಯಮ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಕರ್ನಾಟಕ ವಿಧಾನಮಂಡಲದ ಸಹಭಾಗಿತ್ವದೊಂದಿಗೆ ವಿಧಾನಸೌಧ ಮಾರ್ಗದರ್ಶಿ ನಡಿಗೆ ಪ್ರವಾಸ(Vidhana Soudha Guided Walking Tour) ಕಾರ್ಯಕ್ರಮಕ್ಕೆ ಕರ್ನಾಟಕ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಗಳು ಉದ್ಘಾಟಿಸಿ, ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಾದ ಎಚ್.ಕೆ.ಪಾಟೀಲ್‌ರವರು, ಚಾಲನೆ ನೀಡುವುದರ ಮೂಲಕ ದೇಶದಲ್ಲಿ ವಿಧಾನಸೌಧ ನಿರ್ಮಾಣ ಆಗಿದ್ದು ಮೊದಲು ಕರ್ನಾಟಕದಲ್ಲೇ, ನಮ್ಮ ರಾಜ್ಯದ ಪ್ರಜಾಪ್ರಭುತ್ವ ನೆಲೆಗಳು 1881 ರಿಂದ ಆರಂಭವಾಗಿರುತ್ತದೆ. ರಾಜ್ಯದ ಈ ಪರಂಪರೆಯನ್ನು ಜನರಿಗೂ ಪರಿಚಯಿಸುವ ಉದ್ದೇಶದಿಂದ ವಿಧಾನಸೌಧ ಮಾರ್ಗದರ್ಶಿ ಪ್ರವಾಸ ಯೋಜನೆ ಆರಂಭಿಸಲಾಗಿದೆ ಎಂದು ತಿಳಿಸಿದರು.






## xiv. ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಭೆ

ದಿನಾಂಕ:21.03.2025ರಂದು ವಿಧಾನಸಭೆಯ ಅಧಿವೇಶನ ಸಂದರ್ಭದಲ್ಲಿ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ್ದ ಹಿನ್ನೆಲೆಯಲ್ಲಿ 18 ಶಾಸಕರನ್ನು 6 ತಿಂಗಳುಗಳ ಕಾಲ ಅಮಾನತ್ತುಗೊಳಿಸಿರುವ ಕುರಿತು ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿನಾಂಕ:25.05.2025ರಂದು ನಡೆದ ಸಭೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು, ಸನ್ಮಾನ್ಯ ಉಪ ಮುಖ್ಯಮಂತ್ರಿಯವರು, ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಸನ್ಮಾನ್ಯ ಉಪ ಸಭಾಧ್ಯಕ್ಷರು, ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಭಾಗವಹಿಸಿ ಚರ್ಚಿಸುತ್ತಿರುವ ಸಂದರ್ಭ.



## xv. ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಕಾರ್ಯಕ್ರಮ

ದಿನಾಂಕ:02.06.2025ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತ ಶ್ರೀಮತಿ ಬಾನು ಮುಷ್ತಾಕ್ ಹಾಗೂ ಶ್ರೀಮತಿ ದೀಪಾ ಭಾಸ್ತಿರವರಿಗೆ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ ಹಾಗೂ ಮಾನ್ಯ ಮುಖ್ಯಮಂತ್ರಿಗಳು ದೀಪ ಬೆಳಗಿಸುವ ಮೂಲಕ ಉದ್ಘಾಟನೆ ಮಾಡಿ ಶ್ರೀಮತಿ ಬಾನು ಮುಷ್ತಾಕ್ ಹಾಗೂ ಶ್ರೀಮತಿ ದೀಪಾ ಭಾಸ್ತಿರವರಿಗೆ ಅಭಿನಂದಿಸಿ ಸನ್ಮಾನಿಸಿದರು. ಈ ಕಾರ್ಯಕ್ರಮದಲ್ಲಿ ಸಚಿವರು ಹಾಗೂ ಅಧಿಕಾರಿ ವರ್ಗದವರು ಭಾಗವಹಿಸಿದ್ದರು.



## xvi. ಮಾನ್ಯ ಸಭಾಪತಿಗಳು ಮದುವೆ ಸಮಾರಂಭದಲ್ಲಿ ಭಾಗಿ

ದಿನಾಂಕ:08.06.2025ರಂದು ಬೆಂಗಳೂರಿನ ಅರಮನೆಯಲ್ಲಿ ನಡೆದ, ಮಾಜಿ ಮುಖ್ಯ ಮಂತ್ರಿಗಳು, ಶ್ರೀ ಬಿ.ಎಸ್.ಯಡಿಯೂರಪ್ಪರವರ ಮೊಮ್ಮಗನ ಮದುವೆ ಸಮಾರಂಭದಲ್ಲಿ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಉಪಸ್ಥಿತರಿದ್ದರು.



## xvii. ಮುಂಡರಗಿಯ “ಶರಣು ಸಮರ್ಪಣೆ” ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ದಿನಾಂಕ:11.06.2025ರಂದು ಮುಂಡರಗಿಯ ಅನ್ನದಾನೇಶ್ವರ ಕಲ್ಯಾಣಮಂಟಪದಲ್ಲಿ ಅವ್ವನನ್ನು ಕುರಿತು ನಡೆದ ವಿಶೇಷ ಶಿವಾನುಭವ “ಶರಣು ಸಮರ್ಪಣೆ” ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿಯವರು ಭಾಗವಹಿಸಿ, ತದನಂತರ ಗದಗಿನ ಜಿಲ್ಲಾ ಕಛೇರಿ ಆವರಣದಲ್ಲಿ ವಿಕಲಚೇತನರಿಗೆ ತ್ರಿಚಕ್ರವಾಹನ ವಿತರಿಸಲಾಯಿತು.







## xviii. ಪ್ರಾದೇಶಿಕ ಅಸಮತೋಲನಾ ಸಮಿತಿ ಸಭೆ

ದಿನಾಂಕ:12.06.2025ರಂದು ಮಾನ್ಯ ಸಭಾಪತಿಯವರ ಕಛೇರಿಯಲ್ಲಿ ಪ್ರಾದೇಶಿಕ ಅಸಮತೋಲನಾ ಕುರಿತು ಸಮಿತಿಯೊಂದಿಗೆ ಸಭೆ ನಡೆಸಿದ ಸಂದರ್ಭದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಸದಸ್ಯರುಗಳಾದ, ಆರ್ಥಿಕ ತಜ್ಞರು ಹಾಗೂ ಅಧ್ಯಕ್ಷರಾದ ಪ್ರೊ. ಗೋವಿಂದರಾವ್,

ಸದಸ್ಯರಾದ, ಶ್ರೀ ಎಲ್.ಕೆ. ಅತೀಕ್ ಐ.ಎ.ಎಸ್, ಸದಸ್ಯ ಕಾರ್ಯದರ್ಶಿಯವರಾದ, ಡಾ:ವಿಶಾಲ್ .ಆರ್ ಐ.ಎ.ಎಸ್., ಹಾಗೂ ಸರ್ಕಾರದ ಕಾರ್ಯದರ್ಶಿ(ವಿತ್ತಿಯ ಸುಧಾರಣೆ) ಆರ್ಥಿಕ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.







## xix. ಸಾಕ್ಷ್ಯ ಚಿತ್ರ

ದಿನಾಂಕ:16.06.2025ರಂದು ಅನ್ನಪೂರ್ಣ ಕ್ರಿಯೇಶನ್ಸ್ ಸಂಸ್ಥೆಯು ನಿರ್ಮಿಸಿರುವ ಸೋಲಿಲ್ಲದ ಸರದಾರ ಸಾಕ್ಷ್ಯ ಚಿತ್ರವನ್ನು(ಭಾಗ-2) ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ಮಧುಬಂಗಾರಪ್ಪ ಅವರು ಬಳ್ಳಾರಿ ನಗರದಲ್ಲಿ ಲೋಕಾರ್ಪಣೆಗೊಳಿಸಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ತಿನ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಮತ್ತಿತರರು ಉಪಸ್ಥಿತರಿದ್ದರು.



## xx. ಸನ್ಮಾನ್ಯ ಸಭಾಧ್ಯಕ್ಷರು ಮಲೇಶಿಯಾ ಪ್ರವಾಸ

ಕರ್ನಾಟಕ ವಿಧಾನ ಸಭೆಯ ಸಭಾಧ್ಯಕ್ಷರು ಮತ್ತು ಕಾಮನ್‌ವೆಲ್ತ್ ಸಂಸದೀಯ ಸಂಘದ ಕರ್ನಾಟಕ ಶಾಖೆಯ ಜಂಟಿ ಅಧ್ಯಕ್ಷರಾದ ಶ್ರೀ ಯು.ಟಿ.ಖಾದರ್‌ರವರು ದಿನಾಂಕ:17.06.2025ರಂದು ಮಲೇಶಿಯಾಕ್ಕೆ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಮಲೇಶಿಯಾ ದೇಶದ ಕೌಲಾಲಾಂಪುರದಲ್ಲಿರುವ ಸಂಸತ್ ಭವನದಲ್ಲಿ House of Representatives ಸಭಾಧ್ಯಕ್ಷರು ಮತ್ತು ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ (Diwan Rakyat), ಜಂಟಿ ಅಧ್ಯಕ್ಷರಾದ H.E.Tan Sri Dato, Dr Johari Bin Abdul ಅವರನ್ನು ಭೇಟಿ ಮಾಡಿ, ಅವರೊಂದಿಗೆ ಸಂಸದೀಯ ವ್ಯವಹಾರಗಳು ಹಾಗೂ ಪ್ರಜಾಪ್ರಭುತ್ವ ತತ್ವಗಳ ಬಗ್ಗೆ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡರು. ಅಲ್ಲದೆ ಭವಿಷ್ಯದಲ್ಲಿ ಕರ್ನಾಟಕ ಹಾಗೂ ಮಲೇಶಿಯಾದ ರಾಜಕೀಯ, ಸಂಸದೀಯ ವ್ಯವಹಾರಗಳು ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಕಾಯ್ದುಕೊಳ್ಳುವ ಬಗ್ಗೆ ಸಹ ಚರ್ಚಿಸಿದರು.ಈ ಸಂದರ್ಭದಲ್ಲಿ ಸಂಬಂಧಪಟ್ಟ ಇತರೆ ಅಧಿಕಾರಿಗಳು ಹಾಜರಿದ್ದರು.










## xxi. ಮಾನ್ಯ ಸಭಾಪತಿಯವರು – ಗೌರವಾನ್ವಿತ ರಾಜ್ಯಪಾಲರ ಭೇಟಿ

ದಿನಾಂಕ:19.06.2025ರಂದು ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ರಾಜಭವನದಲ್ಲಿ ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರ

ಆಪ್ತ ಕಾರ್ಯದರ್ಶಿಯಾದ ಡಾ.ಜಿ.ವಿಶ್ವನಾಥ ಹಾಗೂ ವಿಶೇಷ ಕರ್ತವ್ಯಾಧಿಕಾರಿಯಾದ ಡಾ.ಮಹೇಶ್ ವಾಳ್ವೇಕರ್‌ರವರು ಉಪಸ್ಥಿತರಿದ್ದರು.






## xxii. ದೈಹಿಕ ಶಿಕ್ಷಕರ ಸಭೆ

ದಿನಾಂಕ:20.06.2025ರಂದು ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ತಮ್ಮ ಕೊಠಡಿಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರೊಂದಿಗೆ ದೈಹಿಕ ಶಿಕ್ಷಕರಿಗೆ ಆಗುತ್ತಿರುವ ತೊಂದರೆಯ ಬಗ್ಗೆ ಸಭೆ ನಡೆಸಿದರು. ಈ ಸಂದರ್ಭದಲ್ಲಿ ವಿಶೇಷ ಕರ್ತವ್ಯಾಧಿಕಾರಿಯಾದ ಡಾ.ಮಹೇಶ್ ವಾಳ್ವೇಕರರವರು ಸಭೆಗೆ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸಿದರು.



## xxiii. 75ನೇ ಜನ್ಮದಿನದ ಅಮೃತ ಮಹೋತ್ಸವ

ದಿನಾಂಕ:21.06.2025ರಂದು ತುಮಕೂರಿನಲ್ಲಿ ನಡೆದ ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣರವರ 75ನೇ ಜನ್ಮದಿನದ ಅಮೃತ ಮಹೋತ್ಸವ ಮತ್ತು ಅಭಿನಂದನಾ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು ಭಾಗವಹಿಸಿ, ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣರವರಿಗೆ ಜನ್ಮದಿನದ ಶುಭಾಶಯ ಕೋರಿದರು. ಈ ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರುಗಳು ಉಪಸ್ಥಿತರಿದ್ದರು.







## xxiv. ಮಾಜಿ ಮಂತ್ರಿಗಳಾದ ಶ್ರೀ ಕೆ.ಹೆಚ್ ಪಾಟೀಲ್‌ರವರ ಮೂರ್ತಿ ಅನಾವರಣ

ದಿನಾಂಕ:22.06.2025ರಂದು ಕೊಪ್ಪಳ ಜಿಲ್ಲೆಯ ಶಿರೂರ ಪುನರ್ ವಸತಿ ಗ್ರಾಮದಲ್ಲಿ ದಿವಂಗತ ಶ್ರೀಯುತ ಕೆ.ಹೆಚ್. ಪಾಟೀಲ್ ಮಾಜಿ ಮಂತ್ರಿಗಳು ಇವರ ಮೂರ್ತಿ ಅನಾವರಣ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು, ಮಾನ್ಯ ಕಾನೂನು ಸಚಿವರಾದ

ಶ್ರೀ ಎಚ್.ಕೆ.ಪಾಟೀಲ್‌ರವರು ಹಾಗೂ ಗೃಹ ಸಚಿವರಾದ ಡಾ.ಜಿ.ಪರಮೇಶ್ವರ್‌ರವರೊಂದಿಗೆ ಕಾರ್ಯಕ್ರಮ ಉದ್ಘಾಟಿಸಿದರು.





**xxv. ಉಣಕಲ್ ಕೆರೆಗೆ ಬಾಗಿನ ಅರ್ಪಣೆ**

ದಿನಾಂಕ:27.06.2025ರಂದು ಮಳೆಯಿಂದ ತುಂಬಿ ಹರಿಯುತ್ತಿರುವ ಹುಬ್ಬಳ್ಳಿಯ ಉಣಕಲ್ ಕೆರೆಗೆ ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಬಾಗಿನ ಅರ್ಪಿಸುತ್ತಿರುವ ಸಂದರ್ಭ.





## xxvi. ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಉತ್ಸವ

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ದಿನಾಂಕ:27.06.25ರಂದು ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಉತ್ಸವದ ಅಂಗವಾಗಿ ಧಾರವಾಡ ಜಿಲ್ಲಾಡಳಿತದಿಂದ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗೌರವನಮನ ಸಲ್ಲಿಸಿ ಮಾತನಾಡಿದ ಅವರು, ಹಂಪಿಯ ವೈಭವ ಕಂಡು ಬೆರಗಾಗಿದ್ದ ಕೆಂಪೇಗೌಡರು ದೂರದೃಷ್ಟಿಯಿಂದ ನಿರ್ಮಿಸಿರುವ ಬೆಂಗಳೂರು ನಗರ ಇಂದು ಬಹುವಾಗಿ ಬೆಳೆದು ಜಾಗತಿಕ ನಕ್ಷೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಕೆಂಪೇಗೌಡರು ನಿರ್ಮಿಸಿರುವ ಕೆರೆಗಳು, ದೇವಾಲಯಗಳು, ಕೋಟೆಕೊತ್ತಲಗಳು ಇಂದಿಗೂ ನಮ್ಮ ಕಣ್ಣ ಮುಂದಿವೆ. ಬೆಂದಕಾಳೂರು ಎಂಬ ನಾಮದಿಂದ ಕರೆಯುತ್ತಿದ್ದ ನಗರ ಇಂದು ಬೆಂಗಳೂರು ನಗರವಾಗಿ ರೂಪುಗೊಂಡಿದ್ದು, ಕೆಂಪೇಗೌಡರ ದೂರದೃಷ್ಟಿಯ ಫಲದ ಬಗ್ಗೆ ಮಾತನಾಡಿದರು.







## xxvii. 11ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ ಭಾರತ ವಲಯದ ಸಮ್ಮೇಳನ – 2025

ಸೆಪ್ಟಂಬರ್ 11, 12, ಮತ್ತು 13ನೇ ದಿನಾಂಕಗಳಂದು ಕರ್ನಾಟಕ ವಿಧಾನಮಂಡಲದ ವತಿಯಿಂದ ಆಯೋಜಿಸಲ್ಪಡುವ 11ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ ಭಾರತ ವಲಯದ ಸಮ್ಮೇಳನದ ಮುನ್ನ ಮಾನ್ಯ ಸಭಾಧ್ಯಕ್ಷರು ಸನ್ಮಾನ್ಯ ಲೋಕಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾ ಅವರನ್ನು ಭೇಟಿ ಮಾಡಿದರು.








ದಿನಾಂಕ:25.06.2025ರಂದು ಕರ್ನಾಟಕ ವಿಧಾನ ಸಭಾಧ್ಯಕ್ಷರಾದ ಯು.ಟಿ. ಖಾದರ್ ಫರೀದ್ ಅವರು ಲೋಕಸಭಾಧ್ಯಕ್ಷರಾದ ಶ್ರೀ ಓಂ.ಬಿರ್ಲಾ ಅವರನ್ನು ನವದೆಹಲಿಯಲ್ಲಿ ಭೇಟಿ ಮಾಡಿ 11ನೇ ಕಾಮನ್‌ವೆಲ್ತ್ ಸಂಸದೀಯ ಸಂಘ ಭಾರತ ವಲಯದ ಸಮ್ಮೇಳನವನ್ನು 2025ರ ಸೆಪ್ಟೆಂಬರ್ 11, 12 ಮತ್ತು 13ರಂದು ನಡೆಸಲು ಕರ್ನಾಟಕವನ್ನು ಆಯ್ಕೆ ಮಾಡಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು. ಸಮ್ಮೇಳನದಲ್ಲಿ ಭಾರತದ ಎಲ್ಲಾ ರಾಜ್ಯಗಳ ಪೀಠಾಸೀನಾಧಿಕಾರಗಳು ಭಾಗವಹಿಸುವುದಲ್ಲದೇ ಪ್ರಪ್ರಥಮ ಬಾರಿಗೆ ಅಂತರರಾಷ್ಟ್ರೀಯ ಮಟ್ಟದ ಕಾಮನ್‌ವೆಲ್ತ್ ದೇಶಗಳ ಪೀಠಾಸೀನಾಧಿಕಾರಿಗಳನ್ನು ಆಹ್ವಾನಿಸುವ ಕುರಿತು ಮತ್ತು ಸಮ್ಮೇಳನದಲ್ಲಿ ಚರ್ಚಿಸಬೇಕಾದ ವಿಷಯಗಳ ಕುರಿತು ಸಹ ಸಮಾಲೋಚನೆ ನಡೆಸಿದರು. ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ಸೆಪ್ಟೆಂಬರ್ 11, 12, 13 2025ರಂದು ವಿಧಾನಸೌಧದ ಬೃಹತ್ ಮೆಟ್ಟಲುಗಳ ಮೇಲೆ ಹಮ್ಮಿಕೊಳ್ಳುವ ಬಗ್ಗೆ ಹಾಗೂ ಕರ್ನಾಟಕ ವಿಧಾನಸಭೆಯಲ್ಲಿ ಇತ್ತೀಚೆಗೆ ಜಾರಿಗೆ ತಂದಿರುವ ಅನೇಕ ಪ್ರಗತಿಪರ ಬದಲಾವಣೆಗಳನ್ನು ಸಹ ಲೋಕಸಭಾಧ್ಯಕ್ಷರ ಗಮನಕ್ಕೆ ತಂದರು. ಸನ್ಮಾನ್ಯ ಸಭಾಧ್ಯಕ್ಷರು ಈ ಸಂದರ್ಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರೊಂದಿಗೆ ಚರ್ಚಿಸುತ್ತಾ, ಕರ್ನಾಟಕ ಇತಿಹಾಸದಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನವನ್ನು ಆಯೋಜಿಸಲು ಸಂಪೂರ್ಣ ಸಹಕಾರವನ್ನು ಕೋರಿದರು. ಈ ಸಂದರ್ಭದಲ್ಲಿ ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಶ್ರೀಮತಿ ಎಂ.ಕೆ.ವಿಶಾಲಾಕ್ಷಿ, ಲೋಕಸಭಾ ಸಚಿವಾಲಯದ ಅಧಿಕಾರಿಗಳು ಹಾಜರಿದ್ದರು.

### xxviii. ಭಾರತ ವಲಯದ ಜೋನ್–IIರ ಸಮ್ಮೇಳನ

ದಿನಾಂಕ:30.06.2025 ಮತ್ತು 01.07.2025ರ ದಿನಗಳಂದು ಹಿಮಾಚಲ ಪ್ರದೇಶದ ಧರ್ಮಶಾಲಾ (Dharam Shala) ತಪೋವನದಲ್ಲಿ ನಡೆದ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್(CPA), ಭಾರತ ವಲಯದ ಜೋನ್–IIರ ಸಮ್ಮೇಳನದಲ್ಲಿ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ. ಖಾದರ್ ಫರೀದ್ ಅವರು ಹಿಮಾಚಲ ಪ್ರದೇಶದ ಸಭಾಧ್ಯಕ್ಷರಾದ ಶ್ರೀ ಕುಲ್‌ದೀಪ್ ಸಿಂಗ್ ಪಠಾನಿಯಾ ಅವರ ಆಹ್ವಾನದ ಮೇರೆಗೆ ಭಾಗವಹಿಸಿದರು.

ಹಿಮಾಚಲ ಪ್ರದೇಶದ ಧರ್ಮಶಾಲಾ ತಪೋವನದಲ್ಲಿ ನಡೆದ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್ (CPA), ಭಾರತ ವಲಯ ಜೋನ್ II ರ ವಾರ್ಷಿಕ ಸಮ್ಮೇಳನದಲ್ಲಿ ಭಾಗವಹಿಸಲು ಆಗಮಿಸಿದ ಸನ್ಮಾನ್ಯ ಸಭಾಧ್ಯಕ್ಷರನ್ನು ಗೌರವಪೂರಕವಾಗಿ ಬರಮಾಡಿಕೊಳ್ಳುತ್ತಿರುವ ಸಂದರ್ಭ.









ಸನ್ಮಾನ್ಯ ಸಭಾಧ್ಯಕ್ಷರು ಸಮ್ಮೇಳನದಲ್ಲಿ ಭಾಗವಹಿಸಿದ ಸಮ್ಮೇಳನದ ಅಧ್ಯಕ್ಷರಾದ ಸನ್ಮಾನ್ಯ ಲೋಕ ಸಭಾಧ್ಯಕ್ಷರು ಹಾಗೂ ಇತರೆ ಪ್ರತಿನಿಧಿಗಳೊಂದಿಗೆ ಸಮ್ಮೇಳನದಲ್ಲಿ ಈ ಕೆಳಕಂಡ ವಿಷಯಗಳ ಮೇಲೆ ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

## 1. Role of Legislatures in Managing the State Resources vis-à-vis Development of the State.

**ರಾಜ್ಯ ಸಂಪತ್ತುಗಳ ನಿರ್ವಹಣೆ ಹಾಗೂ ರಾಜ್ಯದ ಅಭಿವೃದ್ಧಿಯಲ್ಲಿ ಶಾಸನಮಂಡಳಿಗಳ ಪಾತ್ರ.**

**Sub:- "Role of Legislatures in Managing the State Resources vis-à-vis Development of the State".**

*****



Hon'ble Speaker, Lok Sabha /President of the CPA India Branch Sri Om Birla ji, Sri Kuldeep Singh Pathania ji, Speaker Himachal Pradesh Assembly, Respected Presiding Officers and one and all gathered here, first of all I thank Sri Kuldeep Singh Pathania ji for extending invitation to participate in this annual conference of the CPA India region Zone-2 even though our Karnataka Branch of CPA is in Zone-8. I also thank the Hon'ble Speaker Lok Sabha and President of CPA India Branch for having created Zones so as to enhance the activities of Commonwealth Parliamentary Association by conducting annual conferences like this and having provided an opportunity to exchange our views on the subjects of mutual interest. Today, I stand before you to address one of the most debated and constitutionally complex topics of our time. "**Role of Legislatures in Managing the State Resources vis-à-vis Development of the State**".

We gather here not only as lawmakers, administrators, or citizens but as stewards of a collective vision for our state's growth, prosperity, and justice. And in that journey, the role of legislatures is both foundational and transformative.

You all are aware of that the State Legislature and Executive Functions has to go hand in hand for the welfare of the Development of the State.

We live in an era where the aspirations of citizens are rising, resources are finite, and accountability is non-negotiable. Against this backdrop, the legislature, as the cornerstone of democratic governance, plays a critical role in ensuring that state resources are managed prudently and directed effectively toward the development and welfare of the people.

Legislature has evolved immensely with the passage of time. Legislative activity is closely associated with the growing modernisation and day today needs of the society, which aims to end poverty, build peaceful societies, and promote prosperity and people's well being while protecting the environment for current and future generations.

**1. The Legislature as the Guardian of Public Resources**

At its core, the legislature holds the power of the purse. This means that no funds can be raised or spent without legislative approval. The annual state budget is the primary funding instrument to use direct resources towards implementation of policies and programmes of the State Government. It is through annual budgets, appropriation bills, and supplementary grants that legislatures shape the fiscal direction of the state.

Legislators must ensure that every rupee allocated is aligned with the broader developmental goals whether it be infrastructure, education, healthcare, agriculture, or technology. It is not merely about sanctioning expenditures, but about making value based decisions that reflect the needs and priorities of the people.

One of the most challenging parts of budget oversight is tracking where the money was spent and what impact it had on people's lives, for good or for bad. While audit institutions can assist with assessing whether funding was spent in accordance with laws and regulations, performance audits are less common. Through constant vigil and making use of the audit institutions, legislative bodies can excise good control over expenditure. Information and communication technologies are increasingly being used to assist with budget oversight and accountability, including parliamentary oversight.

The key question for the Parliament/Legislature to consider is whether budget processes ensure that the budget really delivers outcomes within the developmental framework leaving no one behind and targeting the most marginalized and excluded groups.

**2. Oversight and Accountability Mechanism.**

Beyond budgeting, the legislature performs a vital oversight function through Committee system.

This is not an act of micro management but a democratic obligation to ensure that taxpayer money is not lost to inefficiency, misdirection, or corruption. Legislatures must actively monitor whether developmental schemes are reaching the grassroots and whether outcomes are matching intentions.

One of the most important duties of parliamentarians whether as members of the government, opposition or while non-aligned is overseeing whether the executive branch delivers expenditures, law and programmes to the population in an efficient effective and accountable way. To this end Parliaments/Legislatures have strong powers of inquiry, interrogation and oversight by discussion and by the committee system.

**3. Policy Formulation and Law-Making for Inclusive Growth.**

The legislature is the arena where laws are crafted and refined laws that determine land use, industrial growth, environmental sustainability, natural resource extraction, and more. Through debate, consultation, and public input, legislators shape policies that influence investment, employment, and equitable access to resources.

Effective legislative engagement ensures that development is not only rapid but also inclusive reaching the marginalized, respecting local cultures, and preserving ecological balance.

Legislators should rise above party lines & must hold the executive accountable for the implementation of sustainable development policies.

**4. Representation of People's Aspirations**

Each legislator is a bridge between the people and the state. In managing resources, it is essential that legislatures reflect regional disparities, local grievances, and future aspirations. What may be a priority in a tribal region may differ vastly from an urban centre. Through motions, questions, and constituency engagements, legislators can channel these voices into actionable development agendas.

**5. Promoting Transparency and Civic Engagement**

The legislature also has a duty to foster transparency and public participation. Open budget sessions, live telecasts of proceedings, public hearings, and legislative committees allow citizens to be informed and involved in how resources are allocated and used. This builds trust in institutions and strengthens democratic resilience.

**Challenges and Opportunities**

As we navigate the complexities of the 21st century, legislatures face numerous challenges and opportunities. Some of the key issues that require attention include:

- Ensuring that development is inclusive, sustainable, and equitable
- Managing the interface between economic growth and environmental protection
- Strengthening institutions and promoting good governance
- Enhancing transparency, accountability, and citizen participation
- Leveraging technology to improve legislative processes and outcomes

**Conclusion**

Let us remember: legislatures are not merely institutions of law they are institutions of hope, aspiration, and progress. They are entrusted with the sacred task of transforming limited resources into limitless opportunity.

In conclusion, legislatures occupy a pivotal position in the governance architecture, transforming limited resources into boundless opportunities for growth, development, and social progress. As we move forward, let us reaffirm our commitment to vigilant oversight, visionary policymaking, and virtuous leadership.

Let us reaffirm our resolve to uphold the principles of transparency, equity, and development with integrity. Let us be mindful that history will judge us not just by the laws we pass, but by the lives we transform.

**Thank you One and All,**

**JAI HIND,**

**JAI KARNATAKA.**

## 2. Provisions as to Disqualification on Grounds of Defection under 10th Schedule of the Article 102(2) & 191(2).

**"ಭಾರತ ಸಂವಿಧಾನದ ಕಲಂ 102(2) ಮತ್ತು 191(2) ಅನ್ವಯ 10ನೇ ಅನುಸೂಚಿಯಡಿಯಲ್ಲಿ ಪಕ್ಷಾಂತರ ಕಾರಣದಿಂದ ಉಂಟಾಗುವ ಅನರ್ಹತೆ ವಿಧಿಸುವ ಪಡಿತರ ಅವಧಾನಗಳು."**

**ಮತ್ತು**

## Usage of AI (Artificial Intelligence) in Legislatures.

**ವಿಧಾನಮಂಡಲಗಳ ಕಾರ್ಯಪದ್ಧತಿಗಳಲ್ಲಿ ಕೃತಕ ಬುದ್ಧಿಮತ್ತೆ (AI) ಬಳಸುವಿಕೆ ಕುರಿತು.**

**Sub:- Provisions as to Disqualification on Grounds of Defection under the Tenth Schedule of the Constitution of India, read with Articles 102(2) and 191(2).**

*****

Hon'ble Speaker, Lok Sabha /President of the CPA India Branch Sri Om Birla ji, Sri Kuldeep Singh Pathania, Speaker Himachal Pradesh Assembly, Respected Presiding Officers and one and all gathered here, first of all I thank Sri Kuldeep Singh Pathania ji for extending invitation to participate in this annual conference of the CPA India region Zone-2 even though our Karnataka Branch of CPA is in Zone-8. I also thank the Hon'ble Speaker Lok Sabha and President of CPA India Branch for having created Zones so as to enhance the activities of Commonwealth Parliamentary Association by conducting annual conferences like this and having provided an opportunity to exchange our views on the subjects of mutual interest. Today, I stand before you to address one of the most debated and constitutionally complex topics of our time. "Provisions as to Disqualification on Grounds of Defection under the Tenth Schedule of the Constitution of India ,read with Articles 102(2) and 191(2)".

- The evil of Political defections was of great concern of all political parties and it was also a national concern. Hence to combat such an evil, constitution (Fifty Second Amendment) Act 1985 has been brought into force with effect from 01/03/1985. This was brought with an intention of cleaning public life by imposing disqualification in case of defection of elected members from one party to the other. The object of this act was partially achieved and the law has seen deficiencies and loopholes in it. And those were questioned on political and constitutional grounds and felt that in the above act the problems like split in party, merger of party and parties, outside activities of the legislators should be solved. Accordingly after detailed discussion and opinion and also recommendations of the Committee on Electoral Reforms (Dinesh Goswami Committee), the Constitution (Ninety First Amendment) Act-2003, has strengthened the Tenth Schedule of the Constitution by omitting the paragraph 3 of the Tenth Schedule which claims exemption from disqualification in case of splits.

- This Constitution (Ninety first Amendment) Act 2003, which has omitted the provisions regarding split from the 10$^{th}$ Schedule, has also effectively put an end to the unhealthy practice of engineering split for facilitating backdoor merger with another party on the

strength of one-third members of a legislature party instead of the required two-third members. Now, we are all aware that the requirement for effecting a merger has really become stringent since it is not easy to garner support of two-third members as required under the provisions of Para 4 of Tenth Schedule.

- Even after the enactment of the Constitution (Ninty-first Amendment) Act, 2003, there are still some grey areas in the Anti-defection Law relating to the status of expelled members, interpretation of the term 'voluntarily' giving up membership of party.

- In this regard here, I quote the case of our Karnataka Legislative Assembly where 17 members of Karnataka Legislative Assembly have resigned to their membership in the Assembly, later they have been disqualified under the Tenth Schedule of the Constitution, by rejecting their resignation since, the resignations, were not voluntary or genuine.

In this regard the Hon’ble Supreme Court while disposing the above said writ petition (Civil) 992 etc of 2019 against the orders of then, Hon’ble Speaker of the Karnataka Legislative Assembly held that **“The Speaker can reject a resignation only if the inquiry demonstrates that it is not “voluntary” or “genuine”. The inquiry should be limited to ascertaining if the member intends to relinquish his membership out of his free will. Once it is demonstrated that a member is willing to resign out of his free will, the Speaker has no option but to accept the resignation. It is constitutionally impermissible for the Speaker to take into account any other extraneous factors while considering the resignation. The satisfaction of the Speaker is subject to judicial review”**.

In the above case it was also held that **“Disqualification relates back to the date when the act of defection takes place. Factum and taint of disqualification does not vaporize by tendering a resignation letter to the Speaker. A pending or impending disqualification action does not become in fructuous by submission of the resignation letter, when act(s) of disqualification have arisen prior to the member’s resignation letter.**”

Here I place the following facts before this august body of presiding officers that once the Speaker receive the letter of resignation personally or either by post or through someone else, then the Speaker has no option but to accept the resignation, after following due procedure and I also place the fact that once the Hon’ble Member submits the resignation, whatever the petitions under Tenth Schedule pending before him becomes in fructuous. Therefore, I request this body of presiding officers to come to a decision in the matter whether an Anti-defection petition becomes in fructuous or not, after the acceptance of the resignation of the member by the Speaker.

- Grey area in the Antidefection law relating to the status of expelled members. It is the fact that the Constitution (Fifty – Second Amendment) Bill, introduced in Lok Sabha on January 24, 1985 which sought to incorporate Tenth Schedule to the Constitution (Anti Defection Law), also provided for expulsion from political party as one of the grounds for

disqualification from membership of the House. However, the said provision was excluded. In this context I quote the observations made by the Supreme Court of India in G.Vishwanathan Vs Speaker, Tamil Nadu Legislative Assembly and and Azhagu Thirunavakkarasu Vs. Speaker, Tamil Nadu Legislative Assembly cases [(1996) 2 Supreme Court Cases 353]. [1996 AIR 1060]

## 3. Usage of AI (Artificial Intelligence) in Legislatures.

## ವಿಧಾನಮಂಡಲಗಳ ಕಾರ್ಯಪದ್ಧತಿಗಳಲ್ಲಿ ಕೃತಕ ಬುದ್ಧಿಮತ್ತೆ (AI) ಬಳಸುವಿಕೆ ಕುರಿತು.

## "Usage of AI (Artificial Intelligence) in Legislatures".

Artificial Intelligence (Al) refers to the simulation of human intelligence in machines that are programmed to think and learn like humans. This includes capabilities like problem solving, learning, and decision making. Al systems can be designed to perform tasks that typically require human intelligence, such as understanding and translating language, analyzing data, making recommendations, and more.

As I know, Several Indian states are actively integrating Artificial Intelligence (AI) across various sectors to improve public services, enhance governance, and boost economic growth. Karnataka is emerging as a multi-sector Al hub, while Maharashtra is focusing on semiconductor manufacturing and innovation. Telangana and Tamil Nadu are pioneering Al-driven smart cities. Other states like Punjab, Haryana, Delhi, and Kerala are leveraging Al for public safety, disaster management, and education.

As a speaker of Karnataka Legislative Assembly I have installed AI Cameras to ensure accountability among elected representatives from July 2024. These AI Cameras record the arrival, exit time of MLAs and duration of their presence in the Assembly. This initiative is part of the effort to improve attendance of legislators and their participation during the session. I request this august body of presiding officers to discuss the usage of AI in different areas of our Parliamentary Functioning. With these words I conclude by once again thanking Sri Kuldeep Singh Pathania ji, Hon'ble Speaker, Himachal Pradesh for extending invitation and his exemplary hospitality and I thank the Hon'ble Speaker, Lok Sabha for his able guidance and i thank one and all.

**Jai Hind,**

**Jai Karnataka.**

## 2. BJP may move a court against MLAs' suspension

The face-off between Assembly speaker UT Khader and the opposition BJP is set to intensify, with 18 suspended BJP MLAS mulling legal action if their six-month suspension is not revoked. Citing a 2021 verdict by the Bombay High Court that quashed the suspension of 12 MLAs, the BJP legislators are exploring judicial recourse, even as they hope to resolve the issue within the House.

A BJP delegation, led by opposition leader R Ashoka, was slated to meet the speaker on dated:18.04.2025 to appeal for revocation of the suspension. However, the meeting was deferred to dated:21.04.2025 due to the Good Friday holiday. "While moving the court is an option, we want to exercise restraint as our intention is to avoid a conflict between the legislature and judiciary. But, the onus is now on the speaker. If he does not oblige to withdraw the suspension order Monday, then we will be left with no option but to petition to the state high court," said Doddanagouda Patil, BJP chief whip and one of the suspended MLAs.

The suspension was announced on the final day of the budget session on March 21, which saw the passage of several contentious bills, including one proposing 4% reservation for Muslims in civil contracts. The announcement came amid up-roar in the House following a 'honey trap' controversy triggered by cooperation minister K N Rajanna, who alleged involvement of colleagues across party lines in a conspiracy against him. BJP has taken objections not only to the suspension but also the broader restrictions imposed on them. The MLAs have been barred from attending standing committee meetings and even entering assembly premises.

"This is an unfortunate situation. While the opposition members are not attending the meetings, the move amounts to preventing the system from addressing the people's problems," said senior BJP MLA and former law minister S Sureshkumar. The situation has impacted the functioning of 15 standing committees, including the public accounts committee; traditionally chaired by an opposition member Khader has maintained that the suspension was not a unilateral decision.

"This particular reason has complicated the matter, Since the Speaker has only announced the suspension of the MLAs after the House passed the resolution moved by law and parliamentary affairs minister HK Patil, it takes a long procedure of reconvening the assembly and passing another resolution to revoke the suspension order. The speaker alone cannot take the decision, going by the provision of Rule 348 of the business of the House," a senior parliamentary affairs department official said.

But the BJP contests this interpretation. "The speaker has suspended us for six months which may be applicable for the subsequent session including the monsoon session. This is illegal. More so, the assembly is to debate and address the people's issues and both the govt and the Speaker should think in the interest of the public and revoke the suspension rather than giving lame excuses," said CN Ashwath Narayan, a suspended senior BJP MLA.

**Courtesy:**Times of India, dated:19.04.2025.

## 3. ಬಿಜಿಸಿಇ ಬೈಕ್ ರ್‍ಯಾಲಿಗೆ ಖಾದರ್ ಚಾಲನೆ

'ಭಾರತ್ ಗ್ಲೋಬಲ್ ಕಲ್ಚರಲ್ ಎಕ್ಸ್‌ಪೋ–2026'ಕ್ಕೆ (ಬಿಜಿಸಿಇ) ಪೂರಕವಾಗಿ ಸಾಂಸ್ಕೃತಿಕ ಏಕತೆ, ಅವಿಷ್ಕಾರ ಹಾಗೂ ಬಿಜಿಸಿಇ ಕುರಿತು ಪ್ರಚುರಪಡಿಸಲು ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಬಿಜಿಸಿಇ–2025 ಬೈಕ್ ರ್‍ಯಾಲಿಗೆ' ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್. ಈ. ಸುಧೀಂದ್ರ ಚಾಲನೆ ನೀಡಿದರು.

ಜಾಗತಿಕ ಮಟ್ಟದಲ್ಲಿ ಮುಂದಿನ ವರ್ಷ ನಡೆಯಲಿರುವ ಬಿಜಿಸಿಇ ಹಾಗೂ ಅದರ ಉದ್ದೇಶಗಳನ್ನು ತಿಳಿಸಲು ವಿಧಾನಸೌಧದಿಂದ ಬೆಂಗಳೂರು ಏರ್‌ಪೋರ್ಟ್ ಬಳಿಯ ಪ್ರೆಸ್ಟೀಜ್ ಟೆಕ್ ಕ್ಲೌಡ್‌ವರೆಗೆ ಬೈಕ್ ರ್‍ಯಾಲಿ ಏರ್ಪಡಿಸಲಾಗಿತ್ತು. ರ್‍ಯಾಲಿಗೆ ಯು.ಟಿ.ಖಾದರ್ ಅವರೊಂದಿಗೆ ಚಾಲನೆ ನೀಡಿ ಮಾತನಾಡಿದ ಎಸ್.ಈ. ಸುಧೀಂದ್ರ, 2026ರ ಫೆಬ್ರವರಿಯಲ್ಲಿ ಸಾಂಸ್ಕೃತಿಕ ಏಕತೆ, ನಾವಿನ್ಯತೆ, ಅವಿಷ್ಕಾರಗಳನ್ನು ಜಗತ್ತಿಗೆ ಸಾರುವ ಉದ್ದೇಶಿಸುವ ಸಲುವಾಗಿ ಭಾರತ್ ಗ್ಲೋಬಲ್ ಕಲ್ಚರಲ್ ಎಕ್ಸ್ ಪೋ ಆಯೋಜನೆಯಾಗಲಿದೆ.

ಈ ಎಕ್ಸ್ ಪೋ ಪೂರಕವಾಗಿ ಹಾಗೂ ಜಾಗತಿಕ ಮಟ್ಟದಲ್ಲಿನ ಆರ್ಥಿಕ, ಸಾಮಾಜಿಕ ಬೆಳವಣಿಗೆ, ನೀರಿನ ಮರುಬಳಕೆಯ ಅಗತ್ಯತೆ, ಪ್ರವಾಸ, ಸಂಸ್ಕೃತಿಯನ್ನು ಪ್ರಚುರಪಡಿಸಲು ರ್‍ಯಾಲಿ ನೆರವಾಗಲಿದೆ ಎಂದರು.

ಸಿದ್ಧರಾಮಯ್ಯ ಅವರ ಆದ್ಯತೆ ಹಾಗೂ ದೂರದೃಷ್ಟಿ ಚಿಂತನೆಗಳು ಕರ್ನಾಟಕ ವಿವಿಧ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವಂತೆ ಮಾಡುವತ್ತ ಇರುತ್ತವೆ. ಇನ್ನು ಮುಂದಿನ ವರ್ಷ ಜಾಗತಿಕ ಮಟ್ಟದಲ್ಲಿ ನಡೆಯಲಿರುವ ಭಾರತ್ ಗ್ಲೋಬಲ್ ಕಲ್ಚರಲ್ ಎಕ್ಸ್‌ಪೋ ಸಂಸ್ಕೃತಿ ಜತೆಗೆ ವ್ಯಾಪಾರ ಉದ್ಯಮ ಕ್ಷೇತ್ರ ವಿಸ್ತರಿಸುವ ವೇದಿಕೆಯಾಗಿ ಕೆಲಸ ಮಾಡಲಿದೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್‌ನ ಮಾಜಿ ಸದಸ್ಯರಾದ ವಿ.ಎಸ್.ಉಗ್ರಪ್ಪ, ಡಾ.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಸಂಪತ್‌ರಾಜ್, ಸುನಿತಾ, ಜಯಶ್ರೀ ಮತ್ತಿತರರು ಹಾಜರಿದ್ದರು.

**ಆಧಾರ: ಕನ್ನಡ ಪ್ರಭ, ದಿನಾಂಕ:21.04.2025**

## 4. ಸಸ್ಪೆಂಡ್ ಶಾಸಕರಿಂದ ವಿಷಾದ ವಾಪಸ್ಸಿಗೆ ಸಕರಾತ್ಮಕ ನಿಲುವು

ಕಳೆದ ಅಧಿವೇಶನದಲ್ಲಿನ ಪೀಠಕ್ಕೆ ಅಪಚಾರ ಎಸಗಿದ ಘಟನೆಗಳಿಗೆ ಶಾಸಕರು ಬಂದು ವಿಷಾದ ವ್ಯಕ್ತಪಡಿಸಿದ್ದು, ನಾನು ಸಕಾರಾತ್ಮಕವಾಗಿದ್ದೇನೆ, ಎಂದು ಸ್ಪೀಕರ್ ಯು.ಟಿ.ಖಾದರ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಈ ಶಾಸಕರ ಅಮಾನತು ವಾಪಸ್ ಪಡೆಯುವುದನ್ನು ನಿಯಮಾವಳಿ ಪ್ರಕಾರ ಸಮಿತಿ ತೀರ್ಮಾನ ಕೈಗೊಳ್ಳಲಿದೆ," ಎಂದರು.

"ಶಾಸಕರು ಸದನದೊಳಗೆ ಮಾಡಿದ ತಪ್ಪಿಗೆ ಶಿಕ್ಷೆ ಮಹತ್ವ ಗೊತ್ತಾಗಿದೆ. ತಪ್ಪಿನ ಅರಿವಾಗಿದೆ. ಮುಂದೆ ದೊಡ್ಡ ನಾಯಕರಾಗಲು ಇದು ಪಾಠವಾಗಲಿದೆ" ಎಂದರು. "ಕಳೆದ ಅಧಿವೇಶನದಲ್ಲಿ ಸ್ಪೀಕರ್ ಪೀಠಕ್ಕೆ ಅಪಚಾರ ಎಸಗಿದ ಆರೋಪದ ಮೇಲೆ 18 ಶಾಸಕರನ್ನು ಸದನ ಸಮಿತಿ ಆರು ತಿಂಗಳ ಕಾಲ ಅಮಾನತು ಮಾಡಿದ್ದಕ್ಕೆ ಶಾಸಕರು ಪ್ರತಿಪಕ್ಷ ನಾಯಕರ ಜತೆ ಬಂದು ಅಮಾನತು ಹಿಂಪಡೆಯಲು ಮನವಿ ಮಾಡಿದ್ದಾರೆ," ಎಂದರು. ನಿವೃತ್ತ ಡಿಜಿಪಿ ಓಂಪ್ರಕಾಶ್ ಕೊಲೆ ಪ್ರಕರಣದಲ್ಲಿ ಮಾಜಿ ಡಿವೈಎಸ್ಪಿ

ಅನುಪಮಾ ಶೆಣ್ಯೈ ತಮ್ಮ ಹೆಸರು ಪ್ರಸ್ತಾಪಿಸಿದಕ್ಕೆ ಪ್ರತಿಕ್ರಿಯೆ ನೀಡಿ, "ಇದು ನನ್ನ ಗಮನಕ್ಕೆ ಬಂದಿಲ್ಲ. ಅವರ ಪತ್ರವೂ ಸಿಕ್ಕಿಲ್ಲ. ನಾವು ಸಾರ್ವಜನಿಕ ಸೊತ್ತಾಗಿದ್ದು, ಹಿರಿಯರು–ಕಿರಿಯರು, ಒಳ್ಳೆಯವರು–ಕೆಟ್ಟವರು ಸೇರಿದಂತೆ ಎಲ್ಲರೂ ನಮ್ಮ ಹೆಸರು ಪ್ರಸ್ತಾಪ ಮಾಡುತ್ತಿದ್ದಾರೆ. ಅವರಲ್ಲಿ ಸಾಕ್ಷಿಗಳಿದ್ದರೆ ಪೊಲೀಸರಿಗೆ ನೀಡಿ ತನಿಖೆ ನಡೆಸಲಿ," ಎಂದರು.

"ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರು ಸಂವಿಧಾನಿಕ ಪೀಠದ ತೀರ್ಪಿನ ಬಗ್ಗೆ ಆಡಿರುವ ಮಾತುಗಳ ವಿಡಿಯೋ ಹಾಗೂ ಪತ್ರಿಕಾ ತುಣುಕುಗಳ ಸಹಿತ ಹಕ್ಕುಚ್ಯುತಿ ಸಮಿತಿಗೆ ಕೆಲವು ಶಾಸಕರು ದೂರು ನೀಡಿದ್ದು, ಸಮಿತಿ ಸೂಕ್ತ ನಿರ್ಧಾರ ಕೈಗೊಳ್ಳದೆ, ಬೇಕಾಬಿಟ್ಟಿ ಮಾತನಾಡುವುದೇ ಕೆಲವರ ಚಾಳಿ," ಎಂದು ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

"ಜನ ಮತ ಹಾಕಿದ ತಕ್ಷಣ ಯಾರೂ ಶಾಸಕರಾಗುವುದಿಲ್ಲ. ಸ್ಪೀಕರ್ ಮುಂದೆ ಸಾಂವಿಧಾನಿಕವಾಗಿ ಪ್ರತಿಜ್ಞೆ ಸ್ವೀಕಾರ ಮಾಡಲೇಬೇಕು. ಆ ಬೆಂಬಲವಿದ್ದರೂ, ಸಂವಿಧಾನಕ್ಕೆ ಬದ್ಧರಾಗಬೇಕು. ಕೆಲವೊಮ್ಮೆ ತಪ್ಪುಗಳಾಗುತ್ತವೆ. ಅದನ್ನೇ ಪುನರಾವರ್ತನೆ ಮಾಡಬಾರದು" ಎಂದು ಪ್ರತಿಕ್ರಿಯಿಸಿದರು.

**ಆಧಾರ:** ವಿಜಯಕರ್ನಾಟಕ, ದಿನಾಂಕ:28.04.2025

## 5. ಪಾಕ್ ಆಕ್ರಮಿತ ಕಾಶ್ಮೀರ ವಶಕ್ಕೆ ಹೊರಟ್ಟಿ ಆಗ್ರಹ

ಪೆಹಲ್ಗಾಮ್‌ನಲ್ಲಿ ನಡೆದಿರುವ ಉಗ್ರರ ದಾಳಿಗೆ ಕೇಂದ್ರ ಸರ್ಕಾರ ತಕ್ಕ ಉತ್ತರ ನೀಡುವುದರ ಜತೆಗೆ ಪಾಕ್ ಆಕ್ರಮಿತ ಕಾಶ್ಮೀರವನ್ನು ವಶಪಡಿಸಿಕೊಳ್ಳಬೇಕೆಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ನಗರದಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೆಹಲ್ಗಾಮ್‌ನಲ್ಲಿ ಉಗ್ರರ ಕೃತ್ಯಕ್ಕೆ ಅಮಾಯಕರು ಬಲಿಯಾಗಿದ್ದಾರೆ. ಕೇಂದ್ರ ಸರ್ಕಾರ ಅತ್ಯಂತ ಕಠಿಣ ಉತ್ತರ ನೀಡಲು ಮುಂದಾಗಬೇಕು. ಪಿಒಕೆ ಪ್ರದೇಶವನ್ನು ಮೊದಲು ಖಾಲಿ ಮಾಡಿಸಿ ವಶಕ್ಕೆ ಪಡೆಯಬೇಕು. ಮದುವೆ ನೆಪದಲ್ಲಿ ಭಾರತಕ್ಕೆ ಬಂದು ಬೇಹುಗಾರಿಕೆ ಮಾಡುತ್ತಿರುವ ಪಾಕಿಸ್ತಾನಿ ಪ್ರಜೆಗಳನ್ನು ದೇಶದಿಂದ ಹೊರಗೆ ಕಳುಹಿಸುವ ಕೆಲಸವಾಗಬೇಕು. ದೇಶದಲ್ಲಿ ಭದ್ರತಾ ವ್ಯವಸ್ಥೆ ಕಟ್ಟುನಿಟ್ಟಾಗಿ ಜಾರಿಯಾಗಬೇಕಿದೆ. ಬೇಹುಗಾರಿಕೆಗೆ ಹೆಚ್ಚಿನ ಒತ್ತು ನೀಡಬೇಕಿದೆ ಎಂದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ನಿಂದಿಸಿದ್ದಾರೆ ಎನ್ನಲಾದ ಪ್ರಕರಣದಲ್ಲಿ ವಿಧಾನ ಪರಿಷತ್ತಿನ ಸದಸ್ಯ ಸಿ.ಟಿ.ರವಿ ಅಶ್ಲೀಲ ಪದ ಬಳಸಿರುವುದು ನಮ್ಮ ಕ್ಯಾಮರಾಗಳಲ್ಲಿ ಕಂಡು ಬಂದಿಲ್ಲ. ಈ ವಿಚಾರದಲ್ಲಿ ನೀತಿ ನಿರೂಪಣೆ ಸಮಿತಿಯಿಂದ ವರದಿ ಕೇಳಲಾಗಿದೆ. ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮಾಹಿತಿ ನೀಡಿದರು. ಸಚಿವ ಶಿವಾನಂದ ಪಾಟೀಲ ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ನಡುವಿನ ವಾಗ್ವಾದ ಗಮನಿಸಿದ್ದೇನೆ. ಜನಪ್ರತಿನಿಧಿಯಾದವರು ಭಾಷೆ ಮೇಲೆ ಹಿಡಿತ ಹೊಂದಿರಬೇಕು. ರಾಜೀನಾಮೆ ಎಂದರೆ ಒಂದೇ ಸಾಲಿನಲ್ಲಿ ಇರಬೇಕೆಂದರು.

ಮುಂಬರುವ ಅಧಿವೇಶನದಲ್ಲಿ ಜನರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುವ ವಿಶ್ವಾಸವಿದೆ. ಈ ಮೊದಲು ಅಧಿವೇಶನದಲ್ಲಿ ಹನಿ ಟ್ರ್ಯಾಪ್ ಬಗ್ಗೆ ಸುದೀರ್ಘ ಚರ್ಚೆ ನಡೆದಿದ್ದು ಸರಿಯಲ್ಲ. ಆಡಳಿತ, ವಿರೋಧ ಪಕ್ಷಗಳ ವಾಕ್ಸಮರಕ್ಕೆ ಪರಿಷತ್ ವೇದಿಕೆಯಲ್ಲ. ಚುನಾವಣೆಗಳಲ್ಲಿ ದುಡ್ಡಿನ ಚಲಾವಣೆಯಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಹದಗೆಟ್ಟಿದೆ. ಎಲ್ಲಿಯವರೆಗೆ ಮತದಾನಕ್ಕಾಗಿ ದುಡ್ಡು ಕೊಡುವವರು, ದುಡ್ಡು

ಪಡೆಯುವವರು ಇರುತ್ತಾರೋ ಅಲ್ಲಿಯವರೆಗೆ ಪ್ರಜಾಪ್ರಭುತ್ವ ವ್ಯವಸ್ಥೆ ಸರಿಯಾಗುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ:06.05.2025.

## 6. ಜಾತಿಗಣತಿಗೆ ಕೈ ಹಾಕಿದರೆ ಜೇನುಗೂಡಿಗೆ ಕೈ ಹಾಕಿದಂತೆ

ಯಾವುದೇ ಸರ್ಕಾರ ಇರಲಿ, ಜಾತಿಗೆ ಕೈ ಹಾಕಿದರೆ ಜೇನುಗೂಡಿಗೆ ಕೈ ಹಾಕಿದಂತೆ. ಸುಮ್ ಸುಮ್ಮನೆ ಇವೆಲ್ಲ ಮಾಡುವುದು ಸರಿಯಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅಭಿಪ್ರಾಯ ಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಮೀಸಲಾತಿ ಇರಲಿ 50% ಮೀರಬಾರದು ಎಂದು ಸುಪ್ರೀಂ ಕೋರ್ಟ್ ಹೇಳುತ್ತದೆ. ಇವೆಲ್ಲ ಒಂದಕ್ಕೊಂದು ಜಗಳದ ಮೂಲ. ಜಾತಿ ಸಮೀಕ್ಷೆಯನ್ನೇ ಮಾಡುವುದು ಅವಶ್ಯಕತೆ ಇರಲಿಲ್ಲ ಎಂಬುವುದು ನನ್ನ ಅಭಿಪ್ರಾಯ ಎಂದರು. ಎಲ್ಲಿಯವರೆಗೆ ದೇಶದಲ್ಲಿ ಪುಕ್ಕಟೆ ಕೊಡುವುದು ನಡೆಯುತ್ತದೆ ಅಲ್ಲಿಯವರೆಗೆ ಯಾವ ದೇಶ ಹಾಗೂ ಯಾವ ರಾಜ್ಯನೂ ಉದ್ಧಾರ ಆಗುವುದಿಲ್ಲ. ಕೆಲಸಕ್ಕೆ ನಮಗೆ ಆಳುಗಳು ಸಿಗುತ್ತಿಲ್ಲ. ಕಾರಣ ದನಗಳನ್ನು ಮಾರಾಟ ಮಾಡಿದ್ದೇವೆ. ಕೆಲಸಗಾರರಿಗೆ 50 ರು. ಹೆಚ್ಚು ಕೊಡುತ್ತೇವೆ ಎಂದರು ಬೇಡ ಬಿಡ್ರಿ ನಮ್ಮ ಸಿದ್ದರಾಮಯ್ಯರ ಗಡ ದುಡ್ಡು ಕೊಟ್ಟಾನ ನಿಮ್ದ್ಯಾಕೆ ಅಂತಾರೆ ಎಂದು ತಿಳಿಸಿದರು.

**ಆಧಾರ:** ವಿಜಯ ಕರ್ನಾಟಕ, ದಿನಾಂಕ:06.05.2025

## 7. ಸುಹಾಸ್ ಶೆಟ್ಟಿ ಹತ್ಯೆ ಎನ್ಐಎಗೆ ವಹಿಸಲು ಅಭ್ಯಂತರವಿಲ್ಲ: ಸ್ಪೀಕರ್

ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ ತನಿಖೆಯನ್ನು, ಎನ್ಐಎಗೆ ನೀಡಲು ನಮ್ಮದೇನು ಅಭ್ಯಂತರವಿಲ್ಲ ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಹೇಳಿದ್ದಾರೆ.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ತನಿಖೆಯನ್ನು ಎನ್ಐಎಗೆ ವಹಿಸಬೇಕೆಂಬ ಬಿಜೆಪಿಗರ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸುವ ವಿಶ್ವಾಸವಿದೆ. ಈ ಕುರಿತು ಆಡಳಿತ ಪಕ್ಷ, ಪ್ರತಿಪಕ್ಷ ಇದೆ ಅವರವರು ಮಾತನಾಡಿಕೊಳ್ಳಲಿ ಎಂದು ಹೇಳಿದರು. ಪ್ರಕರಣದ ತನಿಖೆಯನ್ನು ಎನ್ಐಎಗೆ ಕೊಡಲು ನಮ್ಮದೇನು ಅಭ್ಯಂತರವಿಲ್ಲ. ಯಾರು ತನಿಖೆ ಮಾಡಬೇಕೆಂದು ಸರ್ಕಾರ ತೀರ್ಮಾನಿಸಲಿ. ಪ್ರಕರಣದ ಆರೋಪಿಗಳ ಬಂಧನವಾಗಿದೆ.

ಕೃತ್ಯ ಎಸಗಿದವರು ತಪ್ಪಿಸಿಕೊಳ್ಳದ ರೀತಿ ಪೊಲೀಸರು ಮಾಡಿದ್ದಾರೆ. ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕು. ಪೊಲೀಸರು ಈ ಬಗ್ಗೆ ಕ್ರಮವಹಿಸುತ್ತಾರೆ ಅಲ್ಲದೆ ಯಾರನ್ನು ಕೊಲ್ಲುವ ಅಧಿಕಾರ ಯಾರಿಗೂ ಇಲ್ಲ ಹಾಗಾಗಿ ಎಲ್ಲಾ ರೀತಿಯ ತನಿಖೆ ಮಾಡಬೇಕು. ಮುಂದೆ ಯಾರು ಸಹ ಈ ರೀತಿ ಕೃತ್ಯ ಎಸಗಬಾರದು, ಪೊಲೀಸರು ಸಹ ಸರಿಯಾದ ವರದಿಯನ್ನು ಸಲ್ಲಿಸಬೇಕು ಎಂದು ಹೇಳಿದರು.

ಸುಹಾಸ್ ಶೆಟ್ಟಿ ಕೊಲೆ ನಡೆದಾಗ ಉದ್ವಿಗ್ನ ಪರಿಸ್ಥಿತಿ ಇತ್ತು. ಆ ಸಮಯದಲ್ಲಿ ನನ್ನ ಆದ್ಯತೆಯೆಂದರೆ ನನ್ನ ಜಿಲ್ಲೆಯಲ್ಲಿ ಕೋಮು ಸಾಮರಸ್ಯವನ್ನು ಕಾಪಾಡುವುದು. ಆದ್ದರಿಂದ, ನನಗೆ ಯಾವುದೇ ಮಾಹಿತಿ ಬಂದರೂ, ನಾನು ಅದನ್ನು ಸಾರ್ವಜನಿಕವಾಗಿ ಹಂಚಿಕೊಂಡಿದ್ದೇನೆ. ಈ ಪ್ರಕರಣದಲ್ಲಿ ಪೊಲೀಸರು ಕೆಲವರನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ:10.05.2025

## 8. ಪಾಕಿಸ್ತಾನದ ವಿರುದ್ಧ ಸಂಘರ್ಷ ನಿಲ್ಲಿಸಬಾರದಿತ್ತು

ಯಾರದ್ದೋ ಮಾತು ಕೇಳಿ ಪಾಕ್ ವಿರುದ್ಧ ಭಾರತ ಸಂಘರ್ಷ ನಿಲ್ಲಿಸಬಾರದಿತ್ತು ಎಂದು ಪ್ರಧಾನಿ ಮೋದಿ ವಿರುದ್ಧ ಸಭಾಪತಿ ಬಸವರಾಜ್ ಎಸ್. ಹೊರಟ್ಟಿ ಅಸಮಾಧಾನ ಹೊರಹಾಕಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಸಂಘರ್ಷದಲ್ಲಿ ಪಾಕಿಸ್ತಾನವನ್ನು ನಾಶ ಮಾಡಬೇಕಿತ್ತು. ಕದನ ವಿರಾಮದ ನಂತರ ಮತ್ತೆ ದಾಳಿ ಮಾಡಿದ್ದಾರೆ. ಬೇರೆಯವರ ಮಾತು ಕೇಳಿ ಪಾಕಿಸ್ತಾನದ ಜೊತೆ ನಡೆಸುತ್ತಿದ್ದ ಸಂಘರ್ಷ ಕೈ ಬಿಟ್ಟಿದ್ದು ತಪ್ಪು. ಪಾಕಿಸ್ತಾನದವರು ಸಾಯುವವರೆಗೂ ವೈರಿಗಳೇ. ಅವರು ಎಂದಿಗೂ ನಮಗೆ ಒಳ್ಳೆಯದು ಮಾಡಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪಾಕ್ ಹಾಗೂ ಭಾರತದ ನಡುವೆ ಸಂಧಾನದಲ್ಲಿ ಟ್ರಂಪ್ ಮಧ್ಯಸ್ಥಿಕೆ ವಹಿಸಲು ಅವರು ಯಾರು? ಅಮೆರಿಕದ ವಿಚಾರದಲ್ಲಿ ನಾವು ಏನಾದರೂ ಹೇಳಿದರೆ ಅವರು ಕೇಳುತ್ತಾರಾ? ಮೋದಿಯವರು ಕಠಿಣ ಹಾಗೂ ಗಟ್ಟಿ ನಿರ್ಧಾರ ತೆಗೆದುಕೊಳ್ಳಬೇಕಿತ್ತು. ಈ ವಿಚಾರದಲ್ಲಿ ಟ್ರಂಪ್ ಮಾತು ಕೇಳಿದ್ದು ತಪ್ಪು. ಭಯೋತ್ಪಾದಕರ ವಿಚಾರದಲ್ಲಿ ಎಲ್ಲಾ ದೇಶಗಳು ಶೃಂಗಸಭೆಯನ್ನು ನಡೆಸಿ ಭಯೋತ್ಪಾದಕರನ್ನು ಸ್ವಚ್ಛಗೊಳಿಸಿ ನಾಶ ಮಾಡಬೇಕು ಎಂದು ಒತ್ತಾಯಿಸಿದರು.

**ಆಧಾರ:** ವಿಶ್ವವಾಣಿ, ದಿನಾಂಕ:12.05.2025.

## 9. ವಿಧಾನಸಭಾ ಸ್ಪೀಕರ್‌ಗಳ ರಾಷ್ಟ್ರೀಯ ಸಮಿತಿಗೆ ಯು.ಟಿ.ಖಾದರ್ ನೇಮಕ

ಸಂವಿಧಾನದ 10ನೇ ಅನುಸೂಚಿಯಡಿ ಸಭಾಧ್ಯಕ್ಷರ ಅಧಿಕಾರ ಮತ್ತು ನಿಯಮಗಳನ್ನು ಪರಿಶೀಲಿಸುವ ರಾಷ್ಟ್ರೀಯ ಸಮಿತಿಗೆ ಕರ್ನಾಟಕ ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್ ಅವರನ್ನು ನೇಮಕ ಮಾಡಲಾಗಿದೆ.

ದೇಶಾದ್ಯಂತ ಕೇವಲ ನಾಲ್ಕು ವಿಧಾನಸಭಾ ಸ್ಪೀಕರ್‌ಗಳನ್ನು ಒಳಗೊಂಡ ಸಮಿತಿಗೆ ಯು.ಟಿ.ಖಾದರ್ ಅವರನ್ನು ನೇಮಕ ಮಾಡಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಆದೇಶ ಹೊರಡಿಸಿದ್ದಾರೆ. ಈ ನೇಮಕ ಮಹತ್ವದ್ದು ಎಂದು ಪರಿಗಣಿಸಲಾಗಿದೆ. ಮಹಾರಾಷ್ಟ್ರದ ಸ್ಪೀಕರ್ ರಾಹುಲ್ ನಾರ್ವೇಕರ್ ಸಮಿತಿಯ ಅಧ್ಯಕ್ಷರಾಗಿದ್ದು, ಒಡಿಶಾ ಸ್ಪೀಕರ್ ಸುರಮ ಪಾದಿ, ಕರ್ನಾಟಕ ಸ್ಪೀಕರ್ ಯು.ಟಿ.ಖಾದರ್, ನಾಗಲ್ಯಾಂಡ್ ಸ್ಪೀಕರ್ ಷರಿಂಗೈನ್ ಲಾಂಗ್ ಕುಮೆರ್ ಸಮಿತಿಯ ಸದಸ್ಯರಾಗಿದ್ದಾರೆ. ರಾಜ್ಯ ವಿಧಾನಸಭೆಗಳಲ್ಲಿ ಸ್ಪೀಕರ್ ಅವರ ಅಧಿಕಾರ, ಜವಾಬ್ದಾರಿಗಳು ಮತ್ತು ಕಾರ್ಯವಿಧಾನದ ನಿಯಮಗಳನ್ನು ರಾಷ್ಟ್ರೀಯ ಸಮಿತಿಗೆ ಪರಿಶೀಲಿಸಲಿದ್ದು, ನಾಲ್ಕು ಬಾರಿ ಶಾಸಕರಾಗಿರುವ ಖಾದರ್ ಅವರು ಈ ರಾಷ್ಟ್ರೀಯ ಸಮಿತಿಗೆ ನಾಮನಿರ್ದೇಶನಗೊಂಡ ಕರ್ನಾಟಕದ ಮೊದಲ ಸ್ಪೀಕರ್ ಆಗಿದ್ದಾರೆ.

ರಾಜ್ಯ ವಿಧಾನಸಭೆಗಳಲ್ಲಿ ಶಿಸ್ತು ಸುಧಾರಿಸಲು ಮತ್ತು ಸಂಸದೀಯ ನಿಯಮಗಳನ್ನು ಎತ್ತಿಹಿಡಿಯಲು ಸುಧಾರಣೆಗಳನ್ನು ಸಮಿತಿ ಪರಿಶೀಲಿಸುತ್ತಿದೆ. ದೇಶದ ರಾಜ್ಯ ವಿಧಾನಸಭೆಗಳ ಕಾರ್ಯ ಕಲಾಪಗಳಲ್ಲಿ ಅನೇಕ ಸುಧಾರಣೆಯಾಗಬೇಕಾಗಿದೆ. ಅಶಿಸ್ತಿನ ನಡವಳಿಕೆ ತಡೆಯುವ ಕ್ರಮಗಳು, ಅಸಂಸದೀಯ ಭಾಷೆ ಬಳಕೆ ಸೇರಿದಂತೆ ಅನೇಕ ಬದಲಾವಣೆಗಳನ್ನು ತರಬೇಕಾಗಿದೆ.**–ಯು.ಟಿ.ಖಾದರ್, ಸ್ಪೀಕರ್**.

**ಆಧಾರ:** ವಿಶ್ವವಾಣಿ, ದಿನಾಂಕ:15.05.2025

## 10. ಸಭಾಧ್ಯಕ್ಷ ಯು.ಟಿ.ಖಾದರ್ ಮಲೇಶಿಯಾ ಪ್ರವಾಸ

ಮಲೇಶಿಯಾ ದೇಶದಲ್ಲಿ ಅಧ್ಯಯನ ಪ್ರವಾಸ ಕೈಗೊಂಡಿರುವ, ಕರ್ನಾಟಕ ವಿಧಾನ ಸಭೆಯ ಸಭಾಧ್ಯಕ್ಷರು ಮತ್ತು ಕಾಮನ್ ವೆಲ್ತ್ ಸಂಸದೀಯ ಸಂಘ, ಕರ್ನಾಟಕ ಶಾಖೆಯ ಜಂಟಿ ಅಧ್ಯಕ್ಷರಾದ ಯು.ಟಿ.ಖಾದರ್ ಫರೀದ್ ಅವರು ಜನ ಪ್ರತಿನಿಧಿಗಳ ಸಭೆ(ದಿವಾನ್ ರಖ್ಯಾತ್)ನ ಸಭಾಧ್ಯಕ್ಷರು ಮತ್ತು ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್, ಮಲೇಶಿಯಾದ ಜಂಟಿ ಅಧ್ಯಕ್ಷರಾದ ಡಾ.ಜೋಹರಿ ಬಿನ್ ಅಬ್ದುಲ್ ಅವರನ್ನು ಕೌಲಾಂಪುರದಲ್ಲಿರುವ ಸಂಸತ್ ಭವನದಲ್ಲಿ ಭೇಟಿ ಮಾಡಿದರು.

ಈ ಸಂದರ್ಭದಲ್ಲಿ ಸಭಾಧ್ಯಕ್ಷ ಯು.ಟಿ.ಖಾದರ್ ಫರೀದ್ ಅವರು ಸಂಸದೀಯ ವ್ಯವಹಾರಗಳು ಹಾಗೂ ಪ್ರಜಾಪ್ರಭುತ್ವ ತತ್ವಗಳ ಬಗ್ಗೆ ಪರಸ್ಪರ ವಿಚಾರ ವಿನಿಮಯ ಮಾಡಿದರು. ಅಲ್ಲದೆ ಭವಿಷ್ಯದಲ್ಲಿ ಕರ್ನಾಟಕ ಹಾಗೂ ಮಲೇಶಿಯಾದ ರಾಜಕೀಯ, ಸಂಸದೀಯ ವ್ಯವಹಾರಗಳು ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಕಾಯ್ದುಕೊಳ್ಳುವ ಬಗ್ಗೆ ಸಹ ಚರ್ಚಿಸಿದರು. ಸಂಬಂಧಪಟ್ಟ ಇತರೆ ಅಧಿಕಾರಿಗಳು ಹಾಜರಿದ್ದರು.

**ಆಧಾರ:** ಬೆವರಹನಿ,ದಿನಾಂಕ:18.06.2025

## 11. ಮಕ್ಕಳಿಗೆ ಆನ್‌ಲೈನ್ ಶಿಕ್ಷಣ, ಮೊಬೈಲ್ ಬಳಕೆ ನಿಷೇಧಿಸಿ

ನಾಡಿನ ಬೆನ್ನೆಲುಬಾದ ಶಿಕ್ಷಣ ವ್ಯವಸ್ಥೆ ಈ ಡಿಜಿಟಲ್ ಯುಗದಲ್ಲಿ ಹೇಗಿರಬೇಕು? ಆನ್‌ಲೈನ್ ಕಲಿಕೆ ಮತ್ತು ಶಾಲಾ ಹಂತದ ಮಕ್ಕಳಲ್ಲಿ ಮೊಬೈಲ್ ಬಳಕೆ ಸರಿಯೇ? ಅತ್ಮಾವಲೋಕನ ಮಾಡಿಕೊಳ್ಳುವ ಸಮಯವೀಗ ಬಂದಿದೆ, ಆನ್‌ಲೈನ್ ಶಿಕ್ಷಣಕ್ಕೆ ಬ್ರೇಕ್ ಹಾಕದೇ ಇದ್ದರೆ ಭಾವೀ ಪ್ರಜೆಗಳು ಮತ್ತು ಸಮಾಜಕ್ಕೆ ದೊಡ್ಡ ಅನ್ಯಾಯ ಮಾಡಿದಂತೆ ಆಗಲಿದೆ.

ಕೋವಿಡ್ ಸಂಕಷ್ಟದಲ್ಲಿ ಆನ್‌ಲೈನ್ ಕಲಿಕೆ ಅನಿವಾರ್ಯವಾಗಿತ್ತು, ಸಾಂಕ್ರಾಮಿಕ ಕೊನೆಗೊಂಡ ನಂತರ ಈ ವ್ಯವಸ್ಥೆ ಅಂತ್ಯಗೊಂಡು, ಆಫ್‌ಲೈನ್ ಅಥವಾ ಶಾಲೆಗಳಲ್ಲಿ ಪಾಠ–ಪ್ರವಚನಗಳಷ್ಟೇ ಉಳಿಯಲಿವೆ ಎನ್ನುವ ನಿರೀಕ್ಷೆ(ಆಶಾಭಾವನೆ) ಕೆಲವರಲ್ಲಾದರೂ ಇತ್ತು. ದುರದೃಷ್ಟದ ಸಂಗತಿ ಎಂದರೆ 'ಆನ್‌ಲೈನ್ ಅನಿಷ್ಟ' ಕೋವಿಡ್ ನಂತರ ತೆರೆಮರೆಗೆ ಸರಿಯುವ ಬದಲು ಶಿಕ್ಷಣದಲ್ಲಿ ಮತ್ತಷ್ಟು ಬಲಗೊಳ್ಳುತ್ತ ಸಾಗಿರುವುದು ಆಲೋಚಿಸಬೇಕಾದ ಸಂಗತಿ.

ಆನ್‌ಲೈನ್ ಕಲಿಕೆಯು ಒಂದಿಲ್ಲ ಒಂದು ಹೆಸರಿನಲ್ಲಿ ಇಲ್ಲವೇ ರಥದಲ್ಲಿ ವ್ಯಾಪಿಸಿಬಿಟ್ಟಿದೆ. ಮೊಬೈಲ್, ಟ್ಯಾಬ್(ಸ್ವಲ್ಪ ಮಟ್ಟಿಗೆ ಲ್ಯಾಪ್‌ಟಾಪ್ ಮತ್ತು ಡೆಸ್ಕ್‌ಟಾಪ್) ಮೊದಲಾದವುಗಳೇ ಕಲಿಕೆಯ ವಾಹಕಗಳಾಗಿ ಉಳಿದು ಹೋಗಿವೆ. ಇದು ಖಂಡಿತ ಒಳ್ಳೆಯದಲ್ಲ, ಆನ್‌ಲೈನ್ ಹೆಸರಿನ ನೇರ ಮತ್ತು ಪರೋಕ್ಷ ವ್ಯವಸ್ಥೆಯು ಚಿಣ್ಣರ ಬಾಳನ್ನು ಹಾಳುಮಾಡುತ್ತಿದೆ.

ರಾಜ್ಯದ ಶಾಲೆಗಳಲ್ಲಿನ ಮಕ್ಕಳಿಗೆ ಡಿಜಿಟಲ್ ವೇದಿಕೆಗಳ ಮೂಲಕ ಪಾಠಗಳ ವಿಡಿಯೋ ದೊರೆಯುತ್ತಿದೆ, ಅನೇಕ ಮಾಹಿತಿಗಳು ಸಿಗುತ್ತಿವೆ. ಅಗತ್ಯ ಮಾಹಿತಿ ಮತ್ತು ಹಳೆಯ ಪಾಠಗಳಿಗೆ ಸೀಮಿತವಾಗಿ ಈ ವ್ಯವಸ್ಥೆಯನ್ನು ಸಕಾರಾತ್ಮಕ ಎಂದಿಟ್ಟುಕೊಳ್ಳೋಣ. ಆದರೆ, ತರಗತಿಗಳ ಆಚೆಗೆ ಆನ್‌ಲೈನ್‌ನಲ್ಲೇ ಹೋಂ ವರ್ಕ್ ಮಾಡಿಸುವುದು; ವೇಳಾಪಟ್ಟಿ ಹೊರತಾದ ಸಮಯದಲ್ಲಿ ಮತ್ತು ರಜಾ ದಿನಗಳಲ್ಲಿ ಮಕ್ಕಳನ್ನು ಮೊಬೈಲ್ ಮುಂದೆ ಕಟ್ಟಿ ಹಾಕಿ, ಪಠ್ಯಕ್ರಮದ ಅನುಸಾರ ಬೋಧಿಸುವುದು; ಹೆಚ್ಚಿನ

ಓದು ಎನ್ನುತ್ತಾ ತರಗತಿಗಳ ಆಚೆಗೆ ಆನ್‌ಲೈನ್‌ಗೆ ಮೊರೆ ಹೋಗುವುದೆ ಇವೆಲ್ಲ ದೊಡ್ಡ ಪ್ರಮಾಣದಲ್ಲಿ ವ್ಯಾಪಿಸಿವೆ.

2024ರಲ್ಲಿ ನಡೆದಿದ್ದ ಒಂದು ಅಧ್ಯಯನ ಹೇಳುವ ಪ್ರಕಾರ, ರಾಜ್ಯದ ಶೇಕಡಾ 94.3ರನ್ನು ಮಕ್ಕಳಿಗೆ ಈಗ ಮೊಬೈಲ್‌ಗಳು ಒಂದಿಲ್ಲಾ ಒಂದು ರೀತಿಯಲ್ಲಿ ಕೈಗೆ ಸಿಗುತ್ತಿವೆ. ಅಂದರೆ ಮನೆಗಳಲ್ಲಿ ಒಬ್ಬರದ್ದಾದರೂ ಸ್ಮಾರ್ಟ್‌ಫೋನ್ ಇದ್ದೇ ಇರುತ್ತದೆ. ಇಲ್ಲವೇ ಆನ್‌ಲೈನ್ ಪಾಠ–ಪ್ರವಚನ–ಚರ್ಚೆ–ಹೆಚ್ಚಿನ ಓದು ಮೊದಲಾದ ಕಾರಣಕ್ಕೆ ಮಕ್ಕಳಿಗಾಗಿಯೇ ಸ್ಮಾರ್ಟ್ ಫೋನ್ ಇರುತ್ತದೆ. ಈ ಪೈಕಿ ಶೇ.70.6ರಷ್ಟು ಮಕ್ಕಳು ಸಾಮಾಜಿಕ ಮಾಧ್ಯಮವನ್ನು(ರೀಲ್ಸ್, ಶಾರ್ಟ್ಸ್ ಮತ್ತಿತರ ಹಾಳು ವಿಷಯಗಳನ್ನು) ನೋಡುತ್ತಾ ಸಮಯ ಪೋಲು ಮಾಡಿಕೊಳ್ಳುತ್ತಿದ್ದಾರೆ.

ಅಂದರೆ ಓದಿಗೆ ಪೂರಕವಾದ ಯಾವುದೇ ಸಂಗತಿಗಳನ್ನು ಬಹುಪಾಲು ಮಕ್ಕಳು ಸ್ಮಾರ್ಟ್ ಫೋನ್‌ನಲ್ಲಿ ನೋಡುತ್ತಲೂ ಇಲ್ಲ, ಕಲಿಯುತ್ತಲೂ ಇಲ್ಲ, ಅನ್‌ಲೈನ್‌ನಿಂದ ಮುಕ್ಕಾಲು ಪಾಲು ಮಕ್ಕಳು ಓದದೇ ಹಾಳಾಗುತ್ತಿದ್ದಾರೆ! ಹೋಗಲಿ, ಆನ್‌ಲೈನ್ ಈ ಕಾಲದ ಅನಿವಾರ್ಯತೆ ಎಂದು ಒಂದು ಕ್ಷಣ ಇಟ್ಟುಕೊಳ್ಳೋಣ. ಆನ್‌ಲೈನ್‌ನಲ್ಲಿ ಓದಿಕೊಳ್ಳುತ್ತಿದ್ದೇನೆ ಅಥವಾ ಯಾವುದೋ ಶ್ರೇಣಿಕ ಅವಶ್ಯಕತೆಯನ್ನು ಪೂರೈಸಿಕೊಳ್ಳುತ್ತಿದ್ದೇನೆ ಎನ್ನುವುದನ್ನು ಮಗು ಹೇಳಿದಾಗ ಅದನ್ನು ಅಳೆಯೋದು ಹೇಗೆ? ಶೈಕ್ಷಣಿಕ ಉದ್ದೇಶದಿಂದಲೇ ಸ್ಕ್ರೀನ್ ನೋಡುತ್ತಿದ್ದಾರೆ ಎಂದು ಮನವರಿಕೆ ಮಾಡಿಕೊಳ್ಳಲು ನಿಜಕ್ಕೂ ಸಾಧ್ಯವೇ?.

ಮೇಲಾಗಿ, ಆನ್‌ಲೈನ್ ಅವಲಂಬಿಸಿ ಓದುವುದು ಸರಿಯೇ? ಪರಸ್ಪರರೊಂದಿಗೆ ಕಲೆತು ಓದು, ಆಟ, ಓಟ, ತುಂಟಾಟ ಮತ್ತು ಮುಖ್ಯವಾಗಿ ಸಂವಹನಕ್ಕೆ ಒತ್ತು ನೀಡಬೇಕಾದ ವಯಸ್ಸಿನಲ್ಲಿ 'ಸ್ಕ್ರೀನ್ ಶಿಕ್ಷಣ' ಮಕ್ಕಳ ಸೃಜನಾತ್ಮಕ ಸಂವೇದನೆಗಳನ್ನು ಹಾಳು ಮಾಡುವುದಿಲ್ಲವೇ? ಬಾಹ್ಯ ಬದುಕಿನ ಅನುಭವ ಸೂಕ್ಷ್ಮತೆಗಳಿಗೆ ಕಲ್ಲು ಹಾಕಿ ಮಕ್ಕಳನ್ನು ಪೊಳ್ಳು ಮಾಡುವುದಿಲ್ಲವೇ? ಈ ದೀರ್ಘಕಾಲೀನ ದುಷ್ಪರಿಣಾಮದ ಅಪಾಯ ಮತ್ತು ದುರಂತಗಳ ಬಗ್ಗೆ ಎಲ್ಲ ಪ್ರಜ್ಞಾವಂತರೂ ಯೋಚಿಸಬೇಕಾಗಿದೆ. ಮುಖ್ಯವಾಗಿ ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿದೆ! ಈಗಿನ ಆನ್‌ಲೈನ್ ವ್ಯವಸ್ಥೆಯು ಮಕ್ಕಳ ವಾಸ್ತವ ಜಗತ್ತಿನ ಸಾಮಾಜಿಕ ಕೌಶಲ್ಯಗಳನ್ನು ಹಾಳುಗೆಡುತ್ತಿದೆ. ನೈಜ ಬದುಕಿಗೆ ಸಾಮಾಜಿಕ ಕೌಶಲ್ಯ ಕಲಿಯದೇ ಮಕ್ಕಳಿಗೆ ಭವಿಷ್ಯವೇ ಇಲ್ಲ. ಈ ಮೂಲ ಅವಶ್ಯಕತೆಯನ್ನೇ ಅನ್‌ಲೈನ್ ವ್ಯವಸ್ಥೆ ನಾಶ ಮಾಡಿದರೆ ಭಾವೀ ಸಮಾಜದ ಗತಿ ಏನು? ಇನ್ನು ಮೊಬೈಲ್‌ಗಳಿಗೆ ದಾಸರಾಗುತ್ತಿರುವುದರಿಂದ ಮಕ್ಕಳ ಮನೋಸ್ಥಿತಿಯ ಮೇಲೆ ನಕಾರಾತ್ಮಕ ಪರಿಣಾಮಗಳು ಈಗಾಗಲೇ ಕಂಡು ಬರಲಾರಂಭಿಸಿವೆ.

ಖಿನ್ನತೆ, ಜಡತ್ವ ಸೋಮಾರಿತನ ಕ್ರಿಯಾಶೀಲತೆಯ ಕೊರತೆ, ನಕಾರಾತ್ಮಕ ಚಿಂತನೆಗಳು ಸೇರಿ ಹಲವಾರು ಮನೋವೈಕಲ್ಯಗಳಿಗೆ, ಅಷ್ಟೇ ಅಲ್ಲ ಮಕ್ಕಳಲ್ಲಿ ಆತ್ಮಹತ್ಯಾತ್ಮಕ ಆಲೋಚನೆಗಳು ಬರುವುದಕ್ಕೂ ಕೂಡ ಮೊಬೈಲ್ ಕಾರಣ ಎಂಬುದು ಈಗಾಗಲೇ ಮಾನಸಿಕ ತಜ್ಞರಿಂದ ಕೇಳಿ ಬರಲಾರಂಭಿಸಿರುವ ಮಾತು. ಆದ್ದರಿಂದ ಎಚ್ಚೆತ್ತುಕೊಳ್ಳಲು ಇದು ಸಕಾಲ ಆನ್‌ಲೈನ್ ಮತ್ತು ಇದರ ಋಣಾತ್ಮಕ ಉಪ ಉತ್ಪನ್ನವಾಗಿರುವ ಮೊಬೈಲ್ ಚಟದಿಂದ ಮಕ್ಕಳನ್ನು ಒತ್ತಾಯಪೂರ್ವಕವಾಗಿ ಮುಕ್ತರನ್ನಾಗಿ ಮಾಡಬೇಕಿದೆ. ಇದಕ್ಕೆ ಸಾಮಾಜಿಕ ಜಾಗೃತಿಯೊಂದೇ ಸಾಲದು. ಇದರೊಟ್ಟಿಗೆ, ಸರ್ಕಾರವೇ ದಿಟ್ಟ ನಿರ್ಧಾರ ತೆಗೆದುಕೊಂಡು, ಒಂದರಿಂದ ಪಿಯುಸಿ ಹಂತದವರೆಗೆ ಆನ್‌ಲೈನ್ ಓದು ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಮೊಬೈಲ್ ಬಳಕೆ ನಿಷೇಧಿಸಿ ಕಾನೂನು ಜಾರಿ ಮಾಡಬೇಕು. ಈ ಅನಿಷ್ಟವನ್ನು ಗಂಭೀರವಾಗಿ ತೆಗೆದುಕೊಳ್ಳದೇ ಇದ್ದರೆ ಮುಂದಿನ ಪೀಳಿಗೆಯನ್ನು ಹಾಳು ಬಾವಿಗೆ ತಳ್ಳಿದಂತೆಯೇ ಸರಿ.

**ಆಧಾರ:** ಸಂಯುಕ್ತ ಕರ್ನಾಟಕ,ದಿನಾಂಕ:22.06.2025

## 12. ಬೆಂಗಳೂರಿನಲ್ಲಿ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನ

11ನೇ ಕಾಮನ್‌ವೆಲ್ತ್ ಸಂಸದೀಯ ಸಂಘ ಭಾರತ ವಲಯದ ಸಮ್ಮೇಳನವನ್ನು ಮುಂಬರುವ ಸೆಪ್ಟೆಂಬರ್ 9 ಮತ್ತು 10ರಂದು ಬೆಂಗಳೂರಿನಲ್ಲಿ ನಡೆಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ವಿಧಾನ ಸಭಾಧ್ಯಕ್ಷರಾದ ಯು.ಟಿ. ಖಾದರ್ ಫರೀದ್ ಲೋಕಸಭಾಧ್ಯಕ್ಷ ಓಂ.ಬಿರ್ಲಾ ಅವರನ್ನು ನವದೆಹಲಿಯಲ್ಲಿ ಭೇಟಿ ಮಾಡಿ ಸಮ್ಮೇಳನಕ್ಕೆ ರಾಜ್ಯವನ್ನು ಆಯ್ಕೆ ಮಾಡಿದ್ದಕ್ಕಾಗಿ ಅಭಿನಂದಿಸಿದ್ದಾರೆ.

ಈ ಸಮ್ಮೇಳನದಲ್ಲಿ ಭಾರತದ ಎಲ್ಲಾ ರಾಜ್ಯಗಳ ಪೀಠಾಸೀನ ಅಧಿಕಾರಗಳು ಭಾಗವಹಿಸುವುದಲ್ಲದೇ ಪ್ರಪ್ರಥಮ ಬಾರಿಗೆ ಅಂತರಾಷ್ಟ್ರೀಯ ಮಟ್ಟದ ಕಾಮನ್‌ವೆಲ್ತ್ ದೇಶಗಳ ಪೀಠಾಸೀನಾಧಿಕಾರಿಗಳನ್ನು ಆಹ್ವಾನಿಸುವ ಕುರಿತು ಮತ್ತು ಸಮ್ಮೇಳನದಲ್ಲಿ ಚರ್ಚಿಸಬೇಕಾದ ವಿಷಯಗಳ ಕುರಿತು ಉಭಯ ಗಣ್ಯರು ಸಮಾಲೋಚನೆ ನಡೆಸಿದರು. ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ಸೆಪ್ಟೆಂಬರ್ 8ರಂದು ವಿಧಾನಸೌಧದ ಬೃಹತ್ ಮೆಟ್ಟಲುಗಳ ಮೇಲೆ ಹಮ್ಮಿಕೊಳ್ಳುವ ಬಗ್ಗೆ ಹಾಗೂ ಕರ್ನಾಟಕ ವಿಧಾನಸಭೆಯಲ್ಲಿ ಇತ್ತೀಚೆಗೆ ಜಾರಿಗೆ ತಂದಿರುವ ಅನೇಕ ಪ್ರಗತಿಪರ ಬದಲಾವಣೆಗಳ ಬಗ್ಗೆ ಖಾದರ್ ಲೋಸಭಾಧ್ಯಕ್ಷರ ಗಮನಕ್ಕೆ ತಂದರು. ಕರ್ನಾಟಕ ಇತಿಹಾಸದಲ್ಲಿ ಅಂತರಾಷ್ಟ್ರೀಯ ಮಟ್ಟದ ಸಮ್ಮೇಳನವನ್ನು ಆಯೋಜಿಸಲು ಸಂಪೂರ್ಣ ಸಹಕಾರವನ್ನು ನೀಡುವುದಾಗಿ ಲೋಕಸಭಾಧ್ಯಕ್ಷ ಓಂ ಬಿರ್ಲಾ ಭರವಸೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ವಿಧಾನ ಸಭೆಯ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ, ಲೋಕಸಭೆಯ ಸಚಿವಾಲಯದ ಅಧಿಕಾರಿಗಳು ಹಾಜರಿದ್ದರು.

**ಆಧಾರ:** ವಿಜಯ ಕರ್ನಾಟಕ, ದಿನಾಂಕ:26.06.2025

## 13. ವಿಧಾನಸೌಧಕ್ಕೆ ಬಿಹಾರದ ನಿಯೋಗ

ಬಿಹಾರ ಸರ್ಕಾರದ ಭರವಸೆ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರ ನಿಯೋಗ ವಿಧಾನಸೌಧಕ್ಕೆ ಭೇಟಿ ನೀಡಿತ್ತು. ಅಧ್ಯಕ್ಷ ಶಾಸಕ ಪ್ರೊ.ವೀರೇಂದ್ರ ನಾರಾಯಣ್ ಯಾದವ್, ಶಾಸಕ ಸಮಿತಿ ಸದಸ್ಯ ಸರ್ವೇಶ್ವರ್ ಕುಮಾರ್, ಕುಮಾರ್ ನಾಗೇಂದ್ರ ಅವರನ್ನು ರಾಜ್ಯ ಭರವಸೆ ಸಮಿತಿ ಅಧ್ಯಕ್ಷ ಟಿ.ಎ.ಶರವಣ ಸ್ವಾಗತಿಸಿದರು. ಅನಂತರ ಎರಡು ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಸಭೆ ನಡೆಸಿದರು. ಬಿಹಾರ ಮತ್ತು ಕರ್ನಾಟಕದಲ್ಲಿ ಭರವಸೆಗಳ ಅನುಷ್ಠಾನ, ರಾಜ್ಯಗಳ ಅನುಭವಗಳ ವಿನಿಮಯ ಮತ್ತು ಆಡಳಿತಾತ್ಮಕ ಪ್ರಕ್ರಿಯೆಗಳ ಬಗ್ಗೆ ಸವಿವರ ಚರ್ಚೆ ನಡೆಸಿದರು. ಬಿಹಾರ ಸರ್ಕಾರಿ ಭರವಸೆ ಸಮಿತಿ ಸದಸ್ಯರೊಂದಿಗೆ ಕಾರ್ಯವೈಖರಿ ಕುರಿತಂತೆ ಮಾಹಿತಿ ವಿನಿಮಯ ಮಾಡಿಕೊಂಡರು. ಎರಡು ರಾಜ್ಯಗಳ ನಡುವೆ ಉತ್ತಮ ಆಡಳಿತ ಸಹಕಾರಕ್ಕೆ ಮತ್ತಷ್ಟು ದಾರಿ ಮಾಡಿದರು.

**ಆಧಾರ:** ವಿಜಯ ವಾಣಿ, ದಿನಾಂಕ:27.06.2025

## 14. ಶಿಕ್ಷಕರ ಮೇಲಿನ ಪಠ್ಯೇತರ ಹೊರೆ ಇಳಿಸಿ

ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರಿಗೆ ಪಠ್ಯೇತರ ಕೆಲಸದ ಹೊರೆ ಹೆಚ್ಚಾಗಿದೆ ರಾಜ್ಯ ಸರ್ಕಾರ ಇದಕ್ಕಾಗಿ ಪ್ರತ್ಯೇಕ ಸಿಬ್ಬಂದಿ ನಿಯೋಜನೆ, ಬೇರೆ ವ್ಯವಸ್ಥೆ ಮಾಡಬೇಕು. ಚಿಕ್ಕಿ, ಬಾಳೆಹಣ್ಣು, ತತ್ತಿ(ಮೊಟ್ಟೆ) ಕೊಡುವುದು ಶಿಕ್ಷಕರ ಕೆಲಸವಲ್ಲ, ಇದನ್ನೇ ಶಿಕ್ಷಕರು ಮಾಡಿದರೆ ಗುಣಮಟ್ಟದ ಶಿಕ್ಷಣ ಹೇಗೆ ನಿರೀಕ್ಷಿಸಲು ಸಾಧ್ಯ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಪ್ರಶ್ನಿಸಿದರು.

ಉಣಕಲ್ ಕೆರೆಗೆ ದಿನಾಂಕ:27.06.2025ರಂದು ಬಾಗಿನ ಅರ್ಪಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದೇನೆ. ಅವರೊಂದಿಗೆ ಮಾತನಾಡಿದ್ದೇನೆ. ಸಾಧ್ಯವಾದರೆ ಮುಖ್ಯಮಂತ್ರಿಯವರೊಂದಿಗೂ ಮಾತನಾಡುತ್ತೇನೆ. ಆದಷ್ಟು ಬೇಗ ಈ ವ್ಯವಸ್ಥೆ ಸರಿ ಹೋಗಬೇಕಾಗಿದೆ ಎಂದು ಆಶಯ ವ್ಯಕ್ತಪಡಿಸಿದರು.

ಮೊನ್ನೆ ಒಂದು ಶಾಲೆಗೆ ಕಳಿಸಿದ ತತ್ತಿ (ಮೊಟ್ಟೆ)ಯಲ್ಲಿ 11 ತತ್ತಿಗಳು ಒಡೆದಿದ್ದವಂತೆ. ಅವುಗಳನ್ನು ಕಸದ ಬುಟ್ಟಿಗೆ ಹಾಕಿ ಬೇರೆ 11 ತತ್ತಿಗಳನ್ನು ಹೊರಗಡೆ ತರಿಸಿ ಶಿಕ್ಷಕರು ಮಕ್ಕಳಿಗೆ ಕೊಟ್ಟಿದ್ದಾರೆ. ಹನ್ನೊಂದು ತತ್ತಿ ಕೆಟ್ಟಿದ್ದು ಯಾಕೆ ತಿಳಿಸಲಿಲ್ಲ? ನೀವೇಕೆ ಖರೀದಿಸಿ ಮಕ್ಕಳಿಗೆ ಕೊಟ್ಟಿದ್ದೀರಿ? ಎಂದು ಶಿಕ್ಷಣಾಧಿಕಾರಿ ಆ ಶಿಕ್ಷಕರಿಗೆ ನೋಟಿಸ್ ಕೊಟ್ಟಿದ್ದಾರಂತೆ. ಇಂತಹ ಶಿಕ್ಷಣಾಧಿಕಾರಿಗಳು ಇದ್ದಾರೆ. ಬಹಳಷ್ಟು ಶಿಕ್ಷಣಾಧಿಕಾರಿ ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಶಿಕ್ಷಣ ವ್ಯವಸ್ಥೆ, ಶಾಲಾ ಸ್ಥಿತಿಗತಿ, ಶಿಕ್ಷಕರ ಮತ್ತು ಮಕ್ಕಳ ಸಮಸ್ಯೆಯ ಅರಿವು ಇಲ್ಲ. ಬರೀ ಕಚೇರಿ, ಐಬಿಯಲ್ಲಿ ಕುಳಿತು ಸಮಯ ಕಳೆಯುತ್ತಾರೆ ಎಂದು ಹೊರಟ್ಟಿ ಬೇಸರ ವ್ಯಕ್ತಪಡಿಸಿದರು.

ಶಾಲಾ ಕೊಠಡಿಗಳು ಬೀಳುವ ಸ್ಥಿತಿಯಲ್ಲಿರುವುದು. ಶಿಥಿಲಗೊಂಡಿರುವ ಬಗ್ಗೆ, ಶಾಲೆಯ ಮೂಲಸೌಕರ್ಯ ಸ್ಥಿತಿಗತಿ ನಿಗಾ ವಹಿಸುವುದು, ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು ಶಿಕ್ಷಣಾಧಿಕಾರಿಗಳದ್ದೇ ಕೆಲಸ. ಅದನ್ನು ಸರಿಯಾಗಿ ನಿರ್ವಹಿಸದೇ, ಫಾಲೋ ಅಪ್ ಮಾಡದೇ ಇರುವುದರಿಂದ ಶಾಲೆಗಳ ಕೊಠಡಿ ಬೀಳುತ್ತಿವೆ. ಶಿಕ್ಷಣ ಸಚಿವರಿಗೂ ಈ ವಿಷಯ ತಿಳಿಸಿದ್ದೇನೆ. ಸರಿಪಡಿಸುವುದಾಗಿ ಹೇಳಿದ್ದಾರೆ. ಮುಂದಿನ ಸದನದಲ್ಲಿ ಇಂತಹ ವಿಷಯಗಳ ಬಗ್ಗೆ ಶಾಸಕರು ಚರ್ಚೆಗೆ ಅವಕಾಶ ಕೋರಿದರೆ ಅವಕಾಶ ಮಾಡಿಕೊಡುತ್ತೇನೆ ಎಂದರು.

**ಧಾರವಾಡ ಜಿಲ್ಲಾಧಿಕಾರಿ ಚಿಂತನೆ ಮಾದರಿ**: ಧಾರವಾಡ ಜಿಲ್ಲಾಧಿಕಾರಿ ದಿವ್ಯಾಪಭು ಅವರು ಜಿಲ್ಲೆಯ ಸರ್ಕಾರಿ ಶಾಲೆಯಲ್ಲಿ ಪಠ್ಯೇತರ ಕೆಲಸಕ್ಕೆ ಪ್ರತ್ಯೇಕ ಸಿಬ್ಬಂದಿ ಅಥವಾ ಬದಲಿ ವ್ಯವಸ್ಥೆ ಮಾಡುವ ಬಗ್ಗೆ ತಿಳಿಸಿದ್ದಾರೆ. ರಾಜ್ಯ ಸರ್ಕಾರವು ಅವರ ಈ ಪ್ರಸ್ತಾವನೆಗೆ ಅನುಮೋದನೆ ನೀಡಬೇಕು. ಇದು ಮಾದರಿಯಾದ ಕೆಲಸ. ರಾಜ್ಯದ ಎಲ್ಲ ಶಾಲೆಗಳಿಗೂ ಅನ್ವಯಿಸಿ ಆದೇಶಿಸಬೇಕು ಎಂದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ:26.06.2025

# ಭಾಗ–2

# ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು

## 1. 'ವಿಶೇಷ ಸದನ ಸಮಿತಿ'ಯ ಅವಧಿಯನ್ನು ವಿಸ್ತರಿಸಿರುವ ಬಗ್ಗೆ ಲಘು ಪ್ರಕಟಣೆ

**ಕರ್ನಾಟಕ ವಿಧಾನ ಪರಿಷತ್ತು**

ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ:12ನೇ ಜೂನ್, 2025**

**ಸಂಖ್ಯೆ: 23**

**ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ, ಅಂತಿಮ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ 'ವಿಶೇಷ ಸದನ ಸಮಿತಿ'ಯ ಅವಧಿಯನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ, ದಿನಾಂಕ:22.04.2025 ರಿಂದ ಆರು ತಿಂಗಳವರೆಗೆ ವಿಸ್ತರಿಸಲಾಗಿದೆಯೆಂದು ಈ ಮೂಲಕ ತಿಳಿಸಲಾಗಿದೆ.**

**ಕೆ.ಆರ್.**
**ಮಹಾಲಕ್ಷ್ಮೀ**
ಕಾರ್ಯದರ್ಶಿ

**ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ:**

## 2. ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ ಲಘು ಪ್ರಕಟಣೆ

**ಕರ್ನಾಟಕ ವಿಧಾನ ಪರಿಷತ್ತು**

ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ:27ನೇ ಜೂನ್, 2025**

**ಸಂಖ್ಯೆ:24**

**ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ: ಕೆ. ಗೋವಿಂದರಾಜ್ ಅವರನ್ನು ಸರ್ಕಾರಿ ಭರವಸೆಗಳ ಸಮಿತಿಯ ಸದಸ್ಯರನ್ನಾಗಿ ಮಾನ್ಯ ಸಭಾಪತಿಯವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 192ರ ರೀತ್ಯಾ ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.**

ಎಸ್. ನಿರ್ಮಲ
**ಕಾರ್ಯದರ್ಶಿ–2**
**ಕರ್ನಾಟಕ ವಿಧಾನ ಪರಿಷತ್ತು**

**ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ:**

**www://kla.kar.nic.in/council/council.htm**

## 3. ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಉಪ ಸಮಿತಿ ರಚನೆ ಬಗ್ಗೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಆರನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಗುರುವಾರ, ದಿನಾಂಕ 08ನೇ ಮೇ, 2025**

---

### ಸಂಖ್ಯೆ: 147

ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ. ಕಲ್ಯಾಣ ಸಮಿತಿಯು ದಿನಾಂಕ:11.04.2025ರಂದು ಸಭೆ ಸೇರಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಡಿ ಬರುವ ಇಲಾಖೆ/ಸಂಸ್ಥೆ/ನಿಗಮ/ಮಂಡಳಿ/ಪ್ರಾಧಿಕಾರ/ನಿರ್ದೇಶನಾಲಯಗಳಲ್ಲಿರುವ ಯೋಜನೆಗಳು, ಕಾರ್ಯಕ್ರಮಗಳು, ಕಳೆದ ಮೂರು ವರ್ಷಗಳಲ್ಲಿ ಮಂಜೂರಾದ, ಬಿಡುಗಡೆಯಾದ, ಖರ್ಚು ಮಾಡಲಾದ ಮತ್ತು ವೆಚ್ಚವಾಗದೇ ಬಾಕಿಯಿರುವ ಅನುದಾನ, ಬುಡಕಟ್ಟು ಉಪಯೋಜನೆಯಡಿಯಲ್ಲಿ ಹಂಚಿಕೆ ಮಾಡಲಾದ ಅನುದಾನದಲ್ಲಿ ಈ ಸಮುದಾಯದವರಿಗೆ ಹಮ್ಮಿಕೊಳ್ಳಲಾಗಿರುವ ಯೋಜನೆ/ಕಾರ್ಯಕ್ರಮಗಳ ಕುರಿತು ಚರ್ಚಿಸುವ ಸಂದರ್ಭದಲ್ಲಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಬರುವ ವಸತಿ ಶಾಲೆ, ಕಾಲೇಜುಗಳ ನಿರ್ವಹಣೆ ಮತ್ತು ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ ಕಾರ್ಯಗಳ ಬಗ್ಗೆ ಪರಿಶೀಲಿಸಿ ದಾಖಲೆ ಸಮೇತ ಸಮಿತಿಗೆ ವರದಿಯನ್ನು ಸಲ್ಲಿಸಲು, ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿಗಳ ನಿಯಮ 216ರ ಮೇರೆಗೆ ಸನ್ಮಾನ್ಯ ಸಭಾಧ್ಯಕ್ಷರು. ವಿಧಾನಸಭೆಯ ಸದಸ್ಯರಾದ **ಶ್ರೀ ಅಬ್ಬಯ್ಯ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ** ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಈ ಕೆಳಕಂಡ ಸದಸ್ಯರನ್ನೊಳಗೊಂಡ ಉಪ ಸಮಿತಿಯನ್ನು ರಚಿಸಿರುತ್ತಾರೆ. ಈ ಸಮಿತಿಯು ಒಂದು ತಿಂಗಳೊಳಗಾಗಿ ವರದಿಯನ್ನು ಸಲ್ಲಿಸಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಶ್ರೀಯುತರುಗಳಾದ:**

**1. ಜಿ. ಹಂಪಯ್ಯ ನಾಯಕ್ ಬಲ್ಲಟಗಿ – ಸದಸ್ಯರು**

**2. ಎನ್. ಶ್ರೀನಿವಾಸಯ್ಯ – ಸದಸ್ಯರು**

3. ಕೃಷ್ಣಾ ನಾಯ್ಕ ಕೆ – ಸದಸ್ಯರು
4. ಡಾ. ಡಿ. ತಿಮ್ಮಯ್ಯ – ಸದಸ್ಯರು

ಸಮಿತಿಯ ಪರಿಶೀಲನಾಂಶಗಳು:

1. ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ ವಸತಿ ಶಾಲೆ, ಕಾಲೇಜುಗಳ ನಿರ್ವಹಣೆ:

2. ಸದರಿ ವಸತಿ ಶಾಲೆ, ಕಾಲೇಜುಗಳ ಕಟ್ಟಡ ನಿರ್ಮಾಣ ಕಾರ್ಯಗಳು:

3. ವಸತಿ ಶಾಲೆ, ಕಾಲೇಜುಗಳ ಕಟ್ಟಡ ನಿರ್ಮಾಣ ಕಾರ್ಯಗಳಲ್ಲಿ ಚದುರ ಅಡಿಗೆ ವ್ಯಯಿಸಲಾಗುತ್ತಿರುವ ವೆಚ್ಚ:

4. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಡಿ ಬರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಪಂಗಡಗಳ ವಸತಿ ಶಾಲೆ, ಕಾಲೇಜುಗಳ ನಿರ್ವಹಣೆ:

5. ಸದರಿ ವಸತಿ ಶಾಲೆ, ಕಾಲೇಜುಗಳ ಕಟ್ಟಡ ನಿರ್ಮಾಣ ಕಾರ್ಯಗಳು:

6. ವಸತಿ ಶಾಲೆ, ಕಾಲೇಜುಗಳ ಕಟ್ಟಡ ನಿರ್ಮಾಣ ಕಾರ್ಯಗಳಲ್ಲಿ ಚದುರ ಅಡಿಗೆ ವ್ಯಯಿಸಲಾಗುತ್ತಿರುವ ವೆಚ್ಚ

7. ಉಪ ಸಮಿತಿಯು ತನ್ನ ವಿವೇಚನಾಧಿಕಾರದನ್ವಯ ಪರಿಶೀಲನಾ ವಿಷಯಕ್ಕೆ ಸಂಬಂಧಿಸಿದಂತೆ ನೀಡುವ ಇನ್ನಿತರೆ ಯಾವುದೇ ಶಿಫಾರಸ್ಸುಗಳ ವಿವರಗಳು:

ಎಂ.ಕೆ. ವಿಶಾಲಾಕ್ಷಿ
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ ಸಚಿವಾಲಯ

ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.

## 4. ವಿಧಾನ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಾ, ಅಶಿಸ್ತು ಹಾಗೂ ಅಗೌರವದಿಂದ ವರ್ತಿಸಿದ ಮಾನ್ಯ ಸದಸ್ಯರುಗಳ ಅಮಾನತು ಹಿಂಪಡೆದಿರುವ ಬಗ್ಗೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಆರನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಭಾನುವಾರ, ದಿನಾಂಕ 25ನೇ ಮೇ, 2025**

---

**ಸಂಖ್ಯೆ: 149**

ಕಳೆದ ಅಧಿವೇಶನದ ಅವಧಿಯಲ್ಲಿ ದಿನಾಂಕ:21.03.2025ರಂದು ಸದನದಲ್ಲಿ ಪೀಠದ ಆದೇಶವನ್ನು ಲೆಕ್ಕಿಸದೇ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಾ, ಅಶಿಸ್ತಿನಿಂದ ಹಾಗೂ ಆಗೌರವದಿಂದ ನಡೆದುಕೊಂಡಿದ್ದರಿಂದ ಮಾನ್ಯ ವಿಧಾನಸಭಾ ಸದಸ್ಯರುಗಳಾದಂತಹ ಶ್ರೀ ದೊಡ್ಡನಗೌಡ ಹೆಚ್, ಪಾಟೀಲ್, (ವಿರೋಧ ಪಕ್ಷದ ಮುಖ್ಯ ಸಚೇತಕರು), ಡಾ: ಅಶ್ವಥ್ ನಾರಾಯಣ್ ಸಿ.ಎನ್., ಶ್ರೀ ಎಸ್.ಆರ್. ವಿಶ್ವನಾಥ್, ಶ್ರೀ ಉಮಾನಾಥ್ ಎ. ಕೋಟ್ಯಾನ್, ಶ್ರೀ ಶರಣು ಸಲಗರ, ಡಾ: ಶೈಲೇಂದ್ರ ಬೆಲ್ದಾಳೆ. ಶ್ರೀ ಸಿ.ಕೆ. ರಾಮಮೂರ್ತಿ, ಶ್ರೀ ಯಶಪಾಲ್ ಎ. ಸುವರ್ಣ, ಶ್ರೀ ಬಿ.ಪಿ. ಹರೀಶ್, ಡಾ. ಭರತ್ ಶೆಟ್ಟಿ ವೈ. ಶ್ರೀ ಮುನಿರತ್ನ, ಶ್ರೀ ಬಸವರಾಜ್ ಮತ್ತಿಮೂಡ್, ಶ್ರೀ ಧೀರಜ್ ಮುನಿರಾಜು ಮತ್ತು ಡಾ: ಚಂದ್ರು ಲಮಾಣಿ ಅವರುಗಳನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 348ರ ಮೇರೆಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮಂಡಿಸಿದ ಹಾಗೂ ಸದನವು ಅಂಗೀಕರಿಸಿದ ಪ್ರಸ್ತಾವದಂತೆ ತಕ್ಷಣದಿಂದ ಜಾರಿಗೆ ಬರುವಂತೆ 6 ತಿಂಗಳುಗಳ ಕಾಲ ಸದನಕ್ಕೆ ಬಾರದಂತೆ ತಡೆಹಿಡಿದು ಅಮಾನತ್ತುಗೊಳಿಸಿದ್ದ ನಿರ್ಣಯವನ್ನು ಹಿಂತೆಗೆದುಕೊಳ್ಳುವಂತೆ ಕೋರಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅಮಾನತ್ತುಗೊಂಡ ಸದಸ್ಯರು ಸಲ್ಲಿಸಿದ್ದ ಮನವಿಯ ಬಗ್ಗೆ ದಿನಾಂಕ:25.05.2025ರಂದು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಯವರು, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು, ಮಾನ್ಯ ಉಪ ಸಭಾಧ್ಯಕ್ಷರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರು ಸಭೆ ನಡೆಸಿರುತ್ತಾರೆ.

ಸದರಿ ಸಭೆಯಲ್ಲಿ, ಅಮಾನತ್ತಿನ ಅವಧಿಯಲ್ಲಿ ಈಗಾಗಲೇ 2 ತಿಂಗಳು ಕಳೆದಿದ್ದು, ಸದರಿ ಅವಧಿಯಲ್ಲಿ ಅಮಾನತ್ತುಗೊಂಡಿರುವ ಸದಸ್ಯರುಗಳು ತಮ್ಮ ನಡೆಯ ಬಗ್ಗೆ ಈಗಾಗಲೇ ವಿಷಾದ ವ್ಯಕ್ತಪಡಿಸಿದ್ದು ಹಾಗೂ ಇನ್ನು ಮುಂದೆ ಸಂವಿಧಾನಾತ್ಮಕವಾಗಿ ಸದನದ ಕಾರ್ಯಕಲಾಪಗಳಲ್ಲಿ

ಸಂಯಮದಿಂದ ನಡೆದುಕೊಳ್ಳುವುದಾಗಿ ತಿಳಿಸಿರುವುದನ್ನು ಪರಿಗಣಿಸಿ ಆಡಳಿತ ಪಕ್ಷದ ಶಾಸಕಾಂಗ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಉಪ ಮುಖ್ಯಮಂತ್ರಿಯವರು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಒಮ್ಮತ ಸೂಚಿಸಿದ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಮಾನ್ಯ ಸದಸ್ಯರುಗಳು ಸಂವಿಧಾನಾತ್ಮಕವಾಗಿ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸಲು ಮಾಡಿಕೊಡುವ ಉದ್ದೇಶದಿಂದ ಅಮಾನತ್ತುಗೊಳಿಸಲಾಗಿರುವ ಮಾನ್ಯ ಸದಸ್ಯರುಗಳಾದಂತಹ ಶ್ರೀ ದೊಡ್ಡನಗೌಡ ಹೆಚ್. ಪಾಟೀಲ್, (ವಿರೋಧ ಪಕ್ಷದ ಮುಖ್ಯ ಸಚೇತಕರು). ಡಾ: ಅಶ್ವಥ್ ನಾರಾಯಣ್ ಸಿ.ಎನ್, ಶ್ರೀ ಎಸ್.ಆರ್. ವಿಶ್ವನಾಥ್, ಶ್ರೀ ಬಿ.ಎ. ಬಸವರಾಜ, ಶ್ರೀ ಎಂ.ಆರ್. ಪಾಟೀಲ್, ಶ್ರೀ ಚನ್ನಬಸಪ್ಪ (ಚೆನ್ನಿ), ಶ್ರೀ ಬಿ. ಸುರೇಶ್ ಗೌಡ, ಶ್ರೀ ಉಮಾನಾಥ್ ಎ. ಕೋಟ್ಯಾನ್, ಶ್ರೀ ಶರಣು ಸಲಗರ, ಡಾ: ಶೈಲೇಂದ್ರ ಬೆಲ್ದಾಳೆ. ಶ್ರೀ ಸಿ.ಕೆ. ರಾಮಮೂರ್ತಿ, ಶ್ರೀ ಯಶಪಾಲ್ ಎ. ಸುವರ್ಣ, ಶ್ರೀ ಬಿ.ಪಿ. ಹರೀಶ್, ಡಾ: ಭರತ್ ಶೆಟ್ಟಿ ವೈ, ಶ್ರೀ ಮುನಿರತ್ನ, ಶ್ರೀ ಬಸವರಾಜ್ ಮತ್ತಿಮೂಡ್, ಶ್ರೀ ಧೀರಜ್ ಮುನಿರಾಜು ಮತ್ತು ಡಾ:ಚಂದ್ರು ಲಮಾಣಿ ಅವರುಗಳನ್ನು ಅಮಾನತ್ತುಗೊಳಿಸಲಾಗಿದ್ದ ನಿರ್ಣಯವನ್ನು ಹಿಂತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿಯವರುಗಳ ಅಮಾನತ್ತು ಅವಧಿಯಲ್ಲಿ ವಿಧಿಸಿದ್ದ ಈ ಕೆಳಕಂಡ ಪರಿಣಾಮಗಳು ತಕ್ಷಣದಿಂದ ರದ್ದುಗೊಳ್ಳುತ್ತವೆ.

1. ಅವರುಗಳು ವಿಧಾನಸಭೆಯ ಸಭಾಂಗಣ, ಲಾಬಿ ಮತ್ತು ಗ್ಯಾಲರಿಗಳಿಗೆ ಪ್ರವೇಶಿಸುವಂತಿಲ್ಲ.
2. ಅವರು ಸದಸ್ಯರಾಗಿರುವ ವಿಧಾನಮಂಡಲದ/ವಿಧಾನಸಭೆಯ ಸ್ಥಾಯಿ ಸಮಿತಿಗಳ ಸಭೆಗಳಲ್ಲಿಯೂ ಭಾಗವಹಿಸುವಂತಿಲ್ಲ.
3. ವಿಧಾನ ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಅವರುಗಳ ಹೆಸರಿನಲ್ಲಿ ಯಾವುದೇ ವಿಷಯವನ್ನು ನಮೂದು ಮಾಡತಕ್ಕದಲ್ಲ.
4. ಅಮಾನತ್ತಿನ ಅವಧಿಯಲ್ಲಿ ಅವರುಗಳು ನೀಡುವ ಯಾವುದೇ ಸೂಚನೆಗಳನ್ನು ಸ್ವೀಕರಿಸಲಾಗುವುದಿಲ್ಲ.
5. ಅಮಾನತ್ತಿನ ಅವಧಿಯಲ್ಲಿ ನಡೆಯುವ ಸಮಿತಿಗಳ ಚುನಾವಣೆಯಲ್ಲಿ ಅವರುಗಳು ಮತದಾನ ಮಾಡುವಂತಿಲ್ಲ.
6. ಅಮಾನತ್ತಿನ ಅವಧಿಯಲ್ಲಿ ಅವರುಗಳು ಯಾವುದೇ ದಿನಭತ್ಯೆಯನ್ನು ಪಡೆಯಲು ಅರ್ಹರಿರುವುದಿಲ್ಲ.

ಮೇಲ್ಕಂಡ ಆಮಾನತ್ತು ನಿರ್ಣಯವನ್ನು ಹಿಂಪಡೆದ ಬಗ್ಗೆ ಮುಂದಿನ ಅಧಿವೇಶನದಲ್ಲಿ ಸದನದ ಘಟನೋತ್ತರ ಅನುಮೋದನೆ ಪಡೆಯಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ ಎಂದು ಈ ಮೂಲಕ ತಿಳಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ ಸಚಿವಾಲಯ

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

# ಭಾಗ–3

# ಸಂಸತ್ ಸುದ್ದಿಗಳು

## 1. ವಲಸೆ ಮತ್ತು ವಿದೇಶಿಯರ ಮಸೂದೆ ರಾಜ್ಯ ಸಭೆಯಲ್ಲೂ ಅಂಗೀಕಾರ

ಕಳೆದ ದಿನಾಂಕ:27.03.2025ರಂದು ಲೋಕಸಭೆಯಲ್ಲಿ ಪಾಸ್ ಆಗಿದ್ದ ವಲಸೆ ಮತ್ತು ವಿದೇಶಿಯರ ಮಸೂದೆ 2025ಅನ್ನು ದಿನಾಂಕ:02.04.2025ರಂದು ರಾಜ್ಯಸಭೆಯಲ್ಲೂ ಅಂಗೀಕರಿಸಲಾಗಿದೆ.

ರಾಜ್ಯಸಭೆಯಲ್ಲಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅವರು ಮಂಡಿಸಿದ್ದ ವಲಸೆ ಮತ್ತು ವಿದೇಶಿಯರ ಮಸೂದೆಯನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು. ಮಸೂದೆಯ ಮೇಲಿನ ಚರ್ಚೆಗೆ ಉತ್ತರಿಸಿದ ನಿತ್ಯಾನಂದ ರೈ. ಪಶ್ಚಿಮ ಬಂಗಾಳದಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರ ಮತ್ತು ಟಿಎಂಸಿ ಸರ್ಕಾರ, ಅಕ್ರಮ ವಲಸಿಗರಿಗೆ ದೇಶ ಪ್ರವೇಶಿಸಲು ಸಹಾಯ ಮಾಡಿದ್ದಾರೆ. ಮತದಾರರ ಪಟ್ಟಿ ಮತ್ತು ಪಡಿತರ ಚೀಟಿಗಳಲ್ಲಿ ಅವರ ಹೆಸರುಗಳನ್ನು ಸೇರಿಸುವ ಮೂಲಕ ದೇಶದಲ್ಲಿ ಅಕ್ರಮ ವಾಸ್ತವ್ಯಕ್ಕೆ ಅವಕಾಶ ನೀಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಇದಕ್ಕೆ ಕಾಂಗ್ರೆಸ್ ಮತ್ತು ಟಿಎಂಸಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು ಮತ್ತು ಇತರ ವಿರೋಧ ಪಕ್ಷಗಳ ಸದಸ್ಯರೊಂದಿಗೆ ಸಭಾತ್ಯಾಗ ಮಾಡಿದರು. ದೇಶದ ಭದ್ರತೆ ಮತ್ತು ಆರ್ಥಿಕತೆಯನ್ನು ಬಲಪಡಿಸಲು, ಉತ್ಪಾದನೆ ಮತ್ತು ವ್ಯಾಪಾರವನ್ನು ಉತ್ತೇಜಿಸಲು, ಶಿಕ್ಷಣ ವ್ಯವಸ್ಥೆಗೆ ಜಾಗತಿಕ ಮನ್ನಣೆ ಪಡೆಯಲು ಮತ್ತು ವಿಶ್ವವಿದ್ಯಾಲಯಗಳು ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಲು ಈ ಮಸೂದೆ ಅಗತ್ಯವಾಗಿದೆ ಎಂದು ರೈ ಹೇಳಿದರು.

ದಿನಾಂಕ:27.03.2025ರಂದು ಲೋಕಸಭೆಯಲ್ಲಿ ಅಮಿತ್ ಶಾ ಅವರು ಮಂಡಿಸಿದ ವಲಸೆ ಮತ್ತು ವಿದೇಶಿಯರ ಮಸೂದೆಯನ್ನು ವಾದ–ವಿವಾದಗಳ ಮಧ್ಯೆ ವಿರೋಧ ಪಕ್ಷದ ಸದಸ್ಯರು ಸೂಚಿಸಿದ ತಿದ್ದುಪಡಿಗಳನ್ನು ತಿರಸ್ಕರಿಸಿ, ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

**ಆಧಾರ:** ಕನ್ನಡ ಪ್ರಭ, ದಿನಾಂಕ:09.05.2025

## 2. ವಕ್ಫ್ ಕಾಯ್ದೆ ಜಾರಿ

ಸಂಸತ್‌ನಲ್ಲಿ ಅಂಗೀಕಾರಗೊಂಡಿದ್ದ ವಕ್ಫ್(ತಿದ್ದುಪಡಿ) ಕಾಯ್ದೆಯು ದಿನಾಂಕ:06.05.2025ರಂದು ಜಾರಿಗೆ ಬಂದಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಈ ಕುರಿತು ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ ಅಧಿಸೂಚನೆ ಹೊರಡಿಸಿದೆ.

ಲೋಕಸಭೆಯಲ್ಲಿ ಏಪ್ರಿಲ್ 3ರಂದು ಹಾಗೂ ರಾಜ್ಯಸಭೆಯಲ್ಲಿ ಏಪ್ರಿಲ್ 4ರಂದು ಈ ತಿದ್ದುಪಡಿ ಮಸೂದೆ ಅಂಗೀಕಾರಗೊಂಡಿತ್ತು. ಏಪ್ರಿಲ್ 5ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಮಸೂದೆಗೆ ಅಂಕಿತ ಹಾಕಿದ್ದಾರೆ.

**ಆಧಾರ:** ಪ್ರಜಾವಾಣಿ, ದಿನಾಂಕ:09.05.2025

## 3. ಸರ್ವಪಕ್ಷ ನಿಯೋಗದಲ್ಲಿ ರಾಜ್ಯದ ಇಬ್ಬರು ಸಂಸದರು

ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆ ವಿರುದ್ಧ, ಆಪರೇಶನ್ ಸಿಂಧೂರ ಕಾರ್ಯಾಚರಣೆ ಬಗ್ಗೆ ಭಾರತದ ಸಂದೇಶವನ್ನು ಜಾಗತಿಕ ವೇದಿಕೆಗಳಲ್ಲಿ ಪ್ರಚುರಪಡಿಸಲು ಬೆಂಗಳೂರು ದಕ್ಷಿಣದ ಸಂಸದ ತೇಜಸ್ವಿ ಸೂರ್ಯ ಹಾಗೂ ದ.ಕ.ಸಂಸದ ಕ್ಯಾ.ಬ್ರಿಜೇಶ್ ಚೌಟ ಭಾಗವಹಿಸಲಿದ್ದಾರೆ.

ಕಾಂಗ್ರೆಸ್ ಸಂಸದ ಡಾ. ಶಶಿ ತರೂರ್ ನೇತೃತ್ವದ ಉನ್ನತ ಮಟ್ಟದ ನಿಯೋಗದೊಂದಿಗೆ ತೇಜಸ್ವಿ ಸೂರ್ಯ ಅಮೆರಿಕ ಮತ್ತು ಲ್ಯಾಟಿನ್ ಅಮೆರಿಕಕ್ಕೆ ತೆರಳಲಿದ್ದಾರೆ. ನರೇಂದ್ರ ಮೋದಿ ಸರ್ಕಾರವು 32 ದೇಶಗಳು ಮತ್ತು ಯುರೋಪಿಯನ್ ಒಕ್ಕೂಟಕ್ಕೆ ಭೇಟಿ ನೀಡಲು ಏಳು ಸರ್ವಪಕ್ಷ ನಿಯೋಗಗಳನ್ನು ರಚಿಸಿದ್ದು. ಈ ಭೇಟಿಯು ಪ್ರಮುಖ ರಾಜತಾಂತ್ರಿಕ ಪ್ರಯತ್ನದ ಭಾಗವಾಗಿದೆ. ಪ್ರತಿ ತಂಡವು ನೀತಿ ಮತ್ತು ರಾಜತಾಂತ್ರಿಕ ಪರಿಣತಿಯನ್ನು ಹೊಂದಿರುವ ಸಂಸದರಿಗೆ ಬೆಂಬಲ ನೀಡಲು ನಿವೃತ್ತ ರಾಜತಾಂತ್ರಿಕರನ್ನು ಕೂಡ ಒಳಗೊಂಡಿದೆ. ಈ ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಸಂಸದ ತೇಜಸ್ವಿ ಸೂರ್ಯ, ಅಮೆರಿಕಕ್ಕೆ ತೆರಳಲಿರುವ ಭಾರತೀಯ ನಿಯೋಗದಲ್ಲಿ ಡಾ. ಶಶಿ ತರೂರ್ ಅವರೊಂದಿಗೆ ನಾನೂ ಕೂಡ ಭಾಗವಹಿಸಲಿದ್ದೇನೆ ಎಂದು ಹೇಳಿದ್ದಾರೆ. ನಿಯೋಗಗಳ ಭೇಟಿಯು ಮೇ 23 ರಿಂದ ಪ್ರಾರಂಭವಾಗಿ ಜೂನ್ 6 ರವರೆಗೆ ನಡೆಯಲಿದೆ. ತೇಜಸ್ವೀ ಸೂರ್ಯ ಅವರೊಂದಿಗೆ, ಮಂಗಳೂರು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟಾ ಅವರು ಸ್ಪೇನ್, ಗ್ರೀಸ್‌ಗೆ ತೆರಳುವ ಮತ್ತೊಂದು ನಿಯೋಗದ ಭಾಗವಾಗಿದ್ದಾರೆ.

ಪಾಕಿಸ್ತಾನದ ಮುಖವಾಡ ವಿಶ್ವದೆದುರು ಕಳಚಲು ಸಪ್ತ ನಿಯೋಗ ಸಿದ್ಧವಾಗಿದ್ದು, ಈ ನಿಯೋಗವು ವಿದೇಶಗಳಿಗೆ ಭೇಟಿ ನೀಡಲಿದೆ. 7 ಸಂಸದರ ನೇತೃತ್ವದಲ್ಲಿ ವಿವಿಧ ದೇಶಗಳಿಗೆ ನಿಯೋಗ ತೆರಳಲಿದ್ದು, ಈ ನಿಯೋಗದಲ್ಲಿ, ದ.ಕ.ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಕೂಡ ತೆರಳಲಿರುವರು. ಈ ನಿಯೋಗದ ನೇತೃತ್ವವನ್ನು ಡಿಎಂಕೆ ಸಂಸದೆ ಕನಿಮೋಳಿ ವಹಿಸಲಿದ್ದು, ಈ ಕುರಿತು ಸಂಸದ ಕ್ಯಾಪ್ಟನ್ ಬ್ರಿಜೇಶ್ ರಷ್ಯಾ, ಸ್ಪೇನ್, ಗ್ರೀಸ್, ಸ್ಲೋವೇನಿಯಾ, ಲಟ್ವಿಯಾ ದೇಶಗಳಿಗೆ ತೆರಳಲಿದ್ದೇವೆ. ನನಗೆ ಇದೊಂದು ಹೆಮ್ಮೆಯ ಕ್ಷಣವಾಗಿದೆ. ನಾನು ಭಾರತವನ್ನು ವಿಶ್ವ ವೇದಿಕೆಯಲ್ಲಿ ಸಂಸದನಾಗಿ, ಪೂರ್ವ ಸೈನಿಕನಾಗಿ ಪ್ರತಿನಿಧಿಸುತ್ತಿದ್ದೇನೆ. ಒಬ್ಬ ಸೈನಿಕನಾಗಿ ಭಾರತದ ಸೇನಾಪಡೆಗಳು ಆಪರೇಷನ್ ಸಿಂಧೂರ್‌ನಲ್ಲಿ ನಡೆದುಕೊಂಡ ರೀತಿಯ ಬಗ್ಗೆ ಹೆಮ್ಮೆಯಿದೆ ಎಂದು ತಿಳಿಸಿದರು. ಕಳೆದ ಹಲವಾರು ದಶಕಗಳಿಂದ ಪಾಕಿಸ್ತಾನ ಭಯೋತ್ಪದನೆಗೆ ಪ್ರೋತ್ಸಾಹ ನೀಡುತ್ತಿದೆ. ಕಾಶ್ಮೀರದಲ್ಲಿ ಉಗ್ರವಾದ ಚಟುವಟಿಕೆಗೆ ಸಹಕಾರ ಪ್ರೋತ್ಸಾಹ ನೀಡುತ್ತಿದೆ. ಈ ವಿಚಾರ ಇಡೀ ಜಗತ್ತಿಗೆ ಈ ವಿಷಯ ಗೊತ್ತಾಗಿದೆ. ಭಯೋತ್ಪಾದನೆ ಪ್ರೋತ್ಸಾಹಿಸುತ್ತಿರುವ ಪಾಕಿಸ್ತಾನದ ನೀತಿಯನ್ನು ಇಡೀ ಜಗತ್ತಿಗೆ ಮನದಟ್ಟು ಮಾಡಬೇಕಾಗಿದೆ. ಈ ವಿಷಯ ತಿಳಿಸುವ ಪ್ರಯತ್ನಕ್ಕೆ ಪ್ರಧಾನಿ ನರೇಂದ್ರ ಮೋದಿ ಮುಂದಾಗಿದ್ದಾರೆ ಎಂದು ಹೇಳಿದರು. ವಿಶ್ವದೆದುರು ಪಾಕಿಸ್ತಾನದ ಮುಖವಾಡ ಕಳಚಲು ಸಪ್ತ ನಿಯೋಗ ರಚಿಸಲಾಗಿದೆ. ಸಂಸದರು ಹಾಗೂ ರಾಜತಾಂತ್ರಿಕರು ಇರುವ 7 ತಂಡ ರಚಿಸಲಾಗಿದೆ. ಈ ನಿಯೋಗ ವಿಶ್ವದ ವಿವಿಧ ದೇಶಗಳಿಗೆ ಭೇಟಿ ನೀಡಿಲಿದೆ. ಈ ನಿಯೋಗದಲ್ಲಿ ನನಗೂ ಸ್ಥಾನ ನೀಡಲಾಗಿದೆ. ನಾನು ಅತ್ಯಂತ ಉತ್ಸುಕನಾಗಿದ್ದೇನೆ. ಈ ಹೊಸ ಭಾರತದ ಶಕ್ತಿಯನ್ನು, ಉಗ್ರವಾದದ ವಿರುದ್ಧ ಈ ಹೊಸ ಭಾರತ ಹೇಗೆ ಎದೆಯೊಡ್ಡಿ ನಿಲ್ಲಲಿದೆ. ಉಗ್ರವಾದದ ವಿರುದ್ಧ ಜಿರೋಟಾಲರೆನ್ಸ್ ಎಂಬ ಭಾರತದ ನಿಲುವು ಹೇಳಬೇಕಿದೆ ಎಂದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ:19.05.2025

## 4. ಜುಲೈ 21 ರಿಂದ ಸಂಸತ್ ಮುಂಗಾರು ಅಧಿವೇಶನ: ಸಚಿವ ಕಿರಣ್ ರಿಜಿಜು

ಜುಲೈ 21 ರಿಂದ ಆಗಸ್ಟ್ 12ರವರೆಗೆ ಸಂಸತ್ ಮುಂಗಾರು ಅಧಿವೇಶನ ನಡೆಸಲು ಸಂಸದೀಯ ವ್ಯವಹಾರಗಳ ಕುರಿತಾದ ಸಂಪುಟ ಸಮಿತಿಯ ಈ ನಿರ್ಧಾರ ತೆಗೆದುಕೊಂಡಿದೆ ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ತಿಳಿಸಿದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ನಡೆಸಲಾದ ಸಮಿತಿಯನ್ನು ಈ ದಿನಾಂಕಗಳಿಗೆ ಶಿಫಾರಸ್ಸು ಮಾಡಲಾಗಿದೆ ಎಂದರು. ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಕುರಿತು ಚರ್ಚಿಸಲು ವಿಶೇಷ ಅಧಿವೇಶನ ಕರೆಯುವಂತೆ ಪ್ರತಿಪಕ್ಷಗಳ ಒತ್ತಾಯಿಸಿದ್ದವು. ಈ ನಡುವೆಯೇ ಇದೀಗ ಮುಂಗಾರು ಅಧಿವೇಶನದ ದಿನಾಂಕದ ಘೋಷಣೆ ಹೊರ ಬಿದ್ದಿದೆ.

ಆಪರೇಷನ್ ಸಿಂಧೂರ್ ಕುರಿತು ಪ್ರತಿಪಕ್ಷಗಳು ವಿಶೇಷ ಅಧಿವೇಶನಕ್ಕೆ ಬೇಡಿಕೆ ಇಟ್ಟಿರುವ ಕುರಿತು ಪ್ರಶ್ನೆಗೆ ಉತ್ತರಿಸಿದ ಸಚಿವರು, ಮುಂಗಾರು ಅಧಿವೇಶನದಲ್ಲಿ ನಿಯಮಗಳ ಅಡಿ ಎಲ್ಲ ವಿಷಯಗಳನ್ನು ಚರ್ಚಿಸಬಹುದಾಗಿದೆ ಎಂದು ಹೇಳಿದ್ದಾರೆ.

**ಆಧಾರ:** ಪ್ರಜಾವಾಣಿ, ದಿನಾಂಕ:04.06.2025

## 5. ಪ್ರಶ್ನೆಯಲ್ಲಿ ತೇಜಸ್ವಿಸೂರ್ಯ ನಂ.1

ನಗರದಿಂದ ಆಯ್ಕೆಯಾಗಿರುವ ನಾಲ್ವರು ಸಂಸದರ ಒಂದು ವರ್ಷದ ಸಾಧನೆ, 32 ಶಾಸಕರ ಎರಡು ವರ್ಷದ ಸಾಧನೆ ಏನು ಎಂಬುದರ ಬಗ್ಗೆ 'ಸಿವಿಕ್' ಸಂಸ್ಥೆಯು ನಾಗರಿಕ ವರದಿಯನ್ನು ಬಿಡುಗಡೆ ಮಾಡಿದೆ.

ಸಂಸತ್ ಅಧಿವೇಶನದಲ್ಲಿ ಭಾಗವಹಿಸುವುದರಲ್ಲಿ ಪಿ.ಸಿ. ಮೋಹನ್ ಮೊದಲ ಸ್ಥಾನದಲ್ಲಿದ್ದರೆ, ಪ್ರಶ್ನೆ ಕೇಳುವುದರಲ್ಲಿ ತೇಜಸ್ವಿ ಸೂರ್ಯ ಮೊದಲ ಸ್ಥಾನ ಪಡೆದಿದ್ದಾರೆ. ಸಂಸದರ ನಿಧಿ ಬಳಕೆಯಲ್ಲಿ ಡಾ. ಸಿ.ಎನ್. ಮಂಜುನಾಥ್ ಮುಂಚೂಣಿಯಲ್ಲಿದ್ದಾರೆ ಎಂದು ವರದಿ ತಿಳಿಸಿದೆ.

ಕಲಾಪದಲ್ಲಿ ಸಂಸದ ಪಿ.ಸಿ. ಮೋಹನ್ ಅವರು ಶೇ.98.51, ಜಿ.ಎನ್. ಮಂಜುನಾಥ್ ಶೇ.94ರಷ್ಟು ಭಾಗವಹಿಸಿದ್ದಾರೆ. ರಾಷ್ಟ್ರೀಯ ಸರಾಸರಿಯು ಶೇ.87 ಆಗಿದ್ದು, ತೇಜಸ್ವಿ ಸೂರ್ಯ ಶೇ.77.6ರಷ್ಟು ಹಾಜರಾತಿ ಹೊಂದಿದ್ದಾರೆ. ಸಚಿವೆ ಶೋಭಾ ಕರಂದ್ಲಾಜೆ ಅವರ ಹಾಜರಾತಿ ವಿವರಗಳನ್ನು ವರದಿಯಲ್ಲಿ ನೀಡಿಲ್ಲ.

ತೇಜಸ್ವಿಸೂರ್ಯ 84 ಪ್ರಶ್ನೆಗಳನ್ನು ಕೇಳಿದ್ದರೆ, ಸಿ.ಎನ್.ಮಂಜುನಾಥ್ 9, ಪಿ.ಸಿ. ಮೋಹನ್ 1 ಪ್ರಶ್ನೆ ಮಾತ್ರ ಕೇಳಿದ್ದಾರೆ. ಮಂಜುನಾಥ್ ಶೇ.126.64, ತೇಜಸ್ವಿ ಸೂರ್ಯ ಶೇ.116, ಶೋಭಾ ಕರಂದ್ಲಾಜೆ ಶೇ.97.6ರಷ್ಟು ಸಂಸದರ ನಿಧಿ ಬಳಕೆ ಮಾಡಿದ್ದರೆ, ಪಿ.ಸಿ. ಮೋಹನ್ ಶೇ.9.48ರಷ್ಟು ಮಾತ್ರ ಬಳಕೆ ಮಾಡಿ ಕೊನೆ ಸ್ಥಾನದಲ್ಲಿದ್ದಾರೆ.

**ಆಧಾರ:** ಪ್ರಜಾವಾಣಿ, ದಿನಾಂಕ:15.06.2025

# ಭಾಗ–4

# ಕೇಂದ್ರ ಸರ್ಕಾರದ ಸುದ್ದಿಗಳು

## 1. ಸಾಗರ ಸುರಕ್ಷತೆಗೆ ಭಾರತ ದಿಟ್ಟ ಹೆಜ್ಜೆ

ಹಿಂದೂ ಮಹಾಸಾಗರ ವಲಯದಲ್ಲಿ ಹಿಡಿತ ಹೊಂದಲು ಕೆಲವು ವರ್ಷಗಳಿಂದ ಯೋಜಿಸಿದ್ದ 'ಇಂಡಿಯನ್ ಓಶಿಯನ್ ಶಿಪ್ ಸಾಗರ' ಕಾರ್ಯಾಚರಣೆಗೆ ಕಾರವಾರದಲ್ಲಿ ಚಾಲನೆ ನೀಡುವ ಮೂಲಕ ಭಾರತವು ಸಾಗರ ಸುರಕ್ಷತೆಯಲ್ಲಿ ಮಹತ್ವದ ಹೆಜ್ಜೆ ಇರಿಸಿದೆ.

ಭಾರತೀಯ ನೌಕಾಪಡೆಯ ಈ ಪ್ರಯತ್ನಕ್ಕೆ ರಾಷ್ಟ್ರೀಯ ಸಾಗರ ದಿನವಾದ ಏಪ್ರಿಲ್ 5 ರಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಕಾರವಾರ ಕದಂಬ 'ನೌಕಾನೆಲೆಯಲ್ಲಿ ಚಾಲನೆ ನೀಡಿದರು. ಹಿಂದೂ ಮಹಾಸಾಗರ ವ್ಯಾಪ್ತಿಯಲ್ಲಿ ಚೀನಾ ತನ್ನ ಪ್ರಾಬಲ್ಯ ಸಾಧಿಸಲು ಯತ್ನಿಸುತ್ತಿರುವ ಬೆನ್ನಲ್ಲೇ ಭಾರತ ತನ್ನ ಒಂಬತ್ತು ಮಿತ್ರ ರಾಷ್ಟ್ರಗಳ ಜತೆ ಹಿಂದೂ ಮಹಾಸಾಗರದಲ್ಲಿ ಗಸ್ತು ಬಲಿಷ್ಠಗೊಳಿಸುವ ಕಾರ್ಯಯೋಜನೆ ಕೈಗೊಂಡಿದೆ. 'ಒನ್ ಓಶಿಯನ್ ಒನ್ ಮಿಷನ್' ಎಂಬ ಉಪಕ್ರಮದಡಿ ಈ ಹೆಜ್ಜೆ ಇಟ್ಟಿದೆ.

ಹಿಂದೂ ಮಹಾಸಾಗರ ವಲಯ (ಐಒಎಸ್) ವ್ಯಾಪಿಯಲ್ಲಿ ನಡೆಯುವ ಐಒಎಸ್ ಸಾಗರ ಯೋಜನೆಗೆ 'ಐಎನ್‌ಎಸ್ ಸುನಯನ' ಹೆಸರಿನ ಗಸ್ತು ಹಡಗನ್ನು ನಿಯೋಜನೆ ಮಾಡಲಾಗಿದೆ. ಇದರಲ್ಲಿ ಭಾರತೀಯ ನೌಕಾ ಸಿಬ್ಬಂದಿ ಜತೆಗೆ ಆಫ್ರಿಕಾ ಖಂಡದ ಕೊಮೊಕೋಸ್ ಸೇಂಟ್ ಹೆಲ್ತ್ ಕೆನ್ಯಾ, ತಾಂಜಾನಿಯಾ, ಮಾಲ್ಡೀವ್ಸ್ ಮುಝಾಂಬಿಕ್, ಶ್ರೀಲಂಕಾ, ಮಾರಿಶಸ್, ಮಡ್ಗಾಸ್ಕರ್ ಸೇರಿ 9 ದೇಶಗಳ 44 ಸಿಬ್ಬಂದಿ ಭಾಗಿಯಾಗಿದ್ದಾರೆ. ಅವರಿಗೆ ಮೊದಲ ಹಂತದಲ್ಲಿ ಕಾರವಾರದಲ್ಲಿ ಎರಡು ವಾರ ತರಬೇತಿ ನೀಡಿ ಈಗ ಹಡಗಿನಲ್ಲಿ ಕಾರ್ಯಾಚರಣೆಗೆ ತೊಡಗಿಸಿಕೊಳ್ಳಲಾಗಿದೆ. ಸುನಯನ ಹಡಗು ಕೊಚ್ಚಿಯಲ್ಲಿ ತನ್ನ ಸಮುದ್ರ ಪರಿಕ್ರಮ ಹಾಗೂ ಬಂದರು ಪರಿಶೀಲನೆ ನಡೆಸಿಕೊಂಡು ಕಾರವಾರಕ್ಕೆ ಆಗಮಿಸಿತ್ತು. ಇಲ್ಲಿಂದ ಹೊರಟ ಹಡಗು ಹಿಂದೂ ಮಹಾಸಾಗರ ವಲಯದಲ್ಲಿ ಮೇ ಮೊದಲ ವಾರದವರೆಗೂ ಕಾರ್ಯಾಚರಣೆ ನಡೆಸಲಿದೆ. ಭಾರತ ಪಶ್ಚಿಮ ಕರಾವಳಿಯ ಸ್ಪೆಷಲ್ ಎಕನಾಮಿಕ್ ಝೋನ್ ವ್ಯಾಪ್ತಿಯಲ್ಲಿ ಗಸ್ತು ನಡೆಸಲಿದೆ. ತಾಂಜಾನಿಯಾ ಮತ್ತಿತರ ಸಾಗರ ಪ್ರದೇಶಕ್ಕೂ ಹೋಗಲಿದೆ ಎಂದು ನೌಕಾದಳ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದರು.

ಇದೇ ವೇಳೆ ರಾಜನಾಥಸಿಂಗ್ ಅವರು ಸೀಬರ್ಡ್ ನೌಕಾ ಯೋಜನೆಯ 2ನೇ ಹಂತದ ವಿಸ್ತರಣೆಯ ವಿವಿಧ ಕಾಮಗಾರಿಗಳನ್ನು ಉದ್ಘಾಟಿಸಿದರು. ಯುದ್ಧ ಹಡಗುಗಳ ಹೊಸ ನಿಲ್ದಾಣಗಳು (ಹಾರ್ಬರ್), ವಸತಿ ಸಮುಚ್ಚಯಗಳು, ಯುದ್ಧ ಹಡಗು ರಿಪೇರಿ ಪ್ರಾಂಗಣ ಸೇರಿ ಮುಕ್ತಾಯವಾದ ಹಲವು ಕಾಮಗಾರಿಗಳನ್ನು ಉದ್ಘಾಟಿಸಿದರು. ಜತೆಗೆ ನೌಕಾಪಡೆಯ ಕಮಾಂಡರ್‌ಗಳ ಈ ವರ್ಷದ ಮೊದಲ ಸಭೆಯನ್ನು ಕಾರವಾರದಲ್ಲೇ ನಡೆಸಿದರು.

**ಆಧಾರ:** ವಿಜಯ ಕರ್ನಾಟಕ, ದಿನಾಂಕ:06.04.2025

## 2. FM: Set aside political differences, support One Nation, One Poll

UNION Finance Minister Nirmala Sitharaman has reiterated that the "One Nation, One Election" initiative is not a hastily made politcal decision but a result of a comprehensive study conducted by a high level committee.

Speaking at a seminar held at a private college near Chennai the minister said that implementation of simultaneous polls will begin only after the 2029 Lok Sabha elections and it will come into effect only in the 2034 parliamentary elections.

"The Constitution 129th Amendment Bill 2024 and the Union Territories Laws Amendment Bill 2024 are crucial steps in moving towards synchronised elections. Contrary to the narrative, this was not a decision taken in haste or by a few bureaucrats. A committee, headed by former President Ram Nath Kovind, has studied the matter thoroughly and en-gaged with representatives of 47 political parties. Of them, 32 parties supported the initiative including parties from Tamil Nadu such as PMK, TMC(M), and PNK," she said.

Sitharaman pointed out that India had simultaneous polls during the 1957 general elections, and it was only due to political instability and misuse of Article 356 in the 1960s and 1970s that frequent elections be came the norm.

She cited studies by the Election Commission (1983), Law Commission (1999, 2015, 2018), and NITI Aayog (2017), all recommending synchronised elections to ensure administrative efficiency and policy continuity.

Highlighting the financial burden of frequent polls, she said the estimated cost of the 2024 Lok Sabha elections was Rs.1 lakh crore, whereas holding simultaneous elections could save up to Rs 12,000 crore.

Referring to former leaders like M Karunanidhi (former Tamil Nadu CM) who supported the concept. Sitharaman urged all parties to set aside political differences and support the initiative in the nation's interest.

**Courtesty:**India Express, dated:06.04.2025

## 3. ನ್ಯಾಯಾಂಗ–ಪೊಲೀಸ್ ವ್ಯವಸ್ಥೆಯಲ್ಲಿ ಕರ್ನಾಟಕ ನಂ.1

ಇಂಡಿಯಾ ಜಸ್ಟಿಸ್ ರಿಪೋರ್ಟ್‌ನ ನಾಲ್ಕನೇ ವರದಿ ದಿನಾಂಕ:15.04.2025ರಂದು ಬಿಡುಗಡೆ ಆಗಿದ್ದು, ಈ ವರದಿ ಪ್ರಕಾರ ಪೊಲೀಸ್, ಕಾರಾಗೃಹ, ನ್ಯಾಯಾಂಗ ಮತ್ತು ಕಾನೂನು ವ್ಯವಸ್ಥೆಗಳಲ್ಲಿ ಕರ್ನಾಟಕ ಅಗ್ರಸ್ಥಾನ ಪಡೆದಿದೆ.

ಇಂಡಿಯಾ ಜಸ್ಟೀಸ್ ರಿಪೋರ್ಟ್–2025 ಪ್ರಕಾರ ಪೊಲೀಸ್, ಕಾರಾಗೃಹ, ನ್ಯಾಯಾಂಗ, ಕಾನೂನು ವ್ಯವಸ್ಥೆಯಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದ್ದು, ನ್ಯಾಯ ಒದಗಿಸುವ ಸಾಮರ್ಥ್ಯದ ವಾರ್ಷಿಕ ಶ್ರೇಯಾಂಕದಲ್ಲಿ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಮೊದಲ 3 ಸ್ಥಾನ ಪಡೆದಿವೆ. ಈ ರಾಜ್ಯಗಳ ಕಾರ್ಯಕ್ಷಮತೆಯಲ್ಲಿ ಗಮನಾರ್ಹ ಸುಧಾರಣೆ ಕಂಡಿರುವುದಾಗಿ ವರದಿ ಉಲ್ಲೇಖಿಸಿದೆ. ಪಶ್ಚಿಮಬಂಗಾಳ ದೊಡ್ಡ ಮತ್ತು ಮಧ್ಯಮ ಗಾತ್ರದ 18 ರಾಜ್ಯಗಳಲ್ಲಿ ಕೊನೆಯ ಸ್ಥಾನದಲ್ಲಿದೆ.

ಪೊಲೀಸ್, ನ್ಯಾಯಾಂಗ, ಕಾರಾಗೃಹಗಳು ಮತ್ತು ಕಾನೂನು ನೆರವಿನಲ್ಲಿ ರಾಜ್ಯಗಳ ಸಾಮರ್ಥ್ಯದ ಆಧಾರದ ಮೇಲೆ ಐಜೆಆರ್ ರ್‍ಯಾಂಕಿಂಗ್ ಪ್ರಕಟಿಸಲಾಗಿದ್ದು, ಇದರಲ್ಲಿ ಕರ್ನಾಟಕ 10ರಲ್ಲಿ 6.78, ಪಶ್ಚಿಮ ಬಂಗಾಳ ಒಟ್ಟಾರೆ 3.63 ಅಂಕ ಗಳಿಸಿದೆ.

ಬಿಹಾರ, ರಾಜಸ್ಥಾನ, ಜಾರ್ಖಂಡ್, ಉತ್ತರಾಖಂಡ, ಉತ್ತರಪ್ರದೇಶ ಮತ್ತು ಪಶ್ಚಿಮಬಂಗಾಳದಂಥ ರಾಜ್ಯಗಳು ಕೊನೆಯ ಸ್ಥಾನಗಳಲ್ಲಿವೆ. ವಿಶೇಷವಾಗಿ ಕಳೆದ ಬಾರಿ ಕೊನೆಯ ಸ್ಥಾನದಲ್ಲಿದ್ದ ಉತ್ತರಪ್ರದೇಶ, ಈ ಬಾರಿ ಒಂದು ಸ್ಥಾನ ಮೇಲಕ್ಕೇರಿದೆ. ಕಳೆದ ಸಮೀಕ್ಷೆಯಲ್ಲಿ 11ನೇ ಸ್ಥಾನದಲ್ಲಿದ್ದ ತೆಲಂಗಾಣ, ಈ ಬಾರಿ ಮೂರನೇ ಸ್ಥಾನಕ್ಕೆ ಜಿಗಿದಿದೆ. ಏಳು ಸಣ್ಣ ರಾಜ್ಯಗಳ ಪೈಕಿ ಸಿಕ್ಕಿಂ ಅತ್ಯುತ್ತಮ ಪ್ರದರ್ಶನ ನೀಡಿದರೆ, ಗೋವಾ ಸಣ್ಣ ರಾಜ್ಯಗಳ ಪೈಕಿ ಕೊನೆಯ ಸ್ಥಾನದಲ್ಲಿದೆ. 2022 ರಿಂದ 2025ರವರೆಗೆ ಬಿಹಾರವು ಪೊಲೀಸ್ ವಿಭಾಗದಲ್ಲಿ ಹೆಚ್ಚಿನ ಸುಧಾರಣೆ ತೋರಿಸಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

**ಆಧಾರ: ವಿಜಯವಾಣಿ, ದಿನಾಂಕ:16.04.2025**

## 4. ಹದಿನೇಳು ಸಂಸದರಿಗೆ ಸಂಸದ ರತ್ನ ಪ್ರಶಸ್ತಿ

2025ನೇ ಸಾಲಿನ ಸಂಸದ ರತ್ನ ಪ್ರಶಸ್ತಿಗೆ 17 ಸಂಸದರು ಮತ್ತು ಎರಡು ಸಂಸದೀಯ ಸ್ಥಾಯಿ ಸಮಿತಿಗಳನ್ನು ಆಯ್ಕೆ ಮಾಡಲಾಗಿದೆ. ಪ್ರೈಂ ಪಾಯಿಂಟ್ ಫೌಂಡೇಶನ್ ಸ್ಥಾಪಿಸಿರುವ ಈ ಪ್ರಶಸ್ತಿಯನ್ನು ಸಂಸತ್ತಿಗೆ ನೀಡಿದ ಕೊಡುಗೆಗಾಗಿ ಸಂಸದರಿಗೆ ನೀಡಲಾಗುತ್ತದೆ. ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಹಂಸರಾಜ್ ಅಹಿರ್ ಅಧ್ಯಕ್ಷತೆಯ ತೀರ್ಪುಗಾರರ ಸಮಿತಿ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಿದೆ. ಬಿಜೆಪಿಯ ಭರ್ತೃಹರಿ ಮಹ್ತಾಬ್, ಸುಪ್ರಿಯಾ ಸುಳೆ (ಎನ್‌ಸಿಪಿ–ಎಸ್‌ಪಿ) ಮತ್ತು ಎನ್.ಕೆ. ಪ್ರೇಮಚಂದ್ರನ್(ಆರ್‌ಎಸ್‌ಪಿ) ಹಾಗೂ ಶ್ರೀರಂಗ ಅಪ್ಪಾ ಬಾರ್ನೆ 16 ಮತ್ತು 17ನೇ ಲೋಕಸಭೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದರು ಮತ್ತು ಪ್ರಸ್ತುತ 18ನೇ ಲೋಕಸಭೆಯಲ್ಲೂ ಉತ್ತಮ ಕೆಲಸ ಮುಂದುವರೆಸಿದ್ದಾರೆ ಎಂದು ಪ್ರೈಂ ಪಾಯಿಂಟ್ ಫೌಂಡೇಶನ್ ತಿಳಿಸಿದೆ. ಇವರನ್ನು ಹೊಸತುಪಡಿಸಿ ಬಿಜೆಪಿಯ ಸ್ಮಿತಾ ವಾಘ್, ರವಿಕಿಶನ್, ಮೇಧಾ ಕುಲಕರ್ಣಿ, ನಿಶಿಕಾಂತ್ ದುಬೆ, ಬಿದ್ಯುತ್ ಬರನ್ ಮಹಾತೋ, ಪಿ.ಪಿ. ಚೌಧರಿ, ಮದನ್ ರಾಥೋಡ್, ದಿಲೀಪ್ ಸೈಕಿಯಾ, ಅರವಿಂದ್ ಸಾವಂತ್ (ಶಿವಸೇನೆ–ಯುಬಿಟಿ), ನರೇಶ್ ಗಣಪತ್ ಮಾಸ್ಕೆ (ಶಿವಸೇನೆ), ವರ್ಷಾ ಗಾಯಕ್ವಾಡ್ (ಕಾಂಗ್ರೆಸ್), ಸಿ.ಎನ್. ಅಣ್ಣಾದೊರೈ (ಡಿಎಂಕೆ) ಹಾಗೂ ಹಣಕಾಸು ಮತ್ತು ಕೃಷಿ ಸಂಸದೀಯ ಸ್ಥಾಯಿ ಸಮಿತಿಗಳು ಪ್ರಶಸ್ತಿಗೆ ಆಯ್ಕೆಯಾಗಿವೆ.

**ಆಧಾರ:** ವಿಜಯ ವಾಣಿ, ದಿನಾಂಕ:19.05.2025

## 5. ಕರ್ನಾಟಕ ದೇಶದಲ್ಲೇ ನಂ.3 ಅತ್ಯುತ್ತಮ ಸಾಧನಾ ರಾಜ್ಯ

ಆರ್ಥಿಕತೆ, ವಿತ್ತೀಯ, ಶಿಸ್ತು, ಮೂಲಸೌಕರ್ಯ, ಹಣಕಾಸು ಅಭಿವೃದ್ಧಿ ಪರಿಸರ ಸೇರಿದಂತೆ 7 ವಿವಿಧ ಕ್ಷೇತ್ರಗಳ ನಿರ್ವಹಣೆಯಲ್ಲಿ ಅತ್ಯುತ್ತಮ ಸಾಧನೆ ತೋರಿದ ರಾಜ್ಯಗಳ ಪಟ್ಟಿಯನ್ನು ಕೇರ್ ಎಡ್ಜ್ ರೇಟಿಂಗ್ ಸಂಸ್ಥೆ ಬಿಡುಗಡೆ ಮಾಡಿದೆ. ಈ ಪೈಕಿ ಮಹಾರಾಷ್ಟ್ರ ದೇಶದಲ್ಲೇ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ 3ನೇ ಸ್ಥಾನ ಪಡೆದುಕೊಂಡಿದೆ. ಆರ್ಥಿಕತೆ, ವಿತ್ತೀಯ ಶಿಸ್ತು, ಮೂಲಸೌಕರ್ಯ, ಹಣಕಾಸು ಅಭಿವೃದ್ಧಿ,ಸಾಮಾಜಿಕ, ಆಡಳಿತ, ಪರಿಸರ ಎಂಬ 7 ಕ್ಷೇತ್ರಗಳಲ್ಲಿ ಅಧ್ಯಯನ ನಡೆಸಿದೆ. ಹಾಗೂ ವಿವಿಧ

50 ಅಂಶಗಳನ್ನು ರಾಜ್ಯಗಳ ಅಧ್ಯಯನದಲ್ಲಿ ಪರಿಗಣಿಸಲಾಗಿತ್ತು. ಅವುಗಳಲ್ಲಿ ಪಶ್ಚಿಚಮ ಮತ್ತು ದ್ಕಷಿಣ ಭಾರತದ ರಾಜ್ಯಗಳು ಉತ್ತಮ ಸಾಧನೆ ತೋರಿವೆ. ಮಹಾರಾಷ್ಟ್ರ ದೇಶದಲ್ಲೇ ಮೊದಲ ಸ್ಥಾನದಲ್ಲಿದ್ದರೆ, ಗುಜರಾತ್ 2 ಮತ್ತು ಕರ್ನಾಟಕ 3ನೇ ಸ್ಥಾನದಲ್ಲಿವೆ. ತೆಲಂಗಾಣ ಮತ್ತು ತಮಿಳುನಾಡು 4 ಮತ್ತು 5ನೇ ಸ್ಥಾನ ಪಡೆದುಕೊಂಡಿವೆ.

ದಕ್ಷಿಣ ರಾಜ್ಯಗಳಾದ ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ಮತ್ತು ತಮಿಳುನಾಡು ಪರಿಸರ ವಿಭಾಗದಲ್ಲಿ ಅತ್ಯುತ್ತಮ ನಿರ್ವಹಣೆ ಮಾಡಿವೆ. ಗಾಳಿಯ ಗುಣಮಟ್ಟ ಮತ್ತು ನವೀಕರಿಸಬಹುದಾದ ಇಂಧನಕ್ಕೆ ಸಂಬಂಧಿಸಿದಂತೆ ಕರ್ನಾಟಕವು ಪರಿಣಾಮಕಾರಿ ಸಾಧನೆ ತೋರಿದ್ದು, ಎಲ್ಲ ರಾಜ್ಯಗಳಿಗಿಂತ ಮುಂಚೂಣಿಯಲ್ಲಿದೆ ಎಂದು ವರದಿ ತಿಳಿಸಿದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:30.04.2025

## 6. 4ನೇ ಬೃಹತ್ ಆರ್ಥಿಕತೆ

ಜಪಾನ್ ಅನ್ನು ಹಿಂದಿಕ್ಕಿ ಭಾರತ ಜಗತ್ತಿನ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ. ತನ್ಮೂಲಕ ದೇಶದ ಜಿಡಿಪಿ 4 ಶತಕೋಟಿ ಡಾಲರ್‌ಗೆ ತಲುಪಿದೆ ಎಂದು ನೀತಿ ಆಯೋಗದ ಸಿಇಒ ಬಿ.ವಿ.ಆರ್.ಸುಬ್ರಹ್ಮಣ್ಯಂ ತಿಳಿಸಿದ್ದಾರೆ.

ನೀತಿ ಆಯೋಗದ ವಿಕಸಿತ ಭಾರತಕ್ಕಾಗಿ ವಿಕಸಿತ ರಾಜ್ಯ ಎಂಬ ವಿಷಯ ಆಧರಿಸಿದ 10ನೇ ಆಡಳಿತ ಮಂಡಳಿ ಸಭೆಯಲ್ಲಿ ಮಾತನಾಡಿದ ಅವರು, ಅಂತರ್‌ರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್)ನ ದತ್ತಾಂಶವನ್ನು ಉಲ್ಲೇಖಿಸಿ ಜಪಾನ್ ಹಿಂದಿಕ್ಕಿ ಭಾರತ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ ಎಂದರು. ಅಮೆರಿಕ, ಚೀನಾ, ಜರ್ಮನಿ ದೇಶಗಳಷ್ಟೇ ಭಾರತಕ್ಕಿಂತ ಮುಂದಿವೆ. ನಮ್ಮ ಯೋಜನಾ ಕಾರ್ಯಕ್ಕೆ ಬದ್ಧರಾದರೆ ಮುಂದಿನ ಎರಡೂವರೆ ಅಥವಾ 3 ವರ್ಷಗಳಲ್ಲಿ ಜರ್ಮನಿಯನ್ನು ಹಿಂದಿಕ್ಕಿ ಭಾರತ ಜಗತ್ತಿನ ಮೂರನೇ ಆರ್ಥಿಕತೆಯಾಗಲಿದೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

ಐಎಮ್‌ಎಫ್‌ನ ಜಾಗತಿಕ ಆರ್ಥಿಕತೆ ವರದಿಯ ಪ್ರಕಾರ ಮುಂದಿನ ಎರಡು ವರ್ಷಗಳಲ್ಲಿ ಭಾರತದ ಆರ್ಥಿಕತೆ ಅತಿವೇಗದಲ್ಲಿ ಬೆಳೆಯಲಿದೆ. ವಿಕಸಿತ ಭಾರತ ಎಂಬುದು ಕೇವಲ ಘೋಷಣೆಯಾಗಿ ಉಳಿಯಬಾರದು ಅದರ ಹಿಂದೆ ಕಠಿಣ ಪರಿಶ್ರಮದ ಯೋಜನೆ ಇದೆ. ಗುಜರಾತ್, ಆಂಧ್ರಪ್ರದೇಶ, ಉತ್ತರ ಪ್ರದೇಶ ಸೇರಿದಂತೆ 17 ರಾಜ್ಯಗಳು ತಮ್ಮ ಯೋಜನಾ ಕಾರ್ಯವನ್ನು ಸಿದ್ಧಪಡಿಸಿವೆ. ಎಲ್ಲಾ ರಾಜ್ಯಗಳು ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಬೇಕು. 2025ರಲ್ಲಿ ಶೇ.6.2ರಷ್ಟು ಹಾಗೂ 2026ರಲ್ಲಿ ಶೇ.6.3ರಷ್ಟು ಭಾರತದ ಆರ್ಥಿಕತೆ ಬೆಳೆಯಲಿದೆ.

ಜಪಾನ್ ಅನ್ನು  ಹಿಂದಿಕ್ಕಿದ ಭಾರತ ಈಗ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ ಎಂದು ನೀತಿ ಆಯೋಗದ ಸಿಇಒ ಬಿ.ವಿ.ಆರ್.ಸುಬ್ರಮಣ್ಯಂ ತಿಳಿಸಿದ್ದಾರೆ. ಅಂತರ್‌ರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಬಿಡುಗಡೆ ಮಾಡಿರುವ ಅಂಕಿ ಅಂಶದ ಪ್ರಕಾರ ಐದನೇ ಅತಿದೊಡ್ಡ ಆರ್ಥಿಕತೆ ದೇಶವಾಗಿದ್ದ ಭಾರತ ಈಗ ಜಪಾನ್ ಅನ್ನು ಹಿಂದಿಕ್ಕಿ ನಾಲ್ಕನೇ ಸ್ಥಾನಕ್ಕೆ ತಲುಪಿದೆ. ಅಮೆರಿಕ ಮೊದಲ ಸ್ಥಾನದಲ್ಲಿದ್ದರೆ, ಚೀನಾ ಎರಡನೇ ಸ್ಥಾನದಲ್ಲಿದೆ ಹಾಗೂ ಜರ್ಮನಿ ಮೂರನೇ ಸ್ಥಾನದಲ್ಲಿದೆ. ಮುಂದಿನ ಎರಡೂವರೆಯಿಂದ ಮೂರು ವರ್ಷದಲ್ಲಿ ಭಾರತ ಮೂರನೇ ಅತಿದೊಡ್ಡ ಆರ್ಥಿಕತೆಯ ರಾಷ್ಟ್ರವಾಗಲಿದೆ ಎಂದು ಸುಬ್ರಮಣ್ಯಂ ಮಾಹಿತಿ ನೀಡಿದ್ದಾರೆ.

ಐಎಂಎಫ್ ಏಪ್ರಿಲ್‌ನಲ್ಲಿ ಬಿಡುಗಡೆ ಮಾಡಿದ ಅಂಕಿ ಅಂಶಗಳ ಪ್ರಕಾರ 2025ರಲ್ಲಿ ಭಾರತದ ಜಿಡಿಪಿ 4.19 ಟ್ರಿಲಿಯನ್ ಡಾಲರ್‌ನೊಂದಿಗೆ ಐದನೇ ಸ್ಥಾನ ಪಡೆಯಲಿದೆ. ಇದೇ ವೇಳೆ 2013–14ರಲ್ಲಿ 1.22 ಲಕ್ಷ ರೂ.(1,438 ಡಾಲರ್) ಇದ್ದ ತಲಾ ಆದಾಯ 2.45 ಲಕ್ಷ ರೂ.(2,880 ಡಾಲರ್)ಗೆ ಹೆಚ್ಚಳಗೊಂಡಿದೆ. 2025–26ರಲ್ಲಿ ಭಾರತದ ಆರ್ಥಿಕತೆ ಶೇ. 6.2ರ ದರದಲ್ಲಿ ಬೆಳವಣಿಗೆ ಹೊಂದುವ ನಿರೀಕ್ಷೆ ಇದೆ.

ತಲಾ ಆದಾಯದಲ್ಲಿ 144 ನೇ ಸ್ಥಾನ: ಭಾರತದ ತಲಾ ಆದಾಯ ದ್ವಿಗುಣಗೊಂಡಿದ್ದರೂ ಅತಿಹೆಚ್ಚು ತಲಾ ಆದಾಯ ಹೊಂದಿರುವ ದೇಶಗಳ ಪಟ್ಟಿಯಲ್ಲಿ ಭಾರತ 144ನೇ ಸ್ಥಾನ ಪಡೆದಿದೆ. ಈ ಹಿನ್ನೆಲೆಯಲ್ಲಿ 2047ರ ವೇಳೆ ತಲಾ ಆದಾಯ 11.90 ಲಕ್ಷ ರೂ.(14,000 ಡಾಲರ್) ಗಿಂತ ಹೆಚ್ಚು ಮಾಡಲು ಕೇಂದ್ರ ಸರ್ಕಾರ ಯೋಜನೆ ರೂಪಿಸಿದೆ. ಪ್ರಸ್ತುತ ಅತಿಹೆಚ್ಚು ತಲಾ ಆದಾಯ ಹೊಂದಿರುವ ದೇಶಗಳಲ್ಲಿ ಲಕ್ಸೆಂಬರ್ಗ್(1,41,080 ಡಾಲರ್), ಸ್ವಿಟ್ಜರ್ಲೆಂಡ್ (1,11,716 ಡಾಲರ್) ಮತ್ತು ಐರ್ಲೆಂಡ್(1,07,243 ಡಾಲರ್) ಮೊದಲ ಮೂರು ಸ್ಥಾನದಲ್ಲಿವೆ.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ:26.05.2025

## 7. Gen. Dwivedi felicitates BSF officer Neha Bhandari

Army chief General Upendra Dwivedi has awarded a Border Security Force (BSF) woman officer and praised the paramilitary force and former servicemen for their role during Operation Sindoor, the Army said on dated:31.05.2025.

The Chief of the Army Staff reached Jammu on a two-day visit and attended the high level security review meeting chaired by Home Minister Amit Shah. "On 30 May 2025, COAS General Upendra Dwivedi, PVSM, AVSM, felicitated Assistant Commandant Neha Bhandari of BSF Jammu with the Commendation Disc for her exceptional courage and operational proficiency during Operation Sindoor," BSF Jammu had said in a post on X.

**Courtesty:**The Hindu, dated:01.06.2025

# ಭಾಗ–5

# ರಾಜ್ಯ ಸರ್ಕಾರ ಸುದ್ದಿಗಳು

## 1. ಸಾಧಕರಿಗೆ ಜಗಜೀವನ್ ರಾಂ ಪ್ರಶಸ್ತಿ ಪ್ರದಾನ

ಯಾರೂ ಹಸಿವಿನಿಂದ ಮಲಗಬಾರದು ಎನ್ನುವ ಉದ್ದೇಶದಿಂದ ಅನ್ನ ಭಾಗ್ಯ ಜಾರಿ ಮಾಡಿದೆ. ಇದಕ್ಕೆಲ್ಲಾ ಕಾರಣ ಬಾಬು ಜಗಜೀವನರಾಮ್ ಅವರ ಹಸಿರುಕ್ರಾಂತಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಮರಿಸಿದರು.

ವಿಧಾನಸೌಧದಲ್ಲಿ ಸಮಾಜಕಲ್ಯಾಣ ಇಲಾಖೆ ಏರ್ಪಡಿಸಿದ್ದ ಬಾಬು ಜಗಜೀವನ್ ರಾಮ್ ಅವರ ಜನ್ಮದಿನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಾಬು ಜಗಜೀವನ್ ರಾಮ್ ಅವರು ಕೇಂದ್ರ ಸಚಿವರಾಗಿ ಹಸಿರು ಕ್ರಾಂತಿ ಮಾಡಿ ಎಲ್ಲರಿಗೂ ಆಹಾರ ಸಿಗುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರು ಹಾಕಿಕೊಟ್ಟಿರುವ ಹೆಜ್ಜೆ ಗುರುತುಗಳನ್ನು ನಾವೆಲ್ಲರೂ ಪಾಲಿಸಬೇಕು ಎಂದರು. ಜಾತಿ ಸೃಷ್ಟಿಸಿದವರು ನಾವಲ್ಲ, ಆದರೆ ಈ ಜಾತಿಯ ಅಸಮಾನತೆಗೆ ಬಲಿ ಆಗಿರುವವರು ನಾವು, ಜಾತಿ ಇರುವವರೆಗೂ ಸಮಾನ ಅವಕಾಶಗಳು ಸಿಗುವುದಿಲ್ಲ. ಏಕೆಂದರೆ ಜಾತಿ ವ್ಯವಸ್ಥೆಗೆ ಚಲನೆ ಇಲ್ಲ ಎಂದು ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಮಾಜಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪ, ಸಚಿವರಾದ ಡಾ. ಜಿ.ಪರಮೇಶ್ವರ್, ಕೆ.ಎಚ್.ಮುನಿಯಪ್ಪ, ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ಅರ್ಷದ್ ರಿಜ್ವಾನ್ ಮತ್ತಿತರರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅಂಬೇಡ್ಕರ್ ಚಿಂತನೆಯ ಪರವಾಗಿ ಕೆಲಸ ಮಾಡಿದ ಐವರು ಸಾಧಕರಿಗೆ ಬಾಬು ಜಗಜೀವನರಾಮ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:06.04.2025

## 2. ಸ್ಮಾರ್ಟ್ ಸಿಟಿ ಅಭಿವೃದ್ಧಿಗಾಗಿ ಜರ್ಮನಿ ಜತೆ ಮಹತ್ವದ ಒಪ್ಪಂದ

ರಾಜ್ಯ ಸರ್ಕಾರ ಮತ್ತು ಜರ್ಮನಿಯ ಬವೇರಿಯಾ ನಡುವೆ ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಕ್ವಾಂಟಂ ತಂತ್ರಜ್ಞಾನ, ಐಟಿ ಬಿಟಿ, ಸ್ಮಾರ್ಟ್ ಸಿಟಿ, ಉನ್ನತ ಶಿಕ್ಷಣ ಮತ್ತು ಸುಸ್ಥಿರ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ದ್ವಿಪಕ್ಷೀಯ ಸಹಕಾರ ಹೊಂದುವ ಒಪ್ಪಂದ ಜರುಗಿತು.

ಒಪ್ಪಂದದ ಬಳಿಕ ಸಚಿವ ಎಂ.ಬಿ.ಪಾಟೀಲ ಮಾತನಾಡಿ, ಈ ಒಡಂಬಡಿಕೆ ಮುಂದಿನ 5 ವರ್ಷಗಳ ಕಾಲ ಚಾಲ್ತಿಯಲ್ಲಿರುತ್ತದೆ. ಇದರ ಅನ್ವಯ ಕೈಗಾರಿಕೆ 4.0 ವೈಮಾಂತರಿಕ್ಷ, ವೈದ್ಯಕೀಯ ತಂತ್ರಜ್ಞಾನ, ಪರಿಸರ ತಂತ್ರ ಜ್ಞಾನ, ನಗರ ಮೂಲಸೌಕರ್ಯ, ಕೌಶಲ್ಯಾಭಿವೃದ್ಧಿ ಮತ್ತು ನೇಮಕ, ಉದ್ಯಮಶೀಲತೆ, ಸೈಬರ್ ಸೆಕ್ಯುರಿಟಿ ಕ್ಷೇತ್ರಗಳಲ್ಲೂ ಪರಸ್ಪರ ಸಹಕಾರ ಸ್ಥಾಪನೆಯಾಗಲಿದೆ. ಬವೇರಿಯಾ ಪ್ರಾಂತ್ಯವು 2007ರಿಂದಲೂ ರಾಜ್ಯದೊಂದಿಗೆ ವಾಣಿಜ್ಯ ಸಂಬಂಧ ಹೊಂದಿದೆ. ಈಗಿನ ಹೊಸ ಒಡಂಬಡಿಕೆಯಿಂದ ರಾಜ್ಯ ಮತ್ತು ಬವೇರಿಯಾ ನಡುವಿನ ಬಾಂಧವ್ಯ ಮತ್ತೊಂದು ಮಜಲನ್ನು ಕಾಣಲಿದೆ. ವಿಜ್ಞಾನ ಮತ್ತು ಉನ್ನತ ಶಿಕ್ಷಣ ಕ್ಷೇತ್ರಗಳಲ್ಲಿ 2013 ರಿಂದ ದ್ವಿಪಕ್ಷೀಯ ಸಹಕಾರವಿದೆ. ಇನ್ನು ಮುಂದೆ ಬಾಹ್ಯಾಕಾಶ, ಎಲೆಕ್ಟ್ರಾನಿಕ್ಸ್ ಮತ್ತು ರಕ್ಷಣಾ ವಲಯಗಳ ಬಗ್ಗೆ ಗಮನ ಹರಿಸಲು ಹೆಚ್ಚಿನ ಅವಕಾಶವಿದೆ ಎಂದರು.

**ಆಧಾರ:** ವಿಶ್ವವಾಣಿ, ದಿನಾಂಕ:16.04.2025

## 3. 'ಸಕಾಲ', 'ಪೋಡಿ' ಅರ್ಜಿ ವಿಲೇವಾರಿ: ದ.ಕ.ನಂ.1

ಅಟಲ್ ಜನಸ್ನೇಹಿ ಕೇಂದ್ರಗಳಲ್ಲಿ ವಿವಿಧ ಪ್ರಮಾಣ ಪತ್ರಗಳ ಸೇವೆಗಳನ್ನು ತ್ವರಿತವಾಗಿ ನೀಡುವಲ್ಲಿ ರಾಜ್ಯಕ್ಕೆ 2ನೇ ಸ್ಥಾನದಲ್ಲಿದ್ದ ದಕ್ಷಿಣ ಕನ್ನಡ ಜಿಲ್ಲೆ ಈಗ 'ಸಕಾಲ' ಯೋಜನೆ ಹಾಗೂ 'ಪೋಡಿ' ಅರ್ಜಿ ವಿಲೇವಾರಿಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನದಲ್ಲಿದೆ.

ಜಿಲ್ಲಾಡಳಿತದ ಕಾರ್ಯದಕ್ಷತೆಯ ಕೆಲಸದಿಂದದಾಗಿ ದಕ್ಷಿಣ ಕನ್ನಡ ಜಿಲ್ಲೆ ಪ್ರಥಮ ಸ್ಥಾನ ಕಾಯ್ದುಕೊಳ್ಳಲು ಸಾಧ್ಯವಾಗಿದೆ. ಸಕಾಲ ಅರ್ಜಿ ವಿಲೇವಾರಿಯಲ್ಲಿ ಉತ್ತರ ಕನ್ನಡ ಜಿಲ್ಲೆ ಹಾಗೂ ಪೋಡಿ ಅರ್ಜಿ ವಿಲೇವಾರಿಯಲ್ಲಿ ಹಾಸನ ಜಿಲ್ಲೆ ರಾಜ್ಯಕ್ಕೆ ದ್ವಿತೀಯ ಸ್ಥಾನದಲ್ಲಿವೆ. ಈ ಮೂಲಕ ಕಂದಾಯ ಕೆಲಸ ಕಾರ್ಯಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಇತರ ಜಿಲ್ಲೆಗಳಿಗೆ ಮಾದರಿ ಎಂದು ಬೊಟ್ಟು ಮಾಡುವಂತಾಗಿದೆ. ಎರಡೂ ವಿಭಾಗಗಳಲ್ಲಿ ಬೆಂಗಳೂರು ನಗರ ಜಿಲ್ಲೆ ಕೊನೆ ಸ್ಥಾನದಲ್ಲಿದೆ.

ಕಂದಾಯ ಇಲಾಖೆಯ ಮಾಹಿತಿ ಪ್ರಕಾರ ಕಳೆದ ಮಾರ್ಚ್ ತಿಂಗಳಲ್ಲಿ ಸಕಾಲದಲ್ಲಿ ಅರ್ಜಿ ವಿಲೇವಾರಿಯಲ್ಲಿ ಕನ್ನಡ ಜಿಲ್ಲೆ ರಾಜ್ಯಕ್ಕೆ ಪ್ರಥಮ ಸ್ಥಾನದ ಸಾಧನೆ ಮಾಡಿದೆ. ಮಾರ್ಚ್‌ನಲ್ಲಿ 1,08,959 ಅರ್ಜಿ ಸಲ್ಲಿಕೆಯಾಗಿದ್ದು, 1,09,562 ಅರ್ಜಿಗಳನ್ನು (ಬಾಕಿ ಅರ್ಜಿ ಸೇರಿ) ವಿಲೇವಾರಿ ಮಾಡಲಾಗಿದೆ. 3,583 ಅರ್ಜಿಗಳು ತಿರಸ್ಕೃತಗೊಂಡಿವೆ, 3,361 ಅರ್ಜಿಗಳು ತುಸು ವಿಳಂಬವಾಗಿ ವಿಲೇವಾರಿಯಾದರೆ, 1,02,201 ಅರ್ಜಿಗಳು ತ್ವರಿತವಾಗಿ ವಿಲೇವಾರಿಗೊಂಡಿವೆ. ಅಂದರೆ ಶೇ.96.93ರಷ್ಟು ಅರ್ಜಿಗಳು ತ್ವರಿತ ವಿಲೇವಾರಿ ಕಂಡಿವೆ. 321 ಅರ್ಜಿಗಳು ಅವಧಿ ಮೀರಿ ಬಾಕಿಯಾಗಿದ್ದವು. ಸಕಾಲದಲ್ಲಿ ಅರ್ಜಿ ವಿಲೇವಾರಿಯ 32 ಜಿಲ್ಲೆಗಳ ರ್‍ಯಾಂಕಿಂಗ್ ಪಟ್ಟಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮೊದಲ ಸ್ಥಾನ, ಉತ್ತರ ಕನ್ನಡ ದ್ವಿತೀಯ ಹಾಗೂ ಹಾಸನ ತೃತೀಯ ಸ್ಥಾನ ಪಡೆದಿದೆ. ಕೊನೆಯ ಸ್ಥಾನದಲ್ಲಿ ಬೆಂಗಳೂರು ನಗರ ಜಿಲ್ಲೆಯಿದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:17.04.2025

## 4. ಹೆಣ್ಮಕ್ಕಳಿಗೆ ಶೇ.50 ಸೀಟು ಕಡ್ಡಾಯ

ಅನುದಾನಿತ ಹಾಗೂ ಅನುದಾನರಹಿತ ಖಾಸಗಿ ಶಾಲೆಗಳು ಪೂರ್ವ ಪ್ರಾಥಮಿಕ ಹಂತದಿಂದ ಪ್ರೌಢಶಾಲಾ ಹಂತದವರೆಗೂ ನಡೆಸುವ ಶಾಲಾ ಪ್ರವೇಶ ಪ್ರಕ್ರಿಯೆಯಲ್ಲಿ ಶೇ.50ರಷ್ಟು ಸೀಟುಗಳನ್ನು ಹೆಣ್ಣು ಮಕ್ಕಳಿಗೆ ಮೀಸಲಿಡುವುದು ಇನ್ನು ಮುಂದೆ ಕಡ್ಡಾಯ.

ರಾಜ್ಯ ಪಠ್ಯಕ್ರಮ ಹಾಗೂ ಸಿಬಿಎಸ್‌ಇ, ಐಸಿಎಸ್‌ಇ ಸೇರಿದಂತೆ ಕೇಂದ್ರ ಪಠ್ಯಕ್ರಮ ಅನುಸರಿಸುವ, ಸಹ ಶಿಕ್ಷಣ ಹೊಂದಿರುವ ಎಲ್ಲ ಖಾಸಗಿ ಶಾಲೆಗಳು ಎಲ್‌ಕೆಜಿ, ಯುಕೆಜಿ, ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಪ್ರವೇಶ ನೀಡುವಾಗ ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು. ಪ್ರತಿ ತರಗತಿಯಲ್ಲೂ ಲಭ್ಯವಿರುವ ಸೀಟುಗಳಲ್ಲಿ ಶೇ.50ರಷ್ಟು ಹೆಣ್ಣು ಮಕ್ಕಳಿಗೆ ಮೀಸಲಿಡಬೇಕು. ಒಂದು ವೇಳೆ ನಿರೀಕ್ಷಿತ ಅರ್ಜಿಗಳು ಲಭ್ಯವಿಲ್ಲದೇ ಇದ್ದಾಗ ಉಳಿಕೆ ಸೀಟುಗಳನ್ನು ಬಾಲಕರಿಗೆ ನೀಡಬಹುದು. ಈ ಕುರಿತು ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಬಹುತೇಕ ಖಾಸಗಿ ಶಾಲೆಗಳಲ್ಲಿ 2025-26ನೇ ಸಾಲಿನ ಪ್ರವೇಶ ಪ್ರಕ್ರಿಯೆ ಮುಗಿಯುತ್ತಾ ಬಂದಿದೆ. ಈಗ ಹೊರಡಿಸಿದ ನಿಯಮಗಳಿಂದ ಹೆಚ್ಚು ಪ್ರಯೋಜನವಾಗದು ಎಂದು ಹಲವು ಪೋಷಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಶಿಕ್ಷಣ ಕಾಯ್ದೆ, ಉಚಿತ ಮತ್ತು ಕಡ್ಡಾಯ ಶಿಕ್ಷಣ, ಸಿಬಿಎಸ್‌ಇ, ಐಸಿಎಸ್‌ಇ ಬೈಲಾಗಳ ನಿಯಮಗಳಂತೆ ಸರ್ಕಾರ ನಿರ್ಧಾರ ಕೈಗೊಂಡಿರುವುದು ಸ್ವಾಗತಾರ್ಹ. ಎಷ್ಟೇ ಕಠಿಣ ಕ್ರಮ ಕೈಗೊಂಡರೂ, ಖಾಸಗಿ ಶಾಲೆಗಳು ಮಾರ್ಚ್, ಏಪ್ರಿಲ್ ಒಳಗೆ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸುತ್ತವೆ. ನವೆಂಬರ್, ಡಿಸೆಂಬರ್ ಸುತ್ತೋಲೆ ಹೊರಡಿಸಿದ್ದರೆ ಅನುಕೂಲವಾಗುತ್ತಿತ್ತು ಎನ್ನುತ್ತಾರೆ ಪೋಷಕರಾದ ನಾಗರತ್ನ ಕೋರಿಶೆಟ್ಟಿ, ಅಕ್ಷತಾ ನಾಯಕ್.

ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಹೊರತುಪಡಿಸಿ, ಶಾಲೆಗಳನ್ನು ಅನುದಾನಿತ ಹಾಗೂ ಅನುದಾನರಹಿತ ಖಾಸಗಿ ಶಾಲೆಗಳು ಬಾಲಕಿಯರಿಗೆ ಶೇ.50ರಷ್ಟು ಸೀಟು ಮೀಸಲಿಡುವ ಜತೆಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ನಿಗದಿಪಡಿಸಿದ ಮೀಸಲಾತಿಯನ್ನು ಪಾಲಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳಲ್ಲಿ ಶೇ.50ರಷ್ಟು ಸೀಟುಗಳನ್ನು ಅದೇ ಸಮುದಾಯದ ಮಕ್ಕಳಿಗೆ ಪ್ರವೇಶ ನೀಡಬೇಕು ಎಂದು ಸೂಚಿಸಲಾಗಿದೆ.

ಪ್ರತಿ ವರ್ಷವೂ ಶೈಕ್ಷಣಿಕ ವರ್ಷ ಆರಂಭಕ್ಕೆ ಮುನ್ನವೇ ವೇಳಾಪಟ್ಟಿ, ಶಾಲೆಯಲ್ಲಿ ಲಭ್ಯವಿರುವ ತರಗತಿವಾರು ಸೀಟುಗಳು, ಶುಲ್ಕದ ಮಾಹಿತಿಯನ್ನು ಪ್ರಕಟಿಸಬೇಕು. ಪಾರದರ್ಶಕವಾಗಿ ದಾಖಲಾತಿ ಮಾಡಿ ಕೊಳ್ಳಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಶಾಲೆಗಳ ಮುಖ್ಯಸ್ಥರ ಸಭೆ ಕರೆದು ನಿಯಮಗಳನ್ನು ಮನವರಿಕೆ ಮಾಡಿಕೊಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಪೋಷಕರು ಪಟ್ಟಿ ಪರಿಶೀಲಿಸಿ, ಸೂಕ್ತ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಡೊನೇಷನ್ ಸೇರಿದಂತೆ ಅಧಿಕ ಶುಲ್ಕ ವಸೂಲು ಮಾಡಿದರೆ, ಮೀಸಲಾತಿ ಪಾಲನೆಯಾಗದಿದ್ದರೆ ಆಯಾ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದೂರು ಸಲ್ಲಿಸಬಹುದು ಎಂದು ಸಲಹೆ ನೀಡಲಾಗಿದೆ.

**ಆಧಾರ:** ಪ್ರಜಾವಾಣಿ, ದಿನಾಂಕ:20.04.2025

## 5. 'ಗ್ರೇಟರ್ ಬೆಂಗಳೂರು'ಗೆ ಅಸ್ತು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಂಪಿ) ವಿಭಜಿಸಿ, ಗರಿಷ್ಠ ಏಳು ನಗರ ಪಾಲಿಕೆಗಳನ್ನು ರಚಿಸುವ 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024' ಕುರಿತು ಅಧಿಸೂಚನೆ ಹೊರಡಿಸಲಾಗಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮಸೂದೆ ಬಗ್ಗೆ ಮಾರ್ಚ್ 25ರಂದು ಕೆಲವು ಸ್ಪಷ್ಟನೆಗಳನ್ನು ಕೇಳಿದ್ದರು. ಏಪ್ರಿಲ್ 24ರಂದು ಮಸೂದೆಗೆ ಅವರು ಒಪ್ಪಿಗೆ ನೀಡಿದ್ದಾರೆ. ಹೀಗಾಗಿ, ದಿನಾಂಕ:24.04.2025ರಂದು 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024' ಅನ್ನು ಅಧಿಸೂಚಿಸಿ, ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024'ರಂತೆ ಸರ್ಕಾರ ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯನ್ನು ಘೋಷಿಸಲಿದೆ. ಬೆಂಗಳೂರು ನಗರ ಜಿಲ್ಲೆ ಮಾತ್ರವಲ್ಲ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಯ ಕೆಲವು ಪ್ರದೇಶಗಳು ಸೇರಿದಂತೆ ಸರ್ಕಾರ ಅಧಿಸೂಚಿಸುವ ಪ್ರದೇಶಗಳೂ 'ಗ್ರೇಟರ್ ಬೆಂಗಳೂರು' ವ್ಯಾಪ್ತಿಗೆ ಬರಲಿವೆ. ಇದು ಅಸ್ತಿತ್ವಕ್ಕೆ ಬಂದ ಬಳಿಕ, ಅದರ ವ್ಯಾಪ್ತಿಯಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ), ನಗರ ಪಾಲಿಕೆ, ಗ್ರಾಮ ಪಂಚಾಯಿತಿಗಳು ರದ್ದಾಗಲಿವೆ.

'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024'ರಂತೆ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'(ಜಿಬಿಎ), ಪಾಲಿಕೆ ಹಾಗೂ ವಾರ್ಡ್‌ಗಳೆಂಬ ಮೂರು ಹಂತದಲ್ಲಿ ಆಡಳಿತ ವ್ಯವಸ್ಥೆ ಇರಲಿದೆ. ಕಾಯ್ದೆ ಜಾರಿಯಾದ 120 ದಿನಗಳಲ್ಲಿ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ರಚನೆಯಾಗಬೇಕು. ಜಿಬಿಎ ವ್ಯಾಪ್ತಿಯಲ್ಲಿ ತಲಾ 150 ವಾರ್ಡ್‌ಗಳ ಏಳು ನಗರ ಪಾಲಿಕೆಗಳನ್ನು ಸೃಜಿಸುವ ಅವಕಾಶವಿದೆ. ಪ್ರತಿ ನಗರ ಪಾಲಿಕೆಯನ್ನು 'ಬೆಂಗಳೂರು' ಎಂಬ ಮೊದಲ ಪದದಿಂದ ನಾಮಕರಣ ಮಾಡಲಾಗುತ್ತದೆ.

ನಗರ ಪಾಲಿಕೆಗಳಿಗೆ ಸಾಮಾನ್ಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಜಿಬಿಎ ಅಂತಿಮಗೊಳಿಸುತ್ತದೆ. ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ನೌಕರರನ್ನೂ ಜಿಬಿಎಯೇ ನೇಮಕ ಮಾಡುತ್ತದೆ. 'ಸಿ' ಮತ್ತು 'ಡಿ' ನೌಕರರನ್ನು ನಗರ ಪಾಲಿಕೆಗಳ ಆಯುಕ್ತರು ನೇಮಕ ಮಾಡಿಕೊಳ್ಳಬಹುದಾದರೂ ಅವರ ಮೇಲೆ ಯಾವ ರೀತಿಯ ಶಿಸ್ತು ಕ್ರಮವನ್ನೂ ತೆಗೆದುಕೊಳ್ಳುವಂತಿಲ್ಲ. ಸಂವಿಧಾನದ ಅನುಚ್ಛೇದ 243ಜೆಡ್‌ಇನಲ್ಲಿ ನಗರ ಪಾಲಿಕೆಗೆ ನೀಡಲಾಗಿರುವ ನಗರ ಯೋಜನೆ ಸಿದ್ಧಪಡಿಸುವ ಜವಾಬ್ದಾರಿಗಳನ್ನೂ, ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಸೃಜಿಸಲಾಗುವ 'ಬೆಂಗಳೂರು ಮಹಾನಗರ ಯೋಜನಾ ಸಮಿತಿ'ಗೆ (ಬಿಎಂಪಿಸಿ) ನೀಡಲಾಗಿದೆ.

'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ಕ್ಕೆ ಮುಖ್ಯಮಂತ್ರಿಯವರು ಅಧ್ಯಕ್ಷರಾಗಲಿದ್ದು, ಬೆಂಗಳೂರು ಅಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಗೃಹ, ನಗರಾಭಿವೃದ್ಧಿ, ಸಾರಿಗೆ. ಇಂಧನ ಸಚಿವರು ಹಾಗೂ ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಶಾಸಕರು, ಮುಖ್ಯ ಆಯುಕ್ತರು, ಪಾಲಿಕೆಗಳ ಮೇಯರ್‌ಗಳು, ಪ್ರತಿ ಪಾಲಿಕೆಯಿಂದ ನಾಮನಿರ್ದೇಶನಗೊಳ್ಳುವ ಇಬ್ಬರು ಸದಸ್ಯರು, ಬಿಡಿಎ, ಜಲಮಂಡಳಿ, ಬಿಎಂಟಿಸಿ, ಬಿಎಂಆರ್‌ಸಿಎಲ್, ಬೆಸ್ಕಾಂ, ನಗರ ಪೊಲೀಸ್ ಕಮಿಷನರ್, ಬಿಎಂಎಲ್‌ಟಿಎ, ಸಿಇಒ, ಬಿಎಸ್‌ಡಬ್ಲ್ಯೂಎಂಎಲ್ ಎಂಡಿ, ಗ್ರೇಟರ್ ಬೆಂಗಳೂರು ನಗರ ಯೋಜನೆ ಮುಖ್ಯ ನಗರ ಯೋಜಕ, ಗ್ರೇಟರ್ ಬೆಂಗಳೂರು ಪ್ರಧಾನ ಎಂಜಿನಿಯರ್ ಸದಸ್ಯರಾಗಿರುತ್ತಾರೆ.

ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ಪಾಲಿಕೆಗಳಿಗೆ ಹಂಚುವ ಜವಾಬ್ದಾರಿ ಪ್ರಾಧಿಕಾರದ್ದಾಗಿದ್ದು, ಅಂತರ್ ಇಲಾಖೆಗಳ ಕೆಲಸಗಳು, ಯೋಜನೆಗಳ ಮೇಲುಸ್ತುವಾರಿಯನ್ನು ಹೊಂದಿರುತ್ತದೆ. ಮೇಲ್ಸೇತುವೆ, ಸುರಂಗ ರಸ್ತೆಯಂತಹ ಬೃಹತ್ ಯೋಜನೆಗಳನ್ನು ಕೂಡ ಪ್ರಾಧಿಕಾರವೇ ನಿರ್ವಹಿಸಲಿದೆ.

ನಗರ ಪಾಲಿಕೆಗಳ ವ್ಯಾಪ್ತಿ, ಅವುಗಳ ವಾರ್ಡ್‌ಗಳ ಸಂಖ್ಯೆ, ಅವುಗಳ ಮೀಸಲಾತಿಯನ್ನು ರಾಜ್ಯ ಸರ್ಕಾರ ನಿರ್ಧರಿಸಬಹುದು. ಗ್ರೇಟರ್ ಬೆಂಗಳೂರು ವ್ಯಾಪ್ತಿಯನ್ನು ಸರ್ಕಾರವು ಅಧಿಸೂಚನೆ ಮೂಲಕ ಕಾಲಕಾಲಕ್ಕೆ ನಿರ್ಧರಿಸಬಹುದಾಗಿದೆ. ನಗರ ಪಾಲಿಕೆಗಳಲ್ಲಿ ಮೇಯರ್, ಉಪಮೇಯರ್, ಜಂಟಿ ಆಯುಕ್ತರು, ಸ್ಥಾಯಿ ಸಮಿತಿ, ವಲಯ ಸಮಿತಿ, ವಾರ್ಡ್ ಸಮಿತಿಗಳು ಮತ್ತು ಪ್ರದೇಶ ಸಭಾಗಳು ಇರಲಿವೆ.

**ಆಧಾರ:** ಪ್ರಜಾವಾಣಿ, ದಿನಾಂಕ:25.04.2025

## 6. ಇ–ಸ್ವತ್ತು ಸುಧಾರಣೆಗೆ ಸಮಿತಿ

ಗ್ರಾಮೀಣ ಪ್ರದೇಶಗಳ ಆಸ್ತಿಗಳಿಗೆ ಇ–ಸ್ವತ್ತು ದಾಖಲೆ ವಿತರಣೆಯಲ್ಲಿನ ಆಸ್ತಿಗಳಿಗೆ ಇ–ಸ್ವತ್ತು ದಾಖಲೆ ವಿತರಣೆಯಲ್ಲಿನ ಸಮಸ್ಯೆಗಳ ಕುರಿತು ಅಧ್ಯಯನ ನಡೆಸಿ, ಪರಿಹಾರ ಸೂಚಿಸಲು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ 12 ಸದಸ್ಯರ ಸಮಿತಿಯನ್ನು ನೇಮಿಸಿ ಪಂಚಾಯತ್ ರಾಜ್ ಆಯುಕ್ತೆ ಅರುಂಧತಿ ಚಂದ್ರಶೇಖರ್ ಆದೇಶ ಹೊರಡಿಸಿದ್ದಾರೆ.

ಇ–ಸ್ವತ್ತು ಮತ್ತು ಗ್ರಾಮೀಣ ಆಸ್ತಿಗಳ ತೆರಿಗೆ ನಿಗದಿಗೆ ಸಂಬಂಧಿಸಿದ ವಿಷಯ ತಜ್ಞರೂ ಆಗಿರುವ ಪಂಚಯಾತ್ ರಾಜ್ ಆಯುಕ್ತಾಲಯದ ನಿವೃತ್ತ ಉಪ ನಿರ್ದೇಶಕ ಕೆ.ಜಿ.ಜಗದೀಶ ಅವರನ್ನು ವಿಶೇಷ ಅಹ್ವಾನಿತ ಸದಸ್ಯರನ್ನಾಗಿ ನೇಮಿಸಲಾಗಿದೆ.

ಪಂಚಾಯತ್ ರಾಜ್ ಆಯುಕ್ತಾಲಯದ ಅಭಿವೃದ್ಧಿ ವಿಭಾಗದ ನಿರ್ದೇಶಕರು, ವಿಜಯಪುರ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ವಿಜಯ ಅಜೂರೆ, ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಸದಸ್ಯ ಶಿವಶಿಂಕರ್ ಪಿ., ಶಹಪುರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜು ಶರಬಯ್ಯ ನ್ಯಾಮತಿ ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕಿ ಆಶಾ ಎಂ.ಜೆ. ಅನೇಕಲ್ ತಾಲ್ಲೂಕಿನ ಹೆನ್ನಾಗರ ಗ್ರಾಮ ಪಂಚಾಯಿತಿಯ ಪಿಡಿಒ ಸಿದ್ದರಾಜು, ಖಾನಾಪುರ ತಾಲ್ಲೂಕಿನ ಶಿಂಧೋಳಿ ಪಿಡಿಒ ಪ್ರಭಾಕರ್ ಎನ್.ಭಟ್., ಚಿಕ್ಕಮಗಳೂರು ತಾಲ್ಲೂಕಿನ ಕೆ.ಬಿ.ಹಾಳ್, ಪಿಡಿಒ ಚಾಲುಕ್ಯ ಭಾರವಿ ಮತ್ತು ಕಡಬ ತಾಲ್ಲೂಕಿನ ಶಿರಾಡಿ ಪಿಡಿಒ ಯಶವಂತ ಬೆಳ್ಚಡ ಅವರನ್ನು ಸಮಿತಿ ಸದಸ್ಯರಾಗಿ ನೇಮಿಸಲಾಗಿದೆ. ಪಂಚಾಯತ್ ರಾಜ್ ಆಯುಕ್ತಾಲಯದ ಅಭಿವೃದ್ಧಿ ವಿಭಾಗದ ಉಪ ನಿರ್ದೇಶಕರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ–1993ರ ಸೆಕ್ಷನ್ 199ಕ್ಕೆ ಇ–ಸ್ವತ್ತು ವಿಷಯಕ್ಕೆ ಸಂಬಂಧಿಸಿದಂತೆ ತಿದ್ದುಪಡಿ ತರಲು ಸಮಿತಿ ಸಲಹೆಗಳನ್ನು ನೀಡಬೇಕಿದೆ. ಇ–ಸ್ವತ್ತು ವಿತರಣೆಯಲ್ಲಿನ ಸಮಸ್ಯೆಗಳನ್ನು ಅಧ್ಯಯನ ನಡೆಸಿ, ಪರಿಹಾರ ಸೂಚಿಸಬೇಕು. ಇ–ಸ್ವತ್ತು ತಂತ್ರಾಂಶದಲ್ಲಿ ಅಗತ್ಯ ಬದಲಾವಣೆಗಳಿಗೂ ಸಮಿತಿ ಸಲಹೆ ನೀಡಬೇಕಿದೆ. ವರದಿ ಸಲ್ಲಿಸಲು ಎರಡು ತಿಂಗಳ ಗಡುವು ನೀಡಲಾಗಿದೆ.

**ಆಧಾರ: ಪ್ರಜಾವಾಣಿ, ದಿನಾಂಕ:18.04.2025**

## 7. ವಿದ್ಯಾಸಿರಿ ಮೊತ್ತ ರೂ.2,000ಕ್ಕೆ ಏರಿಕೆ

ಮಡಿವಾಳ ಮತ್ತು ಹಿಂದುಳಿದ ಸಮುದಾಯದ ಮಕ್ಕಳು ಹೆಚ್ಚು ಶಿಕ್ಷಿತರಾಗಬೇಕು ಆದ್ದರಿಂದ 'ವಿದ್ಯಾಸಿರಿ' ಮೊತ್ತವನ್ನು ಪ್ರತಿ ವಿದ್ಯಾರ್ಥಿಗೆ ರೂ.1,500ರಿಂದ ರೂ.2,000ಕ್ಕೆ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಶ್ರೀ ಮಾಚಿದೇವ ಗುರುಪೀಠ ವಿಶ್ವಸ್ಥ ಸಮಿತಿ ಟ್ರಸ್ಟ್ ಕೆಂಗೇರಿ ಸಮೀಪದ ಚೂಡೇನಾಪುರದಲ್ಲಿ ನಿರ್ಮಿಸಿದ ಕಲಿದೇವ ಸಭಾಂಗಣ ಉದ್ಘಾಟಿಸಿ ಅವರು ಮಾತನಾಡಿದರು. ಮಡಿವಾಳ ಸೇರಿ ಎಲ್ಲ ಹಿಂದುಳಿದ ಸಮುದಾಯಗಳ ಪ್ರಗತಿಗೆ ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆ. ಮಡಿವಾಳ ಸಮುದಾಯ ಮುಖ್ಯವಾಹಿನಿಗೆ ಬರಬೇಕು. ಅದಕ್ಕಾಗಿ ವಿದ್ಯಾಸಿರಿ ಮೊತ್ತವನ್ನು ಹೆಚ್ಚಿಸಲು ತೀರ್ಮಾನಿಸಿದ್ದೇವೆ. ಮಡಿವಾಳ ಸಮುದಾಯದ ವಿದ್ಯಾರ್ಥಿ ನಿಲಯಕ್ಕೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದರು.

12ನೇ ಶತಮಾನದಲ್ಲೇ ಮಡಿವಾಳ ಮಾಚಿದೇವರು ಬಸವಣ್ಣನವರ ಜತೆ ಸೇರಿ ಸಮಾಜದ ಬದಲಾವಣೆಗೆ ಮುಂದಾಗಿದ್ದರು. ನಮ್ಮ ಸಮಾಜದಲ್ಲಿ ಜಾತಿ ವ್ಯವಸ್ಥೆ ಕಾರಣಕ್ಕೆ ಅಸಮಾನತೆ ಇದೆ. ಈ ಕಾರಣಕ್ಕೆ ಉದ್ಯೋಗ, ಶಿಕ್ಷಣ ಸಿಗದೇ ಆರ್ಥಿಕ ಅಸಮಾನತೆ ಹೆಚ್ಚಾಯಿತು ಎಂದು ಸಿದ್ದರಾಮಯ್ಯ ಹೇಳಿದರು.

ಮಡಿವಾಳ ಸಮಾಜದಲ್ಲಿ ಒಬ್ಬರೂ ಶಾಸಕರಿಲ್ಲ. ಒಬ್ಬರು ಮಾತ್ರ ಐಎಎಸ್ ಅಧಿಕಾರಿ ಇದ್ದಾರೆ. ಮಡಿವಾಳ ಸಮಾಜ ಇಷ್ಟು ಹಿಂದುಳಿಯಲು ಮನುಸ್ಮೃತಿ ಕಾರಣ ಎಂದು ಹೇಳಿದ ಅವರು, ಸಮಾನತೆ ಸಾರುವ ಸಂವಿಧಾನವನ್ನು ವಿರೋಧಿಸುವವರನ್ನು ದೂರ ಇಡಬೇಕು. ಅವರನ್ನು ಹತ್ತಿರಕ್ಕೆ ಸೇರಿಸಬೇಡಿ. ಸಂವಿಧಾನ ವಿರೋಧಿಗಳ ಜತೆ ಕೈ ಜೋಡಿಸುವುದು ಮಡಿವಾಳ ಮಾಚಿದೇವರಿಗೆ ಮಾಡುವ ಅವಮಾನ ಎಂದರು.

**ಆಧಾರ:** ಪ್ರಜಾವಾಣಿ, ದಿನಾಂಕ:19.04.2025

## 8. ಎಲ್‌ಕೆಜಿಗೆ 4, ಯುಕೆಜಿಗೆ 5 ವರ್ಷ ಪೂರ್ಣ ಕಡ್ಡಾಯ: ಮತ್ತೆ ಸುತ್ತೋಲೆ

2025–26ನೇ ಶೈಕ್ಷಣಿಕ ಸಾಲಿನಿಂದ ಎಲ್‌ಕೆಜಿ ದಾಖಲಾತಿಗೆ 4 ವರ್ಷ ಮತ್ತು ಯುಕೆಜಿ ದಾಖಲಾತಿಗೆ 5 ವರ್ಷ ತುಂಬುವುದು ಕಡ್ಡಾಯವಾಗಿದ್ದು, ಈ ನಿಯಮ ಕಟ್ಟುನಿಟ್ಟಾಗಿ ಪಾಲನೆ ಆಗುವಂತೆ ನೋಡಿಕೊಳ್ಳಬೇಕು ಎಂದು ಶಿಕ್ಷಣಾಧಿಕಾರಿಗಳು ಮತ್ತು ಶಾಲಾ ಮುಖ್ಯಸ್ಥರಿಗೆ ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಸುತ್ತೋಲೆ ಮೂಲಕ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ರಾಜ್ಯದಲ್ಲಿ ಪೂರ್ವ ಪ್ರಾಥಮಿಕ ತರಗತಿ(ಎಲ್‌ಕೆಜಿ)ಗೆ ಸೇರ್ಪಡೆ ಮಾಡಲು 4 ವರ್ಷ ತುಂಬಿರಬೇಕು ಎಂಬ ನಿಯಮ 2023–24ರಿಂದಲೇ ಜಾರಿಯಲ್ಲಿದೆ. ಆದಾಗ್ಯೂ ಹಲವು ಪೂರ್ವ ಪ್ರಾಥಮಿಕ ಶಾಲೆಗಳು ಈ ನಿಯಮವನ್ನು ಪಾಲಿಸದೆ ಮಕ್ಕಳಿಗೆ ಬೇಕಾಬಿಟ್ಟಿ ಪ್ರವೇಶ ನೀಡುತ್ತಿವೆ. ಈ ಹಿನ್ನೆಲೆಯಲ್ಲಿ ಈ ವರ್ಷ ಸಾಕಷ್ಟು ಗೊಂದಲ ಸೃಷ್ಟಿಯಾಗಿ ಹಲವು ಪೋಷಕರು ಶಿಕ್ಷಣ ಸಚಿವರ ಮೇಲೆ ಒತ್ತಡ ಹೇರಿ ಈ ವರ್ಷದಿಂದ ಜಾರಿಯಾಗಬೇಕಿದ್ದ 1ನೇ ತರಗತಿ ಸೇರ್ಪಡೆಗೆ ಜೂನ್ 1ಕ್ಕೆ 6 ವರ್ಷ ತುಂಬಿರಬೇಕು ಎಂಬ ನಿಯಮವನ್ನು ಸಡಿಲ ಮಾಡುವಲ್ಲಿ ಯಶ ಕಂಡಿದ್ದರು. ಪೋಷಕರ ಒತ್ತಡಕ್ಕೆ ಮಣಿದ ಸರ್ಕಾರ ಈ ವರ್ಷದ ಮಟ್ಟಿಗೆ 1ನೇ ತರಗತಿ ಪ್ರವೇಶಕ್ಕೆ 5.5 ವರ್ಷ ತುಂಬಿರುವ ಪೂರ್ವ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿರುವ ಮಕ್ಕಳಿಗೆ 1ನೇ ತರಗತಿಗೆ ದಾಖಲು ಮಾಡಿಕೊಳ್ಳುವ ಅವಕಾಶ ನೀಡಿದೆ.

ಪ್ರತಿ ವರ್ಷದ ಗೊಂದಲಗಳಿಂದ ಪಾಠ ಕಲಿಯದ ಕೆಲ ಪೂರ್ವ ಪ್ರಾಥಮಿಕ ಶಾಲೆಗಳು ಮತ್ತು ಪೋಷಕರು ಜೂನ್ 1ಕ್ಕೆ 4 ವರ್ಷ ತುಂಬಿರದಿದ್ದರೂ ಮಕ್ಕಳನ್ನು ಎಲ್‌ಕೆಜಿಗೆ ದಾಖಲಿಸಿಕೊಳ್ಳುತ್ತಿರುವ ದೂರುಗಳು ಬಂದ ಹಿನ್ನೆಲೆಯಲ್ಲಿ ಮತ್ತು ಈಗ ನಿಯಮಬಾಹಿರವಾಗಿ ಶಾಲೆಗೆ ದಾಖಲು ಮಾಡಿ ಆ ಬಳಿಕ ಮುಂದಿನ ಶೈಕ್ಷಣಿಕ ವರ್ಷಗಳ ಆರಂಭದಲ್ಲಿ ಮತ್ತೆ ಸರ್ಕಾರದ ಮೇಲೆ ನಿಯಮ ಸಡಿಲಗೊಳಿಸುವಂತೆ ಒತ್ತಡ ಹೇರಿ ಗೊಂದಲ ಸೃಷ್ಟಿಸುವುದನ್ನು ತಪ್ಪಿಸುವ ಉದ್ದೇಶದಿಂದ ಶಾಲಾ ಶಿಕ್ಷಣ ಇಲಾಖೆಯು ಮಕ್ಕಳ ದಾಖಲಾತಿಗೆ ವಯೋಮಿತಿ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚನೆ ನೀಡಿದೆ.

**ಆಧಾರ:** ಉದಯವಾಣಿ, ದಿನಾಂಕ:06.05.2025

## 9. ಯೋಧರಿಗೆ ರಾಜೇಂದ್ರ ಕುಮಾರ್ ರೂ.3 ಕೋಟಿ

ದೇಶ ಕಾಯುವ ಸೈನಿಕರ ಅಭಿವೃದ್ಧಿಗಾಗಿ ರೂ.3 ಕೋಟಿ ನೀಡುವುದಾಗಿ 'ನವೋದಯ ಗ್ರಾಮ ವಿಕಾಸ ಚಾರಿಟೇಬಲ್ ಟ್ರಸ್ಟ್' ಸಂಸ್ಥಾಪಕ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ 'ಸಹಕಾರ ರತ್ನ' ಡಾ.ಎಂ.ಎನ್.ರಾಜೇಂದ್ರ ಕುಮಾರ್ ಘೋಷಿಸಿದ್ದಾರೆ.

ಮಂಗಳೂರು ಹೊರವಲಯದ ಬಂಗ್ರ ಕೂಳೂರಿನ ಗೋಲ್ಡ್ ಫಿಂಚ್ ಸಿಟಿಯಲ್ಲಿ 'ನವೋದಯ ಗ್ರಾಮ ವಿಕಾಸ ಚಾರಿಟೇಬಲ್ ಟ್ರಸ್ಟ್' ಆಶ್ರಯದಲ್ಲಿ ನವೋದಯ ಸ್ವಸಹಾಯ ಗುಂಪುಗಳ 'ರಜತ ಸಂಭ್ರಮ–2025' ಸಮಾವೇಶ ನಡೆಯಿತು. ಸಮಾವೇಶದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ರಾಜೇಂದ್ರ ಕುಮಾರ್, ಭಯೋತ್ಪಾದನೆ ವಿರುದ್ಧ ದೇಶದ ಸೈನಿಕರು ಗಡಿ ಪ್ರದೇಶದಲ್ಲಿ ವೀರಾವೇಶದಿಂದ ಹೋರಾಡುತ್ತಿದ್ದಾರೆ. ಅವರಿಗೆ ನೈತಿಕ ಶಕ್ತಿ ತುಂಬಲು ಪ್ರಾರ್ಥನೆ ನಡೆಸುವುದರೊಂದಿಗೆ ಸೈನಿಕರ ಅಭಿವೃದ್ಧಿಗಾಗಿ ರೂ.3 ಕೋಟಿ ನೀಡಲಾಗುವುದು ಎಂದರು.

**ಆಧಾರ:** ಕನ್ನಡಪ್ರಭ, ದಿನಾಂಕ: 11.05.2025

## 10. ರಾಷ್ಟ್ರಪತಿ ಅಂಗಳಕ್ಕೆ ಸಹಕಾರ ಬಿಲ್

ಸಹಕಾರ ವಲಯದಲ್ಲಿ ಮಹತ್ವದ ಬದಲಾವಣೆ ತರಲು ರಾಜ್ಯ ಸರಕಾರ ರೂಪಿಸಿದ್ದ ಎರಡು ಪ್ರಮುಖ ವಿಧೇಯಕಗಳಿಗೆ ಅಂಕಿತ ಹಾಕಲು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕೊನೆಗೂ ಒಪ್ಪಿಲ್ಲ.

ಕಳೆದ ವರ್ಷದ ಜುಲೈ ಅಧಿವೇಶನದಲ್ಲಿ ಅಂಗೀಕರಿಸಲಾಗಿದ್ದ 'ಕರ್ನಾಟಕ ಸಹಕಾರ ಸೊಸೈಟಿಗಳ (ತಿದ್ದುಪಡಿ) ವಿಧೇಯಕ–2024' ಹಾಗೂ 'ಕರ್ನಾಟಕ ಸೌಹಾರ್ದ ಸಹಕಾರ (ತಿದ್ದುಪಡಿ) ವಿಧೇಯಕ – 2024' ಅನ್ನು ರಾಷ್ಟ್ರಪತಿಗಳ ಪರಾಮರ್ಶೆಗೆ ಶಿಫಾರಸ್ಸು ಮಾಡಿ ಕೇಂದ್ರಕ್ಕೆ ರವಾನಿಸಿದ್ದಾರೆ.

ಸಹಕಾರ ಸಂಘಗಳ ಚುನಾವಣೆ ನಡೆಸುವ ಜವಾಬ್ದಾರಿ ಹೊತ್ತ 'ಸಹಕಾರ ಚುನಾವಣಾ ಪ್ರಾಧಿಕಾರ'ವನ್ನು ರದ್ದುಪಡಿಸಿ ಸಹಕಾರ ಸೊಸೈಟಿಗಳ ರಿಜಿಸ್ಟ್ರಾರ್ ಅಧೀನದಲ್ಲಿ ಸಹಕಾರ ಚುನಾವಣಾ ವಿಭಾಗ ತೆರೆಯುವುದು, ಸಹಕಾರ ಸಂಘಗಳಲ್ಲಿ ಪ್ರಾತಿನಿಧ್ಯವಿಲ್ಲದ ಸಮುದಾಯಗಳಿಗೆ ಅವಕಾಶ ಕಲ್ಪಿಸಲು ಸರಕಾರದಿಂದ ನಾಮನಿರ್ದೇಶನ ಸಂಖ್ಯೆ ಹೆಚ್ಚಿಸುವ ಮೂಲಕ ಸಾಮಾಜಿಕ ನ್ಯಾಯ ಕಲ್ಪಿಸುವುದು ಈ ಎರಡು ವಿಧೇಯಕಗಳ ಪ್ರಮುಖ ಉದ್ದೇಶವಾಗಿತ್ತು.

ಸರಕಾರದ ಈ ಆಶಯದ ಬಗ್ಗೆಯೇ ರಾಜ್ಯಪಾಲರು ಆಕ್ಷೇಪ ಎತ್ತಿದ್ದರು. ಈ ಬಗ್ಗೆ ಹಲವು ತಿಂಗಳಿಂದ ಸರಕಾರ ಮತ್ತು ರಾಜಭವನ ನಡುವೆ ಆಕ್ಷೇಪ ಮತ್ತು ಸಮಜಾಯಿಷಿಯ ಜಟಾಪಟಿ ನಡೆದಿತ್ತು. ಸರಕಾರದ ಯಾವ ಸ್ಪಷ್ಟನೆಯನ್ನೂ ಒಪ್ಪದ ರಾಜ್ಯಪಾಲರು, ಅಂತಿಮವಾಗಿ ಅಂಕಿತ ಹಾಕಲು ಒಪ್ಪದ ರಾಷ್ಟ್ರಪತಿಗೆ ರವಾನಿಸುವ ತಮ್ಮ ತೀರ್ಮಾನವನ್ನು ಅಧಿಕೃತವಾಗಿ ಸರ್ಕಾರಕ್ಕೆ ತಿಳಿಸಿದ್ದಾರೆ. ತಮ್ಮ ತೀರ್ಮಾನಕ್ಕೆ ರಾಜ್ಯಪಾಲರು ಸುದೀರ್ಘ ವಿವರಣೆಯನ್ನೂ ನೀಡಿದ್ದಾರೆ. ಪ್ರಮುಖವಾಗಿ ಸಹಕಾರ ಸಂಘಗಳ ಚುನಾವಣೆ ನಡೆಸಲು ಇರುವ ಸ್ವಾಯತ್ತ ಪ್ರಾಧಿಕಾರವನ್ನು ರದ್ದುಪಡಿಸಿ, ಸರಕಾರದ ಅಧೀನದ ರಿಜಿಸ್ಟ್ರಾರ್ ಉಸ್ತುವಾರಿಯಲ್ಲಿ ವಿಭಾಗ ತೆರೆಯುವುದು ಸಹಕಾರ ಸೊಸೈಟಿಗಳ ಚುನಾವಣಾ ಪ್ರಕ್ರಿಯೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ.

ಅಲ್ಲದೆ ಸಹಕಾರ ಸೊಸೈಟಿಗಳಲ್ಲಿ ಪರಿಶಿಷ್ಟರು, ಹಿಂದುಳಿದವರು ಹಾಗೂ ಮಹಿಳೆಯರಿಗೆ ಈಗಾಗಲೇ ಮೀಸಲು ಕಲ್ಪಿಸಲಾಗಿದೆ. ಆದರೂ ಪ್ರಾತಿನಿಧ್ಯವಿಲ್ಲದ ಸಮುದಾಯಗಳಿಗೆ ಅವಕಾಶ ಕಲ್ಪಿಸಲು ಸರಕಾರದ ನಾಮನಿರ್ದೇಶನ ಸಂಖ್ಯೆ ಹೆಚ್ಚಳಕ್ಕೆ ಅವಕಾಶಕ್ಕಾಗಿ ಕಾಯಿದೆಯಲ್ಲಿ ತಿದ್ದುಪಡಿ ಮಾಡುವುದು ಸಹಕಾರಿ ತತ್ವವನ್ನೇ ಬುಡಮೇಲು ಮಾಡಲಿದೆ. ನಾಮನಿರ್ದೇಶನ ಮಾಡಿ ಮತದಾನದ ಹಕ್ಕು ನೀಡುವುದರಿಂದ ಚುನಾಯಿತ ಸದಸ್ಯರ ಹಕ್ಕುಗಳಿಗೆ ಚ್ಯುತಿಯಾಗಲಿದ್ದು, ಸಹಕಾರಿ ಸಂಘಗಳ ಸ್ವಾಯತ್ತತೆಯನ್ನೇ ಕಸಿದುಕೊಳ್ಳಲಿದೆ. ಮುಖ್ಯವಾಗಿ ಆಡಳಿತಾರೂಢ ಪಕ್ಷವು ಹಿಂಬಾಗಿಲ ಪ್ರವೇಶದ ಮೂಲಕ ಸಹಕಾರ ಸಂಘಗಳನ್ನು ನಿಯಂತ್ರಿಸಲು ಅವಕಾಶ ಮಾಡಿಕೊಡುತ್ತದೆ. ಹಾಗಾಗಿ ಕರ್ನಾಟಕ ಸಹಕಾರ ಸೊಸೈಟಿಗಳ ಕಾಯಿದೆ–1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ–1997 ಅನ್ನು ಬದಲಿಸುವ ಈ ವಿಧೇಯಕಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದು ರಾಜ್ಯಪಾಲರು ಸ್ಪಷ್ಟಪಡಿಸಿದ್ದಾರೆ.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:15.05.2025

## 11. ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಗೌರವ ಡಾಕ್ಟರೇಟ್

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಮಾಜ ಸೇವೆಗಾಗಿ ಕೋಲಾರದ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯು ಗೌರವ ಡಾಕ್ಟರೇಟ್ ಪದವಿ ಘೋಷಿಸಿದೆ.

ನಗರ ಹೊರವಲಯದ ಟಮಕದಲ್ಲಿರುವ ಆರ್.ಎಲ್. ಜಾಲಪ್ಪ ರಜತ ಮಹೋತ್ಸವ ಸಭಾಂಗಣದಲ್ಲಿ ದಿನಾಂಕ:15.05.2025ರಂದು ನಡೆದ ಸಂಸ್ಥೆಯ 15ನೇ ವಾರ್ಷಿಕ ಘಟಿಕೋತ್ಸವದಲ್ಲಿ ಸಂಸ್ಥೆಯ ಕುಲಾಧಿಪತಿ ಜಿ.ಎಚ್.ನಾಗರಾಜ್ ಈ ಘೋಷಣೆ ಮಾಡಿದರು.

‘ಸಂಸ್ಥೆಯ ಕಾರ್ಯಕಾರಿ ಮತ್ತು ಶೈಕ್ಷಣಿಕ ಮಂಡಳಿಯು ಒಮ್ಮತದಿಂದ ಈ ತೀರ್ಮಾನ ಕೈಗೊಂಡಿದೆ. ಸಿದ್ದರಾಮಯ್ಯ ಎರಡು ಬಾರಿ ಮುಖ್ಯಮಂತ್ರಿಯಾಗಿ 16 ಬಾರಿ ಬಜೆಟ್ ಮಂಡಿಸಿದ್ದಾರೆ. ಎಲ್ಲಾ ಸಮುದಾಯಗಳಿಗೆ ಐದು ಗ್ಯಾರಂಟಿ ಯೋಜನೆ ಜಾರಿ ಮೂಲಕ ಹೊಸ ಭಾಷ್ಯ ಬರೆದಿದ್ದಾರೆ. ಯಾವುದೇ ಸರ್ಕಾರದಿಂದ ಇಂಥ ಕೆಲಸ ಆಗಿರಲಿಲ್ಲ. ಅವರಿಗೆ ಬಹಳ ಹಿಂದೆಯೇ ಈ ಗೌರವ ಸಲ್ಲಿಸಬೇಕಿತ್ತು.

**ಆಧಾರ:**ಪ್ರಜಾವಾಣಿ, ದಿನಾಂಕ:16.05.2025

## . 12. ಅಂಗವಿಕಲ ಸರ್ಕಾರಿ ನೌಕರರಿಗೆ ಬಡ್ತಿಯಲ್ಲಿ 4%ರಷ್ಟು ಮೀಸಲಾತಿ

ರಾಜ್ಯದ ಅಂಗವೈಕಲ್ಯವುಳ್ಳ ಸರ್ಕಾರಿ ನೌಕರರಿಗೆ ಗ್ರೂಪ್–ಬಿ ಮತ್ತು ಗ್ರೂಪ್–ಎ (ಕಿರಿಯ ಶ್ರೇಣಿ) ವೃಂದಗಳಿಗೆ ಮುಂಬಡ್ತಿ ನೀಡುವಲ್ಲಿ ಶೇ.4ರಷ್ಟು ಮೀಸಲಾತಿ ನಿಗದಿ ಪಡಿಸಿ ಆದೇಶಿಸಿದೆ.

ಈ ಬಗ್ಗೆ ರಾಜ್ಯ ಸರ್ಕಾರದಿಂದ ನಡವಳಿಯನ್ನು ಹೊರಡಿಸಿದ್ದು, ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್–ಡಿ ಮತ್ತು ಗ್ರೂಪ್–ಸಿ ವೃಂದಗಳಿಗೆ ಸೇರಿದ ಹುದ್ದೆಗಳಿಗೆ ನೀಡುವ ಮುಂಬಡ್ತಿಯಲ್ಲಿ ಎದ್ದು ಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಶೇಕಡ 4 ರಷ್ಟು ಮೀಸಲಾತಿ ಆಸ್ಪದವನ್ನು ಕಲ್ಪಿಸಲಾಗಿರುತ್ತದೆ. ಈಗ ಗ್ರೂಪ್–ಸಿ ಯಿಂದ ಗ್ರೂಪ್–ಬಿ ಮತ್ತು ಗ್ರೂಪ್–ಬಿ ಯಿಂದ ಗ್ರೂಪ್–ಎ (ಕಿರಿಯ ಶ್ರೇಣಿ) ವೃಂದದ ಹುದ್ದೆಗಳಿಗೂ ಸಹ ವಿಸ್ತರಿಸಿ ಆದೇಶಿಸಲಾಗಿದೆ.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 18.05.2025

## 13. ಪ್ಯಾನ್ ಇಲ್ಲದೆ ಆಸ್ತಿ ನೋಂದಣಿ ಆಗಲ್ಲ

30ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಆಸ್ತಿ ಖರೀದಿ ನೋಂದಣಿಯ ವೇಳೆ ಮಾರಾಟಗಾರರು ಮತ್ತು ಖರೀದಿದಾರರು ಪ್ಯಾನ್ ವಿವರ ಸಲ್ಲಿಸುವುದನ್ನು ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಕಡ್ಡಾಯ ಮಾಡಿದೆ. ಪ್ಯಾನ್ ಸಲ್ಲಿಸದೇ ಇದ್ದರೆ ಆಸ್ತಿ ನೋಂದಣಿ ಆಗುವುದಿಲ್ಲ.

ನೋಂದಣಿ ಪರಿವೀಕ್ಷಕ ಮತ್ತು ಮುದ್ರಾಂಕ ಆಯುಕ್ತರು ಮೇ 16 ರಂದು ಎಲ್ಲ ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ಉಪ ನೋಂದಣಾಧಿಕಾರಿ, ಕಛೇರಿಗಳಿಗೆ ಈ ಸಂಬಂಧ ಸುತ್ತೋಲೆ ಹೊರಡಿಸಿದ್ದಾರೆ. ರೂ. 30 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಆಸ್ತಿ ನೋಂದಣಿಗೆ ಸಂಬಂಧಿಸಿದಂತೆ ಮಾರಾಟಗಾರರು ಮತ್ತು ಖರೀದಿದಾರರ ವಿವರಗಳನ್ನು ಅರ್ಥಿಕ ವರ್ಷಾಂತ್ಯಕ್ಕೆ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಬೇಕು' ಎಂದು ಸೂಚಿಸಿದ್ದಾರೆ.

'ಆಸ್ತಿ ನೋಂದಣಿ ವೇಳೆ ಸಲ್ಲಿಸಬೇಕಿರುವ ದಾಖಲೆಗಳು ಸ್ವಯಂಘೋಷಣಾ ಪತ್ರದ ವಿವರಗಳನ್ನೂ ಸುತ್ತೋಲೆ ಒಳಗೊಂಡಿದೆ. ಆ ಎಲ್ಲ ವಿವರ ಮತ್ತು ಮಾಹಿತಿಗಳನ್ನು ಸಲ್ಲಿಸಿದರಷ್ಟೇ ನೋಂದಣಿ ಪೂರ್ಣಗೊಂಡು, ದಸ್ತಾವೇಜನ್ನು ಹಸ್ತಾಂತರಿಸಬೇಕು. ಇಲ್ಲದೇ ಇದ್ದರೆ ದಸ್ತಾವೇಜನ್ನು ನೀಡಬಾರದು' ಎಂದು ತಿಳಿಸಿದ್ದಾರೆ.

ಮಾರಾಟಗಾರರು ಮತ್ತು ಖರೀದಿದಾರರು ಈ ಮಾಹಿತಿಗಳನ್ನು ಸಲ್ಲಿಸಲು ಪ್ರತ್ಯೇಕ ನಮೂನೆಯನ್ನು ರೂಪಿಸಿದ್ದು, ಅದರಲ್ಲಿ ಎಲ್ಲ ವಿವರಗಳನ್ನು ತುಂಬಬೇಕು. ನಮೂನೆಗೆ ಸಹಿ ಮಾಡಿ, ಸ್ಕ್ಯಾನ್ ಮಾಡಬೇಕು. ಸ್ಕ್ಯಾನ್ ಮಾಡಲಾದ ಕಡತವನ್ನು ಕಾವೇರಿ–2 ತಂತ್ರಾಂಶಕ್ಕೆ ಅಪ್‌ಲೋಡ್ ಮಾಡಬೇಕು. ಇಡೀ ಆರ್ಥಿಕ ವರ್ಷದಲ್ಲಿ ನೋಂದಣಿಯಾದ ಆಸ್ತಿ ವಹಿವಾಟು, ಮಾರಾಟ ಮತ್ತು ಖರೀದಿದಾರರ ವಿವರವನ್ನು 61–ಎ ನಮೂನೆಯಲ್ಲಿ ಆದಾಯ ತೆರಿಗೆ ಇಲಾಖೆಗೆ ಕಡ್ಡಾಯವಾಗಿ ಸಲ್ಲಿಸಬೇಕು' ಎಂದು ಸೂಚಿಸಿದ್ದಾರೆ.

ಆಸ್ತಿ ಖರೀದಿ ವಿವರವನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸುವುದು ಬಹಳ ಹಿಂದಿನಿಂದಲೇ ಜಾರಿಯಲ್ಲಿದೆ. ಆದರೆ, ಇಲಾಖೆಯ ಅಧಿಕಾರಿಗಳು ಈ ವಿವರವನ್ನು ಸಲ್ಲಿಸುತ್ತಿರಲಿಲ್ಲ. ಈ ಸಂಬಂಧ ಆದಾಯ ತೆರಿಗೆ ಇಲಾಖೆಯಿಂದ ಪದೇ–ಪದೇ ಆಕ್ಷೇಪ ಪತ್ರ ಬಂದಿತ್ತು. ಹೀಗಾಗಿ ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಲಾಗುತ್ತಿದೆ. ಆದಾಯ ತೆರಿಗೆ ವಂಚನೆ ಪ್ರಕರಣಗಳಿಗೂ ಇದರಿಂದ ತಡೆ ಬೀಳಲಿದೆ' ಎಂದು ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

**ಆಧಾರ:**ಪ್ರಜಾವಾಣಿ, ದಿನಾಂಕ:19.05.2025

## 14. ಆಂಧ್ರಕ್ಕೆ ನಾಲ್ಕು ಕುಮ್ಕಿ ಆನೆ

ಅಂಧ್ರ ಪ್ರದೇಶದಲ್ಲಿ ಆನೆ ಮತ್ತು ಮಾನವ ನಡುವಿನ ಸಂಘರ್ಷ ತಪ್ಪಿಸಲು ತರಬೇತುಗೊಂಡ ನಾಲ್ಕು ಕುಮ್ಕಿ ಆನೆಗಳನ್ನು 21.05.2025ರಂದು ಆಂಧ್ರಪ್ರದೇಶಕ್ಕೆ ಹಸ್ತಾಂತರಿಸಲಾಯಿತು. ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರಿಗೆ ಸಾಂಕೇತಿಕವಾಗಿ ದಾಖಲೆಗಳನ್ನು ನೀಡಲಾಯಿತು.

ವಿಧಾನಸೌಧ ಪಶ್ಚಿಮ ದ್ವಾರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಹಾಜರಿದ್ದರು. ಕೊನೆಗೆ

ಈ ಆನೆಗಳನ್ನು ಚಿತ್ತೂರು ಕಾಡಿಗೆ ಕರೆದೊಯ್ಯಲಾಯಿತು. ಅಂಧ್ರದ ಸುಮಾರು 25 ಮಾವುತರಿಗೆ ಕಾಡಾನೆಗಳನ್ನು ಓಡಿಸುವುದು, ನಿರ್ದಿಷ್ಟ ಸ್ಥಳಕ್ಕೆ ತಳ್ಳುವುದು ಮತ್ತು ಪುಂಡಾನೆಗಳನ್ನು ಓಡಿಸುವ ಕುರಿತು ಕರ್ನಾಟಕದಲ್ಲಿ ತರಬೇತಿ ನೀಡಲಾಗಿದೆ. ಇದಕ್ಕೆ ಸಂಬಂಧಿಸಿದ ವಿಡಿಯೋ ಹಸ್ತಾಂತರಿಸಲಾಯಿತು.

ಡಿಸಿಎಂ ಡಿ.ಕೆ. ಶಿವಕುಮಾರ್ ಮಾತನಾಡಿ, "ತುಂಗಾಭದ್ರಾ ನದಿಯ ನೀರಿನಲ್ಲಿ ಕರ್ನಾಟಕದ ಪಾಲು 24 ಟಿಎಂಸಿಯಾಗಿದೆ. ಈ ನೀರಿನ ಬಳಕೆ ಬಗ್ಗೆ ಆಂಧ್ರಪ್ರದೇಶ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಬೇಕಿದೆ. ಅದಕ್ಕಾಗಿ ಅಂಧ್ರದ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು ಸಮಯಾವಕಾಶ ಕಲ್ಪಿಸಿಕೊಡಬೇಕು," ಎಂದು ಮನವಿ ಮಾಡಿದರು. ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡಿ, "ಆಂಧ್ರಪ್ರದೇಶಕ್ಕೆ ನೀಡಲಾಗಿರುವ ಆನೆಗಳ ಆರೋಗ್ಯದ ಬಗ್ಗೆ ಪ್ರತಿ ವರ್ಷ ವರದಿ ತರಿಸಿಕೊಳ್ಳಲಾಗುವುದು. ಈ ಅಂಶವನ್ನು ಆನೆ ಹಸ್ತಾಂತರ ಕುರಿತ ಒಪ್ಪಂದದಲ್ಲೂ ಸೇರಿಸಲಾಗಿದೆ. ಪವನ್ ಕಲ್ಯಾಣ್ ಅವರು ಆನೆಗಳನ್ನು ಮುತುವರ್ಜಿಯಿಂದ ಕಾಪಾಡುವ ಭರವಸೆ ನೀಡಿದ್ದಾರೆ," ಎಂದರು.

ರಾಜ್ಯದಿಂದ ಅಂಧ್ರಕ್ಕೆ ನೀಡುತ್ತಿರುವ ಅನೆಗಳಿಗೆ ಪೂಜೆ ಸಲ್ಲಿಸಲಾಯಿತು. 'ಜಯ ಭಾರತ ಜನನಿಯ ತನುಜಾತೆ..' ಸಾಲುಗಳ ಮೂಲಕ ಭಾಷಣ ಆರಂಭಿಸಿದ ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್, ಕುವೆಂಪು ಅವರು ಬರೆದ ಅರಣ್ಯ ಹಾಡು ಹಾಡುವ ಮುನ್ನ ಕವಿತೆಯ ಸಾಲುಗಳನ್ನು ವಾಚಿಸುವ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನರ ಮನ ಗೆದ್ದರು.

"ನಾವು ಪ್ರಕೃತಿಯನ್ನು ರಕ್ಷಿಸಿದರೆ, ಅದು ನಮ್ಮನ್ನು ರಕ್ಷಿಸುತ್ತದೆ. ಹೀಗಾಗಿ, ನಾವೆಲ್ಲರೂ ಸಸಿಗಳನ್ನು ನೆಟ್ಟು ಪ್ರಕೃತಿಯನ್ನು ಪೋಷಿಸುವ ಸಂಕಲ್ಪ ಮಾಡೋಣ," ಎಂದು ಹೇಳಿದರು.

ಕನ್ನಡಿಗರ ಔದಾರ್ಯವನ್ನು ಮರೆಯಲು ಸಾಧ್ಯವಿಲ್ಲ, ಕರ್ನಾಟಕದಿಂದ ನಾವು ಸಾಕಷ್ಟು ಕಲಿಯಬೇಕಿದೆ. ಕರ್ನಾಟಕ ಆನೆಗಳ ಹಸ್ತಾಂತರ ಜತೆಗೆ ಜ್ಞಾನವನ್ನು ಹಂಚಿಕೊಂಡಿದೆ. ಈ ಆನೆಗಳನ್ನು ಖುದ್ದು ನಾನೇ ನೋಡಿಕೊಳ್ಳಲು ನಿರ್ಧರಿಸಿದ್ದೇನೆ.' ಎಂದು ತಿಳಿಸಿದರು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:22.05.2025

## 15. ವಿಧಾನಸೌಧ ಮಾರ್ಗದರ್ಶಿ ನಡಿಗೆ ಜನರಿಂದ ಮೆಚ್ಚುಗೆ

ರಾಜ್ಯದ ಶಕ್ತಿಕೇಂದ್ರ, ಪ್ರಜಾಪ್ರಭುತ್ವದ ಸಂಕೇತ ಎನಿಸಿರುವ ವಿಧಾನಸೌಧವು ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಿದೆ. ಐತಿಹಾಸಿಕ ಕಟ್ಟಡದ ಮಹತ್ವ, ಶಿಲ್ಪಕಲೆ ವೈಭವ ಮತ್ತು ಮಹತ್ವ ಪರಿಚಯಿಸುವ 'ವಿಧಾನಸೌಧ ಮಾರ್ಗದರ್ಶಿ ನಡಿಗೆ' ಪ್ರವಾಸಕ್ಕೆ ದಿನಾಂಕ:25.05.2025ರಂದು ಚಾಲನೆ ನೀಡಲಾಯಿತು. ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳು, ವಿದೇಶಿಗರ ಪ್ರವಾಸಕ್ಕೆ ಅವಕಾಶ ಕಲ್ಪಿಸಲಾಯಿತು.

ಪ್ರವಾಸೋದ್ಯಮ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ವಿಧಾನಸಭೆಯ ಸಚಿವಾಲಯದ ಸಹಭಾಗಿತ್ವದೊಂದಿಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಸಮಾರಂಭಕ್ಕೆ ಚಾಲನೆ ನೀಡಿದರು.

ಮಾರ್ಗದರ್ಶಿ ನಡಿಗೆ ಪ್ರವಾಸ ಹೆಸರಿನಲ್ಲಿ ವಿಧಾನಸೌಧ ವೀಕ್ಷಕರಿಗೆ ಪ್ರತಿ 2ನೇ ಮತ್ತು 4ನೇ ಶನಿವಾರ ಮತ್ತು ಎಲ್ಲ ಭಾನುವಾರ ಬೆಳಿಗ್ಗೆ 8ರಿಂದ ಸಂಜೆ 5ವರೆಗೆ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ.

16 ವರ್ಷ ಕೆಳಗಿನ ಮಕ್ಕಳಿಗೆ ಉಚಿತ ಪ್ರವೇಶವಿರಲಿದ್ದು, ಇದಕ್ಕೆ ಮೇಲ್ಪಟ್ಟವರಿಗೆ 50ರೂ. ಶುಲ್ಕ ನಿಗದಿ ಮಾಡಲಾಗಿದೆ. ಪ್ರತಿದಿನ ಗುಂಪಿನಲ್ಲಿ 30 ಜನ ಇರಲಿದ್ದು, ದಿನಕ್ಕೆ 300 ಪ್ರೇಕ್ಷಕರಿಗೆ ಮಾತ್ರ ಪ್ರವೇಶ ಅವಕಾಶವಿರಲಿದೆ.

90 ನಿಮಿಷಗಳ ನಡಿಗೆ ಪ್ರವಾಸ ಇದಾಗಿರಲಿದ್ದು, ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ವಿವರಣೆ ನೀಡಲಾಗುತ್ತದೆ. ವಿಧಾನಸೌಧದ ಪ್ರವೇಶದ್ವಾರ ಗೇಟ್ 3ರಿಂದ ಆರಂಭವಾಗಿ 1.5 ಕಿ.ಮೀ. ನಡಿಗೆ ಆಗಿದೆ. ಪ್ರಮುಖವಾಗಿ ವಿಧಾನಸೌಧಕ್ಕೆ ದೇಶದ ಪ್ರಥಮ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರು ಅವರು ಸ್ಥಾಪಿಸಿದ ಶಿಲಾಸ್ತಂಭ, ವಿಧಾನಸಭಾ ಮತ್ತು ವಿಧಾನಪರಿಷತ್ ಸಭಾಂಗಣ, ವಿಧಾನಸೌಧ ಮಹಾದ್ವಾರ, ಭೋಜನಗೃಹ, ಚಂದನದ ಮಾದರಿಗಳನ್ನು ತೋರಿಸಲಾಗುತ್ತದೆ. ಮಹಾತ್ಮಗಾಂಧಿ, ಡಾ.ಬಿ.ಆರ್. ಅಂಬೇಡ್ಕರ್, ವಿಧಾನಸೌಧದ ನಿರ್ಮಾತೃ ಕೆಂಗಲ್ ಹನುಮಂತಯ್ಯ, ವಚನ ಕ್ರಾಂತಿಗೆ ಕಾರಣರಾದ ಬಸವಣ್ಣ, ನಾಡಪ್ರಭು ಕೆಂಪೇಗೌಡ ಮತ್ತು ಭುವನೇಶ್ವರಿ ದೇವಿಯ ಪ್ರತಿಮೆಗಳನ್ನು ವೀಕ್ಷಿಸಬಹುದು.

ಪ್ರತಿಯೊಂದು ತಂಡದೊಂದಿಗೆ ತರಬೇತಿ ಪಡೆದ ಪ್ರವಾಸಿ ಮಾರ್ಗದರ್ಶಕರು(ಟೂರ್ ಗೈಡ್) ಪ್ರವಾಸಿ ಮಿತ್ರ ಮತ್ತು ವಿಧಾನಸೌಧದ ಭದ್ರತಾ ಸಿಬ್ಬಂದಿ ಇರಲಿದ್ದಾರೆ. ಈ ಕಥನವು ಇತಿಹಾಸ ಮತ್ತು ಪ್ರವಾಸೋದ್ಯಮ ತಜ್ಞರು ಸಂಶೋಧಿಸಿದ ಸ್ಕ್ರಿಪ್ಟ್ ಆಧರಿಸಿದೆ. ದ್ರಾವಿಡ ಶೈಲಿಯ ಶಿಲ್ಪಕಲೆ, 'ಸರ್ಕಾರದ ಕೆಲಸ ದೇವರ ಕೆಲಸ' ಎಂಬ ಘೋಷವಾಕ್ಯ ಮತ್ತು 'ಜನರ ಅರಮನೆ' ಎಂಬ ದೃಷ್ಟಿಕೋನವು ಈ ಪ್ರವಾಸದ ಭಾಗವಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

**ಆಧಾರ:** ವಿಜಯವಾಣಿ, ದಿನಾಂಕ:26.05.2025

## 16. CM's Dashboard launched

The Chief Minister's Dashboard, a platform that provides real-time, integrated insights into key development indicators across Karnataka, was launched on 30.05.2025.

It was launched by Chief Minister Siddaramaiah during the review meeting with the Deputy Commissioners of all districts and CEOs of all zilla panchayats at the State Secretariat.

The dashboard, developed in house by the Centre for e-Governance (CeG), is now functionally complete and hosted under the domain cm dashboard karnataka.gov.in. "This platform provides real time, integrated in sights into key development indicators across Karnataka enabling data driven governance and decision making at the highest level," an official release said.

The dashboard is built using a microservices based architecture, ennring scalabilisy and ease of intigration. The data is integrated via APls (application programming interface) from various departaments, eliminating manual entry, said the release.

The dashboard categorises State performance data into four primary sectors: economic growth (eg., investments and beneficiaries), legal/ Judiciary management (RTI and Sakala case disposals), infrastructure development (roads, irrigation, and renewable energy) and citizen centric governance (guarantee schemes and Janaspandana).

The Chief Miniser, during the launch told respective officials to the taluk and district head quarters to address the grievances of public. The district as incharge Secretaries were instructed districts twice a month for review of development works. He also told them to pay surprise visits to schools, hostel and hospitals and submit reports to the Chief Secretary.

Referring to Indira Canteens, the Chief Minister instructed the Deputy Commissioners to commence delivery of food at all canteen which have buildings within a week. Out of 186 new indira canteen, construction of 103 had been completed. Food is being delivered at only 43 canteen.

The Chief Minister viewed the district wise data of farmer suicides and took to task officials for the delay in the release of compensation in 13 cases.

**Courtesty**: The Hindu, dated:31.5.2025

## 17. ಮೂವರು ಶಾಸಕರ ವಿರುದ್ಧ ಎಫ್‌ಐಆರ್

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಾಮಗಾರಿ ವಿರೋಧಿಸಿ ತಾಲ್ಲೂಕಿನ ಸಂಕಾಪುರದ ಬಳಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಬಿಜೆಪಿ ಮತ್ತು ಜೆಡಿಎಸ್‌ನ ಮೂವರು ಶಾಸಕರು ಮತ್ತು ಮಠಾಧೀಶರು ಸೇರಿದಂತೆ ನೂರಕ್ಕೂ ಹೆಚ್ಚು ಜನರ ವಿರುದ್ಧ ಗುಬ್ಬಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಮಠಾಧೀಶರು, ಶಾಸಕರಾದ ಬಿ.ಸುರೇಶ್‌ಗೌಡ, ಎಂ.ಟಿ.ಕೃಷ್ಣಪ್ಪ, ಜಿ.ಬಿ.ಜ್ಯೋತಿ ಗಣೇಶ್, ಮಾಜಿ ಸಚಿವ ಸೊಗಡು ಶಿವಣ್ಣ, ಬಿಜೆಪಿ ಮುಖಂಡ ಎಸ್.ಡಿ.ದಿಲೀಪ್ ಕುಮಾರ್, ಎ.ಗೋವಿಂದರಾಜು, ಎಚ್.ಎಸ್.ರವಿಶಂಕರ್ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪ್ರತಿಭಟನೆಗೆ ಸಾವಿರಾರು ಜನ ಸೇರುವ ಮಾಹಿತಿ ಪಡೆದ ತಾಲ್ಲೂಕು ಆಡಳಿತ ನಿಷೇಧಾಜ್ಞೆ ಜಾರಿಗೊಳಿಸಿತ್ತು. ಲಿಂಕ್ ಕೆನಾಲ್ ಕಾಮಗಾರಿ ನಡೆಯುತ್ತಿರುವ ಸಂಕಾಪುರದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಹೋರಾಟಕ್ಕೆ ಅವಕಾಶ ನೀಡಿರಲಿಲ್ಲ. ಸಾವಿರಾರು ಪ್ರತಿಭಟನಾಕಾರರು ನಿಷೇಧಾಜ್ಞೆ ಧಿಕ್ಕರಿಸಿ ಕಾಮಗಾರಿ ಸ್ಥಳಕ್ಕೆ ನುಗ್ಗಿದ್ದರು.

ನಿಷೇಧಾಜ್ಞೆ ಉಲ್ಲಂಘನೆ, ಕೊಲೆ ಯತ್ನ, ಸರ್ಕಾರಿ ಆಸ್ತಿಪಾಸ್ತಿಗೆ ಹಾನಿ, ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇರೆಗೆ ಇವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಏಕಾಏಕಿ ಕಾಮಗಾರಿ ಜಾಗಕ್ಕೆ ನುಗ್ಗಿ, ಆಸ್ತಿಪಾಸ್ತಿಗೆ ಹಾನಿ ಮಾಡಲಾಗಿದೆ. ಬೃಹತ್ ನಿರ್ಮಾಣ ವಾಹನಗಳ ಮೇಲೆ ಕಲ್ಲು ತೂರಾಟ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

**ಆಧಾರ:** ಪ್ರಜಾವಾಣಿ, ದಿನಾಂಕ:02.06.2025

## 18. ಬೂಕರ್ ಬಾನು, ಭಾಸ್ತಿಗೆ ₹10ಲಕ್ಷ ಪುರಸ್ಕಾರ: ಸಿಎಂ

ಕನ್ನಡಕ್ಕೆ ಅಂತರ್‌ರಾಷ್ಟ್ರೀಯ ಮಟ್ಟದ ಬೂಕರ್ ಪ್ರಶಸ್ತಿ ತಂದುಕೊಟ್ಟ ಸಾಹಿತಿ ಬಾನು ಮುಸ್ತಾಕ್ ಮತ್ತು ದೀಪಾ ಭಾಸ್ತಿ ಅವರಿಗೆ ರಾಜ್ಯ ಸರ್ಕಾರದಿಂದ ತಲಾ 10 ಲಕ್ಷ ಪುರಸ್ಕಾರ ನೀಡುವುದಾಗಿ ಸಿಎಂ ಸಿದ್ದರಾಮಯ್ಯ ಘೋಷಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬುಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಸ್ತಾಕ್ ಮತ್ತು ದೀಪಾ ಭಾಸ್ತಿ ಅವರನ್ನು ಅಭಿನಂದಿಸಿ ಅವರು ಮಾತನಾಡಿದರು.

ಕನ್ನಡ ಭಾಷೆಗೆ ಬೂಕರ್ ಪ್ರಶಸ್ತಿ ಒದಗಿಸಿಕೊಡುವ ಮೂಲಕ ಬಾನು ಮುಸ್ತಾಕ್ ನಮ್ಮ ಭಾಷೆಯ ಕೀರ್ತಿ ಹೆಚ್ಚಿಸಿದ್ದಾರೆ. ಇದು 'ಇಡೀ ಕನ್ನಡ ಜಗತ್ತಿನ ಹೆಮ್ಮೆ ತಮ್ಮ ಕಥೆಗಳ ಮೂಲಕ ಮತ್ತು ಅನುವಾದದಿಂದ ಕೀರ್ತಿ ತಂದ ಬಾನು ಮುಸ್ತಾಕ್, ದೀಪಾ ಭಾಸ್ತಿ ಅವರು ಅಭಿನಂದನಾರ್ಹರು ಎಂದರು.

ಸಾಹಿತ್ಯಕ್ಕೆ ಸಮಾಜವನ್ನು ಬೆಸೆಯುವ ಶಕ್ತಿ ಇದೆ. ಸಾಹಿತ್ಯದ ಮೂಲಕ ಸಮಾಜವನ್ನು ಒಗ್ಗೂಡಿಸಬೇಕೇ ಹೊರತು ವಿಭಜಿಸಬಾರದು. ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಧ್ವನಿಯಾಗಿ ಮೌಢ್ಯ ವಿರೋಧಿಸಿ ಬರೆಯುವ ಪ್ರಗತಿಪರ ಎದೆಗಾರಿಕೆ ಬಾನು ಅವರಲ್ಲಿದೆ. ಸಾಹಿತ್ಯದ ಮೂಲಕ ಮಾನವೀಯ ಸಂದೇಶ ನೀಡುವ ಜವಾಬ್ದಾರಿಯನ್ನು ಬಾನು ಮುಸ್ತಾಕ್ ಅವರು ನಿರ್ವಹಿಸಿದ್ದಾರೆ ಎಂದು ಶ್ಲಾಘಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಬಾನು ಮುಸ್ತಾಕ್ ಮತ್ತು ದೀಪಾ ಭಾಸ್ತಿ ಅವರು ವಿಶ್ವಮಟ್ಟದಲ್ಲಿ ಕನ್ನಡದ ರಾಯಭಾರಿಗಳಾಗಿ ಬೆಳಗಿದ್ದಾರೆ. ಬೂಕರ್ ಪ್ರಶಸ್ತಿ ಗೆದ್ದು ಕನ್ನಡದ ಜ್ಯೋತಿಯನ್ನು ಬೆಳಗಿಸಿದ್ದಾರೆ. ಸಪ್ತ ಸಾಗರದ ಆಚೆ ಕನ್ನಡ ಡಿಂಡಿಮ ಕೇಳಿಸುತ್ತಿದೆ. ಕನ್ನಡದ ಹಿರಿಮೆಯನ್ನು ಹೆಚ್ಚಿಸಿದ ಇಬ್ಬರೂ ಮಹಿಳೆಯರಿಗೆ ಸರ್ಕಾರದ ಕಡೆಯಿಂದ ತುಂಬು ಹೃದಯದ ಕೃತಜ್ಞತೆಗಳು ಎಂದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:03.06.2025

## 19. ವಿಧಾನಸೌಧ ಮೆಟ್ಟಿಲುಗಳ ಮೇಲೆ ಆರ್‌ಸಿಬಿಗೆ ಸನ್ಮಾನ

ಆರ್‌ಸಿಬಿ ತಂಡ ದಿನಾಂಕ:04.06.2025ರಂದು ವಿಧಾನಸೌಧಕ್ಕೆ ಆಗಮಿಸಿತು. ರಾಜ್ಯದ ಶಕ್ತಿಸೌಧದ ಮೆಟ್ಟಿಲುಗಳ ಮೇಲೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಉಪಸ್ಥಿತಿಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾರ ಹಾಕಿ, ಮೈಸೂರು ಪೇಟ ತೊಡಿಸಿ, ವಿಶೇಷ ಸ್ಮರಣಿಕೆ ನೀಡಿ ಸನ್ಮಾನಿಸಿದರು. ನಾಡ ಗೀತೆ ಹಾಡಿ ಸಂಭ್ರಮಿಸಲಾಯಿತು.

**ಆಧಾರ:** ಕನ್ನಡ ಪ್ರಭ, ದಿನಾಂಕ:05.06.2025

## 20. ಕಟ್ಟಡ ನಕ್ಷೆಗಾಗಿ ಇ–ಖಾತಾ ಕಡ್ಡಾಯ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಕ್ಷೆಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸ್ವತ್ತುಗಳು ಇ–ಖಾತಾ ಪಡೆದಿರುವುದನ್ನು ಕಡ್ಡಾಯಗೊಳಿಸಿ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಆದೇಶಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಕ್ಷೆ ಮಂಜೂರಾತಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಮತ್ತು ವಿತರಣೆ ವ್ಯವಸ್ಥೆ ಮಾಡಲಾಗಿದೆ. ಅದರ ಜತೆಗೆ ಸ್ವತ್ತುಗಳಿಗೆ ಇ–ಖಾತಾವನ್ನು ಆನ್‌ಲೈನ್ ಮೂಲಕ ನೀಡಲಾಗುತ್ತಿದೆ. ಇದೀಗ ಎರಡೂ ತಂತ್ರಾಂಶವನ್ನು ಏಕೀಕರಣಗೊಳಿಸಲಾಗುತ್ತಿದೆ.

ಹೀಗಾಗಿ ಕಟ್ಟಡ ನಕ್ಷೆ ಮಂಜೂರಾತಿಗೆ ಅರ್ಜಿ ಸಲ್ಲಿಸುವವರು ಮೊದಲು ಇ–ಖಾತಾವನ್ನು ಪಡೆದಿರಬೇಕಿದೆ. ಹೀಗಾಗಿ 2025ರ ಜುಲೈ 1ರಿಂದ ನಕ್ಷೆ ಮಂಜೂರಾತಿಗೆ ಅರ್ಜಿ ಸಲ್ಲಿಸುವವರು ಇ–ಖಾತಾ ಅಥವಾ ಇಪಿಐಡಿ ಸಂಖ್ಯೆಯನ್ನು ತಂತ್ರಾಂಶದಲ್ಲಿ ನಮೂದಿಸುವುದು ಹಾಗೂ ಇ–ಖಾತಾ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಇ–ಖಾತಾ ಸಲ್ಲಿಸದ ಅರ್ಜಿಗಳನ್ನು ಕಟ್ಟಡ ನಕ್ಷೆ ಮಂಜೂರಾತಿಗೆ ಪರಿಗಣಿಸದಂತೆಯೂ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಇನ್ನು, ನಂಬಿಕೆಯೊಂದಿಗೆ ಪರಿಶೀಲನೆ ವ್ಯವಸ್ಥೆ ಅಡಿಯಲ್ಲಿ ನಿಗದಿತ ಕಾಲಮಿತಿಯಲ್ಲಿ ತಾತ್ಕಾಲಿಕ ನಕ್ಷೆ ಮಂಜೂರಾತಿ ಹೊಣೆಯನ್ನು ಸಂಬಂಧಪಟ್ಟ ಸಹಾಯಕ ನಿರ್ದೇಶಕ (ನಗರ ಯೋಜನೆ) ಅವರಿಗೆ ನೀಡಲಾಗಿದೆ. ಒಂದು ವೇಳೆ ಸಹಾಯಕ ನಿರ್ದೇಶಕ(ನಗರ ಯೋಜನೆ) ನಿಗದಿತ ಮಿತಿಯಲ್ಲಿ ಅರ್ಜಿಗಳನ್ನು ಪರಿಶೀಲಿಸದಿದ್ದರೆ ತಂತ್ರಾಂಶದಲ್ಲಿ ಅರ್ಜಿಗಳಿಗೆ ಸ್ವಯಂಚಾಲಿತವಾಗಿ ಡೀಮ್ಡ್ ಅನುಮೋದನೆ ದೊರೆಯಲಿದೆ. ಒಂದು ವೇಳೆ ನಕ್ಷೆ ಮಂಜೂರಾತಿ ಅರ್ಜಿಗಳು ಇ–ಖಾತಾ ಸೇರಿದಂತೆ ಇನ್ನಿತರ ದಾಖಲೆಗಳನ್ನು ಸಲ್ಲಿಸದೇ ಡೀಮ್ಡ್ ಅನುಮೋದನೆ ದೊರೆತರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆ ಮಾಡಿ ನಿಯಮದ ಪ್ರಕಾರ ಶಿಸ್ತು ಕ್ರಮಕೈಗೊಳ್ಳುವುದಾಗಿ ಆದೇಶದಲ್ಲಿ ಎಚ್ಚರಿಕೆ ನೀಡಲಾಗಿದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:10.06.2025

## 21. ಪಿ.ಎಂ.ಕುಸುಮ್ 'ಸಿ' ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೌರಿಬಿದನೂರು ತಾಲ್ಲೂಕಿನ ತೊಂಡೇಬಾವಿ ಹೋಬಳಿ ಹನುಮೇನಹಳ್ಳಿಯಲ್ಲಿ ಪಿಎಂ–ಕುಸುಮ್ 'ಸಿ' ಯೋಜನೆಯಡಿ ಸ್ಥಾಪಿಸಿರುವ ಸೋಲಾರ್ ಘಟಕ ಲೋಕಾರ್ಪಣೆಗೊಳಿಸಿದರು.

ನಂತರ ಗೌರಿಬಿದನೂರಿನಲ್ಲಿ ನಡೆದ ರಾಜ್ಯ ಮಟ್ಟದ ಈ ಕಾರ್ಯಕ್ರಮದಲ್ಲಿ ಗದಗ, ಚಾಮರಾಜನಗರ, ತುಮಕೂರು ಜಿಲ್ಲೆಯ ಸೋಲಾರ್ ಘಟಕಗಳನ್ನೂ ಆನ್‌ಲೈನ್ ಮೂಲಕ ಉದ್ಘಾಟಿಸಿದರು. ಈ ಮೂರು ಜಿಲ್ಲೆಗಳ ರೈತರು ಮತ್ತು ಜನಪ್ರತಿನಿಧಿಗಳು ಮುಖ್ಯಮಂತ್ರಿ ಜತೆ ಸಂವಾದ ನಡೆಸಿದರು.

ಸಂವಾದದ ವೇಳೆ ಮುಖ್ಯಮಂತ್ರಿ, ಕುಸುಮ್ 'ಸಿ' ಯೋಜನೆಯಲ್ಲಿ ಕೇಂದ್ರದ ಪಾಲು ಶೇ.30. ರಾಜ್ಯದ ಪಾಲು ಶೇ.50 ಮತ್ತು ಹೂಡಿಕೆದಾರರ ಪಾಲು ಶೇ.20. ಆದರೂ, ಕೇಂದ್ರ ಸರ್ಕಾರ ಇದು ನನ್ನ ಯೋಜನೆ ಎನ್ನುತ್ತಿದೆ. 2021ರಲ್ಲಿ ಈ ಯೋಜನೆ ರಾಜ್ಯದಲ್ಲಿ ಜಾರಿ ಆಗಬೇಕಾಗಿತ್ತು. ಆದರೆ, ಅಂದಿನ

ಬಿಜೆಪಿ ಸರ್ಕಾರವೇ ಜಾರಿಗೊಳಿಸಲಿಲ್ಲ. ಬಿಜೆಪಿ ರೈತರ ಪರವಾಗಿ ಇದ್ದಿದ್ದರೆ ಯೋಜನೆ ಅನುಷ್ಠಾನಗೊಳಿಸುತ್ತಿತ್ತು. ಒಂದು ಯುನಿಟ್ ವಿದ್ಯುತ್ ಸಹ ಅವರು ಉತ್ಪಾದಿಸಲಿಲ್ಲ. ನಾವು ಅಧಿಕಾರಕ್ಕೆ ಬಂದ ಮೇಲೆ ಈ ಯೋಜನೆ ಅನುಷ್ಠಾನಗೊಳಿಸಿದ್ದೇವೆ. ರೈತರ ಪರ ಯಾರು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ಒತ್ತಿ ಹೇಳಿದರು.

ಸಂವಾದದಲ್ಲಿ ಪಾಲ್ಗೊಂಡಿದ್ದ ಗದಗ ಜಿಲ್ಲೆ ವಿಧಾನ ಪರಿಷತ್ ಬಿಜೆಪಿ ಸದಸ್ಯ ಎಸ್.ವಿ.ಸಂಕನೂರ, "ನಮ್ಮ ಸರ್ಕಾರವೂ ಯೋಜನೆ ಅನುಷ್ಠಾನಕ್ಕೆ ಪ್ರಯತ್ನಿಸಿದೆ. ಆದರೆ, ನೀವು ಅನುಷ್ಠಾನಗೊಳಿಸಿದ್ದೀರಿ. ನಾವು ಏನೂ ಮಾಡಿಲ್ಲ ಎನ್ನಬೇಡಿ ಸರ್. ನಮ್ಮ ಕೊಡುಗೆಯೂ ಯೋಜನೆ ಅನುಷ್ಠಾನಕ್ಕೆ ಇದೆ" ಎಂದರು.

ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ, ಸೋಲಾರ್ ಘಟಕ ಅಳವಡಿಸಲು ಖಾಸಗಿಯವರಿಂದ ಗುತ್ತಿಗೆ ಪಡೆಯುತ್ತಿರುವ ಜಮೀನಿಗೆ ವಾರ್ಷಿಕ ₹25 ಸಾವಿರ ಬಾಡಿಗೆ ನೀಡಲಾಗುತ್ತಿದೆ, ಇದನ್ನು ಹೆಚ್ಚಿಸಬೇಕು ಎಂದು ಕೋರಿದರು. ಆಗ ಮುಖ್ಯಮಂತ್ರಿ ಈ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನಿಸೋಣ ಎಂದರು.

ತಿಪಟೂರು ಶಾಸಕ ಕೆ.ಷಡಕ್ಷರಿ ಸಹ ಸಂವಾದದಲ್ಲಿ ಭಾಗಿಯಾಗಿದ್ದರು. 'ನಮ್ಮ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ 4 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ಹೆಚ್ಚಿಸಿದೆ. ಈಗ ರಾಜ್ಯದಲ್ಲಿ 30 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಮುಂದಿನ ಮೂರು ವರ್ಷದಲ್ಲಿ 60 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದಿಸುತ್ತೇವೆ' ಎಂದು ಮುಖ್ಯಮಂತ್ರಿ ವಿಶ್ವಾಸ ವ್ಯಕ್ತಪಡಿಸಿದರು.

ಕುಸುಮ್ 'ಸಿ' ಯೋಜನೆ ಮೂಲಕ 2,400 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುವುದು. ಇದರಿಂದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಬೆಳಗ್ಗಿನ ಸಮಯದಲ್ಲಿಯೇ 7 ತಾಸು ವಿದ್ಯುತ್ ನೀಡಲಾಗುವುದು ಎಂದರು. 'ನಮ್ಮ ಸರ್ಕಾರ ಪ್ರತಿವರ್ಷ ಇಂಧನ ಇಲಾಖೆ ಮೂಲಕ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ₹19,000 ಕೋಟಿ ಸಹಾಯಧನ ನೀಡುತ್ತಿದೆ' ಎಂದು. ತಿಳಿಸಿದರು.

**ಆಧಾರ**: ಪ್ರಜಾವಾಣಿ. ದಿನಾಂಕ:12.06.2025

## 22. ಕೆಲಸದ ಅವಧಿ 10 ಗಂಟೆಗೆ ಹೆಚ್ಚಳ

ಕಾರ್ಮಿಕರ ಕೆಲಸದ ಅವಧಿಯ ಗರಿಷ್ಠ ಮಿತಿಯನ್ನು ದಿನಕ್ಕೆ ಒಂಬತ್ತರಿಂದ ಹತ್ತು ಗಂಟೆಗೆ ಹೆಚ್ಚಿಸುವುದು ಮತ್ತು ಹತ್ತಕ್ಕಿಂತ ಕಡಿಮೆ ಉದ್ಯೋಗಿಗಳಿರುವ ಅಂಗಡಿಗಳು, ವಾಣಿಜ್ಯ ಸಂಸ್ಥೆಗಳನ್ನು ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಡುವ ಉದ್ದೇಶದಿಂದ ಎರಡು ಕಾನೂನುಗಳ ತಿದ್ದುಪಡಿಗೆ ರಾಜ್ಯ ಸರ್ಕಾರ ಮುಂದಾಗಿದೆ.

ಉದ್ದೇಶಿತ ಕಾನೂನು ತಿದ್ದುಪಡಿ ಕುರಿತು ಚರ್ಚಿಸಲು ಕೈಗಾರಿಕಾ ಮತ್ತು ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಸಭೆಯನ್ನು ಕಾರ್ಮಿಕ ಇಲಾಖೆ ದಿನಾಂಕ:18.06.2025ರಂದು ಹಮ್ಮಿಕೊಂಡಿದೆ. ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961ರ ಸೆಕ್ಷನ್ 7ರ ಪ್ರಕಾರ, ಕೆಲಸದ ಅವಧಿ ದಿನಕ್ಕೆ ಒಂಬತ್ತು ಗಂಟೆಯನ್ನು ಮೀರಬಾರದು ಮತ್ತು ಗರಿಷ್ಠ ಹೆಚ್ಚುವರಿ ಅವಧಿ (ಒಟಿ) 10 ಗಂಟೆಗಳನ್ನು ಮೀರಬಾರದು. ಉದ್ದೇಶಿತ ತಿದ್ದುಪಡಿಯ ಮೂಲಕ ಕೆಲಸದ ಅವಧಿಯನ್ನು

ದಿನಕ್ಕೆ ಗರಿಷ್ಠ 10 ಗಂಟೆ ಮತ್ತು ಹೆಚ್ಚುವರಿ ಕೆಲಸದ ಅವಧಿಯನ್ನು ದಿನಕ್ಕೆ ಗರಿಷ್ಠ 12 ಗಂಟೆಗಳಿಗೆ ವಿಸ್ತರಿಸಲು ಸರ್ಕಾರ ಮುಂದಾಗಿದೆ. ಆ ಮೂಲಕ ಮೂರು ತಿಂಗಳಲ್ಲಿ ಹೆಚ್ಚುವರಿ ಕೆಲಸದ ಗರಿಷ್ಠಮಿತಿಯು 50 ರಿಂದ 144 ಗಂಟೆಗೆ ಹೆಚ್ಚಳ ಆಗಲಿದೆ.

**ಆಧಾರ: ಪ್ರಜಾವಾಣಿ, ದಿನಾಂಕ:18.06.2025**

## 23. ಮೆಟ್ರೋ ನಿಗಮಕ್ಕೆ ರಾಷ್ಟ್ರೀಯ ಪ್ರಶಸ್ತಿ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ(ಬಿಎಂಆರ್‌ಸಿಎಲ್) ಅನ್ನು ರಾಷ್ಟ್ರೀಯ ಮಟ್ಟದ ಇಟಿ ಇನ್‌ಫ್ರಾ ರೈಲ್ ಶೋ ಮತ್ತು ಅವಾರ್ಡ್‌ಗಳಲ್ಲಿ ಎಂಆರ್‌ಟಿಎಸ್, ಆರ್‌ಆರ್‌ಟಿಎಸ್ ಯೋಜನೆಗಳ ಕ್ಯಾಪೆಕ್ಸ್ ಅಥವಾ ಓಪೆಕ್ಸ್‌ಗೆ ಅತ್ಯಾಧುನಿಕ ಹಣಕಾಸು ವಿಧಾನ ಎಂಬ ಪ್ರತಿಷ್ಠಿತ ಪ್ರಶಸ್ತಿಯಿಂದ ಗೌರವಿಸಲಾಗಿದೆ. ದೇಶದ ಇನ್‌ಫ್ರಾ ಕ್ಷೇತ್ರದಲ್ಲಿ ಪರಿಣತಿ ಮತ್ತು ಮುಂದಾಲೋಚನೆಯ ಚಟುವಟಿಕೆಗಳನ್ನು ಗುರುತಿಸುವ ಈ ಪ್ರಶಸ್ತಿಗೆ ಬಿಎಂಆರ್‌ಸಿಎಲ್ ಆಯ್ಕೆಯಾಗಿದೆ.

ಬಿಎಂಆರ್‌ಸಿಎಲ್ ಟಿಕೆಟ್ ಹೊರೆಗಿನ ಆದಾಯದ ಮೂಲಗಳನ್ನು ಪ್ರಯೋಜನಪಡಿಸಿಕೊಂಡು ಮೆಟ್ರೋ ವಿಸ್ತರಣೆ ಮತ್ತು ನಿರ್ವಹಣೆಗೆ ಅನುದಾನ ಒದಗಿಸಿದ ಉತ್ಸಾಹಪೂರ್ಣ ಕ್ರಮಗಳಿಗೆ ಈ ಪ್ರಶಸ್ತಿ ಲಭಿಸಿದೆ. ಇವುಗಳಲ್ಲಿ ದೀರ್ಘಕಾಲ ವಾಣಿಜ್ಯ ಬಾಡಿಗೆ, ನಿಲ್ದಾಣಗಳ ಹೆಸರಿಡುವ ಹಕ್ಕು, ಹೊಸದಾದ ಜಾಹೀರಾತು ಪಾಲುದಾರಿಕೆಗಳು ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಬಿಎಐಎಲ್) ಜೊತೆಗಿನ ಸಾರ್ವಜನಿಕ–ಖಾಸಗಿ ಭಾಗಿದಾರಿ ಯೋಜನೆಗಳು ಸೇರಿವೆ. ಭಾರತೀಯ ರೈಲ್ವೆ, ಗೃಹ ಮತ್ತು ನಗರ ವ್ಯವಹಾರಗಳ ಸಚಿವಾಲಯ ಎನ್‌ಎಚ್‌ಎಐ, ಬಿಎಚ್‌ಇಎಲ್, ಎನ್‌ಎಚ್‌ಎಸ್‌ಅರ್‌ಸಿಎಲ್ ಮತ್ತು ಇತರ ಮೆಟ್ರೋ ಸಂಸ್ಥೆಗಳ ಹಿರಿಯ ಅಧಿಕಾರಿಗಳನ್ನೊಳಗೊಂಡ ನಿರ್ಣಾಯಕ ಮಂಡಳಿ ಈ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಬಿಎಂಆರ್‌ಸಿಎಲ್ ಮುಖ್ಯ ಮಹಾಪ್ರಬಂಧಕ ಲಕ್ಷ್ಮಣ್ ಸಿಂಗ್ ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ.

ಈ ರಾಷ್ಟ್ರೀಯ ಪ್ರಶಸ್ತಿ ಬಿಎಂಆರ್‌ಸಿಎಲ್‌ನ ಅವಿಷ್ಕಾರಶೀಲತೆ ಮತ್ತು ಸ್ಥಿರತೆಯತ್ತದ ಬದ್ಧತೆಯನ್ನು ದೃಢಪಡಿಸುತ್ತದೆ. ಸಾರ್ವಜನಿಕ ಅನುದಾನಗಳ ಮೇಲಿನ ಆಧಾರವನ್ನು ಕಡಿಮೆ ಮಾಡಿ, ನಗರಕ್ಕೆ ದೀರ್ಘಕಾಲದ ಮೌಲ್ಯ ನೀಡುವ ಮೂಲಕ ಹಣಕಾಸು ಬದ್ಧತೆಯಿಂದ ಕೂಡಿದ ಭವಿಷ್ಯಮುಖಿ ಮೆಟ್ರೋ ವ್ಯವಸ್ಥೆಯನ್ನು ರೂಪಿಸುವ ನಿಟ್ಟಿನಲ್ಲಿ ನಾವು ಸತತ ಪ್ರಯತ್ನಿಸುತ್ತಿದ್ದೇವೆ. ಈ ಪ್ರಶಸ್ತಿ ನಮ್ಮ ತಂಡದ ಸಂಯುಕ್ತ ಪ್ರಯತ್ನ ಮತ್ತು ದೃಷ್ಟಿಕೋನದ ಪ್ರಮಾಣ ಪತ್ರವಾಗಿದೆ. ನಾವು ನಗರ ಸಾಗಣೆಯ ಮಾದರಿ ರೂಪಿಸುವಲ್ಲಿ ಮುಂದುವರಿಯುತ್ತೇವೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ್ ರಾವ್ ಹೇಳಿದ್ದಾರೆ.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:19.06.2025

## 24. Janardhana Reddy's Assembly membership restored

The Karnataka Legislative Assembly restored the membership of BJP leader and mining baron Gali Janardhana Reddy as MLA for Gangavati, while stipulating that it was subject to "further judicial pronouncements."

On May 6 2025, Reddy, along with three others were convicted in the Obulapuram Mining Company(OMC) illegal mining case by a CBI court in Hyderabad, and were awarded a seven year prison term, in addition to being levied a fine of Rs.10,000 each.

"In view of the order dated June 11, 2025 by the Telangana High Court, the disqualification of Janardhana Reddy has ceased to to be in operation, subject to further judicial pronouncements," read the notification Karnataka Legislative Assembly Secretary M K Vishalakshmi.

**Courtesy:**19.06.2025, dated:19.06.2025

## 25. ಗುತ್ತಿಗೆ ಸಿಬ್ಬಂದಿಗೆ ₹5 ಲಕ್ಷವರೆಗೆ ಕ್ಯಾಶ್‌ಲೆಸ್ ಚಿಕಿತ್ಸೆ

ಸರ್ಕಾರಿ ಇಲಾಖೆಗಳಲ್ಲಿ ಗುತ್ತಿಗೆ ಹೊರಗುತ್ತಿಗೆ ಮತ್ತು ಗೌರವಧನದ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು 3 ಲಕ್ಷ ಸಿಬ್ಬಂದಿ ಹಾಗೂ ಅವರ ಅವಲಂಬಿತರಿಗೆ ವಾರ್ಷಿಕ 5 ಲಕ್ಷ ರೂ. ವರೆಗೆ ನಗದು ರಹಿತ ಆರೋಗ್ಯ ಯೋಜನೆಗೆ ಜಾರಿಗೆ ತರಲು ದಿನಾಂಕ:19.06.2025ರಂದು ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಭೆ ಮುಕ್ತಾಯಗೊಂಡ ಬಳಿಕ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಆರೋಗ್ಯ ಇಲಾಖೆ ಮೂಲಕ ರೂ.3 ಲಕ್ಷ ಸಿಬ್ಬಂದಿ ಮತ್ತು ಅವರ ಅವಲಂಬಿತರಿಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ವಾರ್ಷಿಕ ರೂ.5 ಲಕ್ಷವರೆಗೆ ನಗದು ರಹಿತ ಚಿಕಿತ್ಸೆಯ ಆರೋಗ್ಯ ಯೋಜನೆಗೆ ಅನುಮೋದನೆ ನೀಡಲಾಗಿದೆ. ಇದಕ್ಕಾಗಿ ಸಿಬ್ಬಂದಿಯಿಂದ ಮಾಸಿಕ ರೂ.100 ವಂತಿಕೆ ಮತ್ತು ಸರ್ಕಾರದಿಂದ ಉಳಿದ ಹಣವನ್ನು ಭರಿಸಲಾಗುತ್ತದೆ ಎಂದು ವಿವರಿಸಿದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:19.06.2025

## 26. ಬಮುಲ್ ಅಧ್ಯಕ್ಷರಾಗಿ ಡಿ.ಕೆ. ಸುರೇಶ್ ಆಯ್ಕೆ

ಬೆಂಗಳೂರು ಸಹಕಾರ ಹಾಲು ಒಕ್ಕೂಟ(ಬಮುಲ್)ದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಡಿ.ಕೆ.ಸುರೇಶ್ ಸಂಘದ ಅಧ್ಯಕ್ಷರಾಗಿ ಹಾಗೂ ಕುದೂರು ರಾಜಣ್ಣ ಅವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬಮುಲ್ ಆಡಳಿತ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ನಿಕಟಪೂರ್ವ ಸಂಸದ ಡಿ.ಕೆ.ಸುರೇಶ್ ಬೆಂಗಳೂರು ಡೈರಿ ಸರ್ಕಲ್ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದ್ದರು. ಈ ಸ್ಥಾನಕ್ಕೆ ಬೇರೆ ಯಾರೂ ಉಮೇದುವಾರಿಕೆ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗೆಲುವಿನ ನಂತರ ಸುದ್ದಿಗಾರರೊಂದಿಗೆ ಡಿ.ಕೆ.ಸುರೇಶ್ ಮಾತನಾಡಿ, ಬಮುಲ್‌ನಲ್ಲಿ 16 ನಿರ್ದೇಶಕರ ಪೈಕಿ 14 ಜನ ಚುನಾವಣೆ ಮೂಲಕ ಆರಿಸಲಾಗಿದ್ದು, ಇಬ್ಬರು ಸರಕಾರದಿಂದ ನಾಮನಿರ್ದೇಶನಗೊಂಡಿದ್ದಾರೆ. ಬಮುಲ್‌ನ ಚುನಾವಣೆ ವೇಳೆ ನನ್ನನ್ನು ಅಧ್ಯಕ್ಷನನ್ನಾಗಿ, ಮಾಗಡಿ ತಾಲೂಕಿನ ಕುದೂರು ರಾಜಣ್ಣ ಅವರನ್ನು ಉಪಾಧ್ಯಕ್ಷರನ್ನಾಗಿ ಎಲ್ಲಾ ನಿರ್ದೇಶಕರು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ ಎಂದರು.

ನಮ್ಮ ಪಕ್ಷದ ಅಧ್ಯಕ್ಷರಾದ ಡಿಸಿಎಂ ಡಿ.ಕೆ.ಶಿವಕುಮಾರ್, ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರಾದ

ಕೆ.ಎಚ್. ಮುನಿಯಪ್ಪ, ಶಾಸಕರಾದ ಬಾಲಕೃಷ್ಣ ಸಿ.ಪಿ. ಯೋಗೇಶ್ವರ್, ಇಕ್ಬಾಲ್ ಹುಸೇನ್, ಶಿವಣ್ಣ, ಶರತ್ ಬಚ್ಚೇಗೌಡ, ಕೃಷ್ಣಭೈರೇಗೌಡರು ಸೇರಿದಂತೆ ಬಮುಲ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಸಕರ ಸರ್ವಸಮ್ಮತದ ತೀರ್ಮಾನದಂತೆ ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ ಎಂದರು. ಚುನಾವಣೆಯಲ್ಲಿ ಸಹಕಾರ ಸಂಸ್ಥೆ ಜವಾಬ್ದಾರಿ ನನಗೆ ನೀಡಿದ್ದಾರೆ ಎಂದರು.

**ಆಧಾರ:** ವಿಜಯವಾಣಿ, ದಿನಾಂಕ:20.06.2025

## 27. ರಾಜ್ಯದ ಆರೋಗ್ಯ ಇಲಾಖೆಗೆ ವಿಶ್ವಸಂಸ್ಥೆಯ ಪ್ರಶಸ್ತಿ

ತಂಬಾಕು ನಿಯಂತ್ರಣಕ್ಕೆ ನೀಡಿದ ಅಸಾಧಾರಣ ಕೊಡುಗೆಗಳಿಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ತಂಬಾಕು ನಿಯಂತ್ರಣ ಕೋಶವು ವಿಶ್ವ ಸಂಸ್ಥೆಯ ಸೌತ್ ಈಸ್ಟ್ ವಲಯದ ಅತ್ಯುತ್ತಮ ತಂಬಾಕು ನಿಯಂತ್ರಣ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನವಾಗಿದೆ.

ನಗರದ ಆರೋಗ್ಯಸೌಧದಲ್ಲಿ ದಿನಾಂಕ:21.06.2025ರಂದು ನಡೆದ ವಿಶ್ವ ತಂಬಾಕು ರಹಿತ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶ್ರೀ ದಿನೇಶ್ ಗುಂಡೂರಾವ್ ಅವರು ಈ ವಿಷಯ ತಿಳಿಸಿದ್ದು ಸಂತಸ ವ್ಯಕ್ತಪಡಿಸಿದ್ದಾರೆ.

ತಂಬಾಕು ಬಳಕೆಯು ಆರೋಗ್ಯಕ್ಕೆ ಗಂಭೀರ ಪರಿಣಾಮಗಳನ್ನು ಬೀರುತ್ತದೆ. ಹೀಗಾಗಿ ತಂಬಾಕು ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಯುವಜನತೆಗೆ ಅರಿವು ಮೂಡಿಸೋಣ ಎಂದು ಸಚಿವರು ಹೇಳಿದರು. ಕರ್ನಾಟಕ ಸರ್ಕಾರವು ತಂಬಾಕು ನಿಯಂತ್ರಣಕ್ಕಾಗಿ ಹಲವಾರು ಕಠಿಣ ಕ್ರಮಗಳನ್ನು ಕೈಗೊಂಡಿದೆ. ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ ಕಾಯಿದೆ–2003ರ ಅಡಿಯಲ್ಲಿ ರಾಜ್ಯ ಮಟ್ಟದಲ್ಲಿ ಮಹತ್ವದ ತಿದ್ದುಪಡಿಗಳನ್ನು ತರಲಾಗಿದ್ದು ಸಾರ್ವಜನಿಕವಾಗಿ ತಂಬಾಕು ಬಳಸುವವರಿಗೆ 200 ರೂಪಾಯಿಯಿಂದ 1000 ರೂ.ಗೆ ದಂಡವನ್ನು ಹೆಚ್ಚಿಸಲಾಗಿದ್ದು, ತಂಬಾಕು ಉತ್ಪನ್ನಗಳನ್ನು ಖರೀದಿಸಲು ಕಾನೂನುಬದ್ಧ ವಯಸ್ಸನ್ನು 18 ರಿಂದ 21 ವರ್ಷಗಳಿಗೆ ಹೆಚ್ಚಿಸಲಾಗಿದೆ, ಹುಕ್ಕಾ ಬಾರ್‌ಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ, ಸಾರ್ವಜನಿಕ ಸ್ಥಳದಲ್ಲಿ ತಂಬಾಕು ಉತ್ಪನ್ನಗಳ ಬಳಕೆ, ಧೂಮಪಾನ ಮತ್ತು ತಂಬಾಕು ಉಗುಳುವುದನ್ನು ನಿಷೇಧಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ತಂಬಾಕು ಮುಕ್ತ ಸಮಾಜವನ್ನು ನಿರ್ಮಿಸುವಲ್ಲಿ ಸಾರ್ವಜನಿಕರು ಮತ್ತು ಸರ್ಕಾರದ ಪಾತ್ರ ನಿರ್ಣಾಯಕವಾಗಿದ್ದು, ತಂಬಾಕು ಮುಕ್ತ ಸಮಾಜವನ್ನು ಸೃಷ್ಟಿಸಲು ಮತ್ತು ನಮ್ಮ ಯುವಕರ ಆರೋಗ್ಯವನ್ನು ರಕ್ಷಿಸಲು ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣ ಎಂದರು.

ಇದೇ ಸಂದರ್ಭದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಅಧಿಕಾರಿಗಳಾದ ಡಾ.ಯುಟಾರೊ ಸೆಟೋಯಾ (ಟೀಮ್‌ಲೀಡ್ ಎನ್.ಸಿ.ಡಿ) ಅವರು ಮಾತನಾಡಿದರು. ಇದೇ ವೇಳೆ 2025ರ ವಿಶ್ವಸಂಸ್ಥೆಯ ಆಗ್ನೇಯ ಏಷ್ಯಾ ವಿಶ್ವ ತಂಬಾಕು ರಹಿತ ದಿನ ಪ್ರಶಸ್ತಿಯನ್ನು ವಿಶ್ವ ಆರೋಗ್ಯ ಸಂಸ್ಥೆಯ ಅಧಿಕಾರಿಗಳಿಂದ ಸಚಿವರಿಗೆ ಹಸ್ತಾಂತರ ಮಾಡಲಾಯಿತು, ತಂಬಾಕು ಉತ್ಪನ್ನಗಳ ಪ್ಯಾಕೇಜಿಂಗ್ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಬೇಕಾದ ಎಚ್ಚರಿಕೆ ಫಲಕಗಳನ್ನು ಬಿಡುಗಡೆ ಮಾಡುವುದರ ಜೊತೆಗೆ ಕರ್ನಾಟಕದಲ್ಲಿ ತಂಬಾಕು ನಿಯಂತ್ರಣ ಕಾರ್ಯಕ್ರಮ ಅನುಷ್ಠಾನದ ವೀಡಿಯೊವನ್ನು ಪ್ರದರ್ಶಿಸಲಾಯಿತು.

ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರಾದ ಶಿವಕುಮಾರ್ ಕೆ.ಬಿ. ಐ.ಎ.ಎಸ್, ನಿಮಾನ್ಸ್ ನಿರ್ದೇಶಕರಾದ ಡಾ.ಪ್ರತಿಮಾ ಮೂರ್ತಿ, ಆರೋಗ್ಯ ಮತ್ತು ಕುಟುಂಬ ಇಲಾಖೆಯ ರಾಷ್ಟ್ರೀಯ ಆರೋಗ್ಯ ಮಿಷನ್ ನಿರ್ದೇಶಕರಾದ ಡಾ.ಅವಿನಾಶ್ ಮೆನನ್

ರಾಜೇಂದ್ರನ್, ಐಎಎಸ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರಾದ ಡಾ.ಉಮಾ ಬುಗ್ಗಿ, ಜಂಟಿ ನಿರ್ದೇಶಕರಾದ ಡಾ.ರಜಿನಿ ಎಂ ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಗಳು ಹಾಜರಿದ್ದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ:22.06.2025

## 28. ಇ–ಹಾಜರಾತಿ ಕಡ್ಡಾಯ

ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ, ನಕಲಿ ದಾಖಲಾತಿ ತೋರಿಸಿ ಸರ್ಕಾರದ ವಿವಿಧ ಸೌಲಭ್ಯ ಪಡೆಯುತ್ತಿರುವ ಶಾಲೆಗಳ ಕಳ್ಳಾಟಕ್ಕೆ ತಡೆ ಹಾಕಲು ಮುಂದಾಗಿರುವ ಶಿಕ್ಷಣ ಇಲಾಖೆ, 'ಇ–ಹಾಜರಾತಿ' ಕಡ್ಡಾಯದತ್ತ ಹೆಜ್ಜೆ ಇಟ್ಟಿದೆ.

ಇದೇ ಶೈಕ್ಷಣಿಕ ಸಾಲಿನಿಂದಲೇ ಸರ್ಕಾರಿ ಹಾಗೂ ಸರ್ಕಾರದ ಅನುದಾನ ಪಡೆಯುವ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಕ್ಕಳಿಗೆ 'ಇ–ಹಾಜರಾತಿ' ಕಡ್ಡಾಯಗೊಳಿಸುವ ಆದೇಶವನ್ನೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅದೇಶ ಹೊರಡಿಸಿದೆ.

ಮಕ್ಕಳ ಮುಖಚರ್ಯೆ ಗುರುತಿಸುವ ಮೂಲಕ ಇ–ಹಾಜರಾತಿ ದಾಖಲಿಸುವ 'ನಿರಂತರ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದಾಗಿ ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಇಲಾಖೆ ಆಯುಕ್ತ ಕೆ.ವಿ. ತ್ರಿಲೋಕ್‌ಚಂದ್ರ ಅವರನ್ನು ಯೋಜನೆಯ ಅನುಷ್ಠಾನಾಧಿಕಾರಿಯನ್ನಾಗಿ ನೇಮಿಸಿದೆ.

ಯೋಜನೆ ಅನುಷ್ಠಾನಗೊಳಿಸಲು ಅಗತ್ಯವಾದ ಕೃತಕ ಬುದ್ಧಿಮತ್ತೆ ಆಧಾರಿತ ಮೊಬೈಲ್ ಹಾಗೂ ಇತರೆ ಪರಿಕರಗಳನ್ನು ರಾಜ್ಯದ 52,686 ಶಾಲೆಗಳಲ್ಲಿ ಅಳವಡಿಸಲು ₹5 ಕೋಟಿ ಅನುದಾನ ನೀಡಲಾಗಿದೆ. ಯೋಜನೆಯ ಅನುಷ್ಠಾನಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಆರ್ಥಿಕ ಇಲಾಖೆ ಅನುಮೋದನೆ ನೀಡಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ನಿಯಮಗಳ ಪ್ರಕಾರ ಟೆಂಡರ್ ಆಹ್ವಾನಿಸುವ ಅಧಿಕಾರವನ್ನು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಿಗೆ ನೀಡಲಾಗಿದೆ.

ಸರ್ಕಾರಿ ಶಾಲೆ ಮಕ್ಕಳಿಗೆ ಸರ್ಕಾರ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಶೂ, ಮಧ್ಯಾಹ್ನದ ಬಿಸಿಯೂಟ, ಕ್ಷೀರ ಭಾಗ್ಯ ಯೋಜನೆ ಅಡಿ ಹಾಲು ವಿತರಣೆ, ವಾರಕ್ಕೆ ಆರು ದಿನಗಳು ಮೊಟ್ಟೆ, ಬಾಳೆಹಣ್ಣು ನೀಡುತ್ತಿದೆ. ಅದಕ್ಕಾಗಿ ಪ್ರತಿ ವರ್ಷ ₹4 ಸಾವಿರ ಕೋಟಿಗೂ ಅಧಿಕ ಮೊತ್ತ ವೆಚ್ಚ ಮಾಡಲಾಗುತ್ತಿದೆ. ಕೆಲ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇದ್ದರೂ, ಹೆಚ್ಚು ತೋರಿಸಿಕೊಂಡು ಯೋಜನೆ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂಬ ಆರೋಪಗಳು ಎದುರಾಗಿದ್ದವು.

ಮಕ್ಕಳ ಸಂಖ್ಯೆ ನಿಯಮಕ್ಕಿಂತ ಕಡಿಮೆ ಇರುವ ಶಾಲೆಯ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಿ, ಬೇರೆ ಶಾಲೆಗೆ ವರ್ಗಾವಣೆ ಮಾಡಲಾಗುತ್ತಿದೆ. ಇಂಥ ಸಮಯದಲ್ಲಿ ಸ್ಥಳ ನಿಯೋಜನೆಯಿಂದ ತಪ್ಪಿಸಿಕೊಳ್ಳಲು ಶಿಕ್ಷಕರು ಕೃತಕ ಹಾಜರಾತಿ ಸೃಷ್ಟಿಸುತ್ತಿರುವ ಆರೋಪವೂ ಇತ್ತು. ಖಾಸಗಿ ಶಾಲೆಗಳು ಫಲಿತಾಂಶದ ಪ್ರತಿಷ್ಠೆಗೆ ಬಿದ್ದು, ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ, ಅಲ್ಲೇ ಪರೀಕ್ಷೆ ಬರೆಯಿಸುತ್ತಿರುವ ಪ್ರಕರಣಗಳು ದಾಖಲಾಗಿದ್ದವು. ಕೆಲ ಅನುದಾನಿತ ಶಾಲೆಗಳಲ್ಲಿ ಮಕ್ಕಳು ದಾಖಲಾಗದಿದ್ದರೂ, ಹಾಜರಾತಿ ತೋರಿಸಿ, ಅನುದಾನ, ಶಿಕ್ಷಕರ ವೇತನ ಪಡೆಯುತ್ತಿದ್ದವು. ಇಂತಹ ಎಲ್ಲ ವಾಮಮಾರ್ಗಕ್ಕೂ ಇ–ಹಾಜರಾತಿ ಕಡಿವಾಣ ಹಾಕಲಿದೆ.

**ಆಧಾರ:** ಪ್ರಜಾವಾಣಿ, ದಿನಾಂಕ:23.06.2025

## 29. ಸಿಬಿಎಸ್‌ಇ 10ನೇ ತರಗತಿಯ ಪರೀಕ್ಷೆಗೆ ಕರ್ನಾಟಕ ಮಾದರಿ

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳು ಅಂಕ ಉತ್ತಮಪಡಿಸಿಕೊಳ್ಳಲು ಕರ್ನಾಟಕದಲ್ಲಿ ಈಗಾಗಲೇ 3 ಪರೀಕ್ಷೆಗಳು ಉಂಟು. ಈಗ ಇದೇ ಮಾದರಿಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ(2026) 10ನೇ ತರಗತಿಯ ವಿದ್ಯಾರ್ಥಿಗಳಿಗೆ ವರ್ಷದಲ್ಲಿ 2 ಬಾರಿ ಅಂತಿಮ ಪರೀಕ್ಷೆ ನಡೆಸಲು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ(ಸಿಬಿಎಸ್‌ಇ) ನಿರ್ಧರಿಸಿದೆ. ಅನುತ್ತೀರ್ಣರಾದವರು ತೇರ್ಗಡೆಯಾಗಲು ಹಾಗೂ ಕಮ್ಮಿ ಫಲಿತಾಂಶ ಪಡೆದವರು ಅಂಕ ಉತ್ತಮಪಡಿಸಿಕೊಳ್ಳಲು ಇವು ಸಹಕಾರಿಯಾಗಲಿವೆ. ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕ ಸಂಯಮ್ ಭಾರದ್ವಾಜ್ ಮಾತನಾಡಿ, ಇದರಡಿ ಮೊದಲ ಪರೀಕ್ಷೆ ಬರೆಯುವುದು ಕಡ್ಡಾಯವಾಗಿದ್ದು, 2ನೇ ಪರೀಕ್ಷೆ ಐಚ್ಛಿಕವಾಗಿದೆ.

ಮೊದಲ ಹಂತದ ಪರೀಕ್ಷೆಯನ್ನು ಫೆಬ್ರವರಿಯಲ್ಲಿ ನಡೆಸಲಾಗುತ್ತದೆ. ಏಪ್ರಿಲ್‌ನಲ್ಲಿ ಫಲಿತಾಂಶ ಪ್ರಕಟಿಸಲಾಗುತ್ತದೆ. 2ನೇ ಹಂತದ ಪರೀಕ್ಷೆ ಮೇ ತಿಂಗಳಲ್ಲಿ ಇರುತ್ತದೆ. ಫಲಿತಾಂಶ ಜೂನ್‌ನಲ್ಲಿ ಘೋಷಿಸಲಾಗುವುದು. ವಿದ್ಯಾರ್ಥಿಗಳು 2ನೇ ಹಂತದಲ್ಲಿ ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಮತ್ತು ಭಾಷೆ ವಿಷಯಗಳ ಪರೀಕ್ಷೆ ಬರೆದು ತಮ್ಮ ಅಂಕ ಉತ್ತಮಗೊಳಿಸಿಕೊಳ್ಳಬಹುದು ಎಂದು ಹೇಳಿದರು. ಆದರೆ, ಇಡೀ ಶೈಕ್ಷಣಿಕ ಅವಧಿಯಲ್ಲಿ ಒಮ್ಮೆ ಮಾತ್ರ ಮೌಲ್ಯಮಾಪನ ನಡೆಸಲಾಗುತ್ತದೆ.

ಶೀತ ಪ್ರದೇಶಗಳಲ್ಲಿರುವ ಶಾಲೆಗಳ ಮಕ್ಕಳು ಹಾಗೂ ಕ್ರೀಡಾ ಕೆಟಗರಿಯಲ್ಲಿರುವ ಮಕ್ಕಳು ಯಾವ ಹಂತದ ಪರೀಕ್ಷೆಯನ್ನಾದರೂ ಬರೆಯಬಹುದಾಗಿದೆ. ಆದರೆ, ಒಂದು ವೇಳೆ ಮೊದಲ ಹಂತದಲ್ಲಿ 3 ಅಥವಾ 3ಕ್ಕಿಂತ ಹೆಚ್ಚು ಪರೀಕ್ಷೆಗೆ ಗೈರಾದರೆ ಅವರಿಗೆ 2ನೇ ಹಂತದ ಪರೀಕ್ಷೆಗೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ)ಅಡಿ ಸೂಚಿಸಲಾಗಿರುವಂತೆ, 2 ಪರೀಕ್ಷೆಗಳನ್ನು ನಡೆಸುವ ಸಂಬಂಧ ಸಿಬಿಎಸ್‌ಇ ನಿಯಮಾವಳಿಗಳನ್ನು ಸಿದ್ಧಪಡಿಸಿ ಅನುಮೋದಿಸಿದೆ. ಈ ಪರೀಕ್ಷಾ ವ್ಯವಸ್ಥೆಯ ಮಾನದಂಡಗಳ ಕರಡನ್ನು ಸಿಬಿಎಸ್‌ಇ ಫೆಬ್ರವರಿಯಲ್ಲಿ ಘೋಷಿಸಿದ್ದು, ಸಂಬಂಧಿಸಿದವರ ಪ್ರತಿಕ್ರಿಯೆಗಾಗಿ ಸಾರ್ವಜನಿಕ ವಲಯದಲ್ಲಿ ಅಭಿಪ್ರಾಯ ಸಂಗ್ರಹಿಸಲಾಗಿತ್ತು.

**ಆಧಾರ:** ಕನ್ನಡ ಪ್ರಭ, ದಿನಾಂಕ:26.06.2025

## 30. ಆಡಳಿತದಲ್ಲಿ ಕನ್ನಡವೇ ಅಂತಿಮ

ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಲು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತೊಮ್ಮೆ ಸ್ಪಷ್ಟ ಆದೇಶ ಹೊರಡಿಸಿದ್ದಾರೆ. ಈ ಸೂಚನೆಯನ್ನು ಪಾಲಿಸದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ವೈಯಕ್ತಿಕವಾಗಿ ಶಿಸ್ತು ಕ್ರಮ ನಿಶ್ಚಿತ ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ.

ಈ ಸಂಬಂಧ ಎಲ್ಲ ಇಲಾಖಾ ಮುಖ್ಯಸ್ಥರು, ಡಿಸಿ, ಸಿಇಒಗಳಿಗೆ ಸುತ್ತೋಲೆ ರವಾನಿಸಲಾಗಿದ್ದು, "ಕೇಂದ್ರ ಸರಕಾರ, ಹೊರ ರಾಜ್ಯ ಮತ್ತು ನ್ಯಾಯಾಲಯಗಳ ಪತ್ರ ವ್ಯವಹಾರ ಹೊರತುಪಡಿಸಿ ಉಳಿದೆಲ್ಲವೂ ಕಡ್ಡಾಯವಾಗಿ ಕನ್ನಡ ಭಾಷೆಯಲ್ಲೇ ಆಗಬೇಕು. ರಾಜ್ಯ ಭಾಷಾ ಅಧಿನಿಯಮ 1963ರಂತೆ ಆಡಳಿತದಲ್ಲಿ ಕನ್ನಡ ಬಳಕೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಆಗಬೇಕು," ಎಂದು ಸೂಚಿಸಿದ್ದಾರೆ.

"ಸರಕಾರಿ ಕಚೇರಿಗಳ ನಾಮಫಲಕ ಕನ್ನಡದಲ್ಲೇ ಇರಬೇಕು. ವಿಧಾನಮಂಡಲ ಕಾರ್ಯಕಲಾಪಗಳು, ಪತ್ರ ವ್ಯವಹಾರ, ಗಮನ ಸೆಳೆಯುವ ಸೂಚನೆಗಳನ್ನು ಕಡ್ಡಾಯವಾಗಿ ಕನ್ನಡದಲ್ಲೇ

ಸಲ್ಲಿಸಬೇಕು. ನೇಮಕಾತಿ, ವರ್ಗಾವಣೆ, ರಜೆ ಮಂಜೂರು ಸೇರಿ ಎಲ್ಲ ಸರಕಾರಿ ಆದೇಶಗಳನ್ನು ಕನ್ನಡದಲ್ಲೇ ಹೊರಡಿಸಬೇಕು. ಸಭಾ ಸೂಚನೆ, ಕಾರ್ಯಸೂಚಿ, ಸಂಕ್ಷಿಪ್ತ ಟಿಪ್ಪಣಿ ಮತ್ತು ನಡಾವಳಿಗಳನ್ನು ಕನ್ನಡದಲ್ಲಿ ತಯಾರಿಸಬೇಕು. ಕಚೇರಿಗಳಲ್ಲಿ ಆಂತರಿಕ ಪತ್ರ ವ್ಯವಹಾರ ಕಡತದ ಟಿಪ್ಪಣಿ ಕನ್ನಡದಲ್ಲೇ ಇರಬೇಕು," ಎಂದು ನಿರ್ದೇಶನ ನೀಡಿದ್ದಾರೆ.

**ಆಧಾರ:** ವಿಜಯವಾಣಿ, ದಿನಾಂಕ:26.06.2025

## 31. ಹಿರಿಯ ಕಲಾವಿದರ ಮಾಸಾಶನ ₹2500ಕ್ಕೆ ಹೆಚ್ಚಿಸಿದ ರಾಜ್ಯ ಸರ್ಕಾರ

ರಾಜ್ಯ ಸರ್ಕಾರ ಕಲಾವಿದರ ಬಹು ವರ್ಷಗಳ ಬೇಡಿಕೆ ಈಡೇರಿಸಿದ್ದು ಹಿರಿಯ ಕಲಾವಿದರ ಮಾಸಾಶನವನ್ನು 2500 ರೂ.ಗಳಿಗೆ ಹೆಚ್ಚಿಸಿ ಅನುದಾನ ಬಿಡುಗಡೆ ಮಾಡಿದೆ.

2025–26ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿನ ಕಲಾವಿದರ ಮಾಸಾಶನವನ್ನು 2 ಸಾವಿರ ರೂ.ಗಳಿಂದ 2500 ರೂ.ಗಳಿಗೆ ಹೆಚ್ಚಿಸಿ, ಮಾಸಾಶನಕ್ಕೆ ಬೇಕಾಗುವ ಒಟ್ಟು ಮೊತ್ತ 32.94 ಕೋಟಿ ರೂ.ಅನ್ನು ಮಂಜೂರು ಮಾಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಿಗೆ ಆದೇಶಿಸಿದೆ. ಇದರಿಂದಾಗಿ 60 ವರ್ಷ ಮೇಲ್ಪಟ್ಟ 12000ಕ್ಕೂ ಹೆಚ್ಚು ಮಂದಿ ಹಿರಿಯ ಕಲಾವಿದರ ಇದರ ಲಾಭ ಪಡೆಯಲಿದ್ದಾರೆ.

ಕಲಾವಿದರು ಹಲವು ವರ್ಷಗಳಿಂದ ಮಾಸಾಶನ ಹೆಚ್ಚಿಸುವಂತೆ ಮನವಿ ಮಾಡುತ್ತಲೇ ಬಂದಿದ್ದರು. ಕಳೆದ ವರ್ಷ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮಾಸಾಶನ ಹೆಚ್ಚಿಸುವ ಭರವಸೆ ನೀಡಿದ್ದರು. ಅಂತೆಯೇ ಈ ಬಾರಿಯ ಬಜೆಟ್‌ನಲ್ಲಿ ಮಾಸಾಶನ ಹೆಚ್ಚಿಸುವುದಾಗಿ ಹೇಳಿದ್ದರು. ಇದೀಗ ನುಡಿದಂತೆ ನಡೆದಿದ್ದು, ಜೂನ್ 25ರಿಂದಲೇ ಪರಿಷ್ಕೃತ ಮಾಸಾಶನ ಜಾರಿಗೆ ಬರಲಿದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:26.06.2025

## 32. ಕೆಂಪೇಗೌಡರು ದೂರದೃಷ್ಟಿ ಆಡಳಿತಗಾರ: ಸಿಎಂ

ನಾಡಪ್ರಭು ಕೆಂಪೇಗೌಡರು ದಕ್ಷ ಹಾಗೂ ದೂರದೃಷ್ಟಿಯಿದ್ದಂತಹ ಆಡಳಿತಗಾರ, ಅವರ ಆಡಳಿತ ನಮ್ಮೆಲ್ಲರಿಗೂ ಮಾದರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಕೆಂಪೇಗೌಡ 516ನೇ ಜಯಂತಿಯ ಅಂಗವಾಗಿ ವಿಧಾನಸೌಧದ ಪೂರ್ವ ದಿಕ್ಕಿನಲ್ಲಿರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

2013–18 ಅವಧಿಯಲ್ಲಿ ನಮ್ಮ ಸರ್ಕಾರ ಡಾ.ನಿರ್ಮಲಾನಂದ ಸ್ವಾಮೀಜಿ ಅವರೊಂದಿಗೆ ಚರ್ಚಿಸಿ ಕೆಂಪೇಗೌಡರ ಜನ್ಮದಿನಾಂಕವನ್ನು ತಿಳಿದು, ಪ್ರತೀ ವರ್ಷ ಅವರ ಜಯಂತಿ ಆಚರಣೆಗೆ ಕ್ರಮ ವಹಿಸಿತ್ತು. ಅದರಂತೆ ಸರ್ಕಾರದಿಂದಲೇ ಪ್ರತೀ ವರ್ಷ ಜಯಂತಿ ಆರಂಭಿಸುವ ಮೂಲಕ ಕೆಂಪೇಗೌಡರನ್ನು ಸ್ಮರಿಸುವ ಕೆಲಸ ಮಾಡುತ್ತಿದೆ. ಈ ಬಾರಿ ಕೆಂಪೇಗೌಡರ 516ನೇ ಜಯಂತಿಯನ್ನು ಸರ್ಕಾರ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಬಿಬಿಎಂಪಿ ಸಹಯೋಗದಲ್ಲಿ ಆಚರಿಸಲಾಗುತ್ತಿದೆ. ಸುಮನಹಳ್ಳಿಯ ಜಗಜೀವನ್ ರಾಮ್ ನಗರದಲ್ಲಿ ಕೆಂಪೇಗೌಡ ಜಯಂತಿ ಆಚರಿಸಲಾಗುತ್ತಿದೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಮಾನ ನಿಲ್ದಾಣದ ಬಳಿ ಇರುವ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದ್ದಾರೆ ಎಂದು ತಿಳಿಸಿದರು. ಬೆಂಗಳೂರಿನ

ನಾಲ್ಕು ಭಾಗದಲ್ಲಿ ಗೋಪುರಗಳನ್ನು ಕಟ್ಟಿಸಿದ ಕೆಂಪೇಗೌಡರು ಅಂದೇ ಬೆಂಗಳೂರಿನ ಆಡಳಿತ ಹೇಗಿರಬೇಕೆಂದು ಅರಿತು ವೃತ್ತಿ ಆಧಾರಿತವಾಗಿ ಅನೇಕ ಪೇಟೆಗಳನ್ನು ತಮ್ಮ ಆಡಳಿತಾವಧಿಯಲ್ಲಿ ನಿರ್ಮಿಸಿದ್ದರು. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿದ್ದರೆ ಅದಕ್ಕೆ ಅಡಿಪಾಯ ಹಾಕಿದ್ದು ಕೆಂಪೇಗೌಡರು. ಅವರ ಆಡಳಿತ ನಮಗೆಲ್ಲರಿಗೂ ಮಾದರಿ ಎಂದು ಹೇಳಿದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:28.06.2025

## 33. ಕೆಎಂಎಫ್ ನಂದಿನಿ ದೇಶದ ನಂ.4 ಬ್ರ್ಯಾಂಡ್

ಬೆಂಗಳೂರು ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ(ಕೆಎಂಎಫ್) ಬ್ರ್ಯಾಂಡ್ 'ನಂದಿನಿ' ಆಹಾರ ಮತ್ತು ಪಾನೀಯ ಉತ್ಪನ್ನಗಳ ಮೌಲ್ಯದಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಶ್ರೇಯಾಂಕದಲ್ಲಿ ಜಿಗಿತ ಕಂಡಿದ್ದು, 38ನೇ ಸ್ಥಾನಕ್ಕೆ ಏರಿಕೆಯಾಗಿದೆ. ದೇಶದ ಪ್ರಮುಖ ಬ್ರ್ಯಾಂಡ್‌ಗಳ ಪೈಪೋಟಿಯ ನಡುವೆಯೂ 'ನಂದಿನಿ' ನಾಲ್ಕನೆಯ ಸ್ಥಾನ ಕಾಯ್ದುಕೊಂಡಿದೆ.

ವಿಶ್ವದ ಪ್ರಮುಖ ಬ್ರ್ಯಾಂಡ್ ಮೌಲ್ಯ ಮಾಪನ ಸಂಸ್ಥೆಯಾದ ಬ್ರ್ಯಾಂಡ್ ಫೈನಾನ್ಸ್ ತನ್ನ 2025ರ ವರದಿ ಬಿಡುಗಡೆ ಮಾಡಿದ್ದು, 2024ರಲ್ಲಿ 43ನೇ ಸ್ಥಾನದಲ್ಲಿದ್ದ ನಂದಿನಿ ಈ ಬಾರಿ ನೂರು ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ 38ನೇ ಸ್ಥಾನಕ್ಕೆ ಏರಿದೆ.

ಭಾರತೀಯ ಬ್ರ್ಯಾಂಡ್‌ಗಳ ಅಗ್ರ ನೂರರಲ್ಲಿ ನಂದಿನಿ ಬ್ರ್ಯಾಂಡ್ ಮೌಲ್ಯವು 1,079 ಮಿಲಿಯನ್‌ಗೆ (107.9 ಕೋಟಿ ರೂ.) ಏರಿಕೆಯಾಗಿದೆ. ಇದು ಹಿಂದಿನ ವರ್ಷಕ್ಕಿಂತ 139 ಮಿಲಿಯನ್ (13.90 ಕೋಟಿ ರೂ.) ಗಿಂತ ಹೆಚ್ಚು. ಇನ್ನು ಆಹಾರ ಮತ್ತು ಪಾನೀಯಗಳ ವಿಭಾಗದಲ್ಲಿ ನಂದಿನಿ ದೇಶದಲ್ಲೇ ನಾಲ್ಕನೇ ಸ್ಥಾನವನ್ನು ಉಳಿಸಿಕೊಂಡಿದೆ. ಮೊದಲ ಮೂರು ಸ್ಥಾನದಲ್ಲಿ ಅಮುಲ್, ಮದರ್ ಡೇರಿ ಮತ್ತು ಬ್ರಿಟಾನಿಯಾ ಇದ್ದರೆ, ಐದನೇ ಸ್ಥಾನದಲ್ಲಿ ಡಾಬರ್ ಇದೆ. ನಂದಿನಿ ಬ್ರ್ಯಾಂಡ್ ನಿರಂತರ ಕಾರ್ಯಕ್ಷಮತೆ ಮತ್ತು ಮೌಲ್ಯ ವೃದ್ಧಿಯಿಂದ ಬೆಳೆದಿದ್ದು, ದೇಶದಲ್ಲೇ ಖ್ಯಾತಿಯನ್ನು ಗಳಿಸಿದೆ.

ಬ್ರ್ಯಾಂಡ್ ಫೈನಾನ್ಸ್ ಬ್ರ್ಯಾಂಡ್‌ಗಳ ಆರ್ಥಿಕ ಸದೃಢತೆ, ಜಾಗತಿಕ ಮಟ್ಟದಲ್ಲಿ ಬ್ರ್ಯಾಂಡ್‌ಗಳ ಮೌಲ್ಯಮಾಪನ ಅಳೆಯುವ ಸಂಸ್ಥೆಯಾಗಿದೆ. ಇದರ ಕೇಂದ್ರ ಕಚೇರಿ ಲಂಡನ್‌ನಲ್ಲಿದ್ದು ಈ ಸಂಸ್ಥೆ 25ಕ್ಕೂ ಹೆಚ್ಚು ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆ ವಾರ್ಷಿಕ 6000ಕ್ಕೂ ಹೆಚ್ಚು ಬ್ರ್ಯಾಂಡ್‌ಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸುತ್ತದೆ. ವಿವಿಧ ಬ್ರ್ಯಾಂಡ್‌ಗಳ ಆರ್ಥಿಕ ಮೌಲ್ಯವನ್ನು ಅಳೆಯುವುದರಿಂದ ಕಂಪನಿಗಳು ಕಾರ್ಯತಂತ್ರದ ನಿರ್ಧಾರ ತೆಗೆದುಕೊಳ್ಳಲು ನೆರವಾಗುತ್ತದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:30.06.2025

# ಭಾಗ–6

# ನ್ಯಾಯಾಲಯ ಸುದ್ದಿಗಳು

### 1. ಏಕರೂಪ ನಾಗರಿಕ ಸಂಹಿತೆ ಅಗತ್ಯತೆ ಇದೆ: ಹೈಕೋರ್ಟ್

ಸಂವಿಧಾನದ ಮೂಲತತ್ವಗಳು, ಉದ್ದೇಶಗಳನ್ನು ಸಾಕಾರಗೊಳಿಸಲು ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆಯ(ಯುಸಿಸಿ) ಅಗತ್ಯತೆ ಇದೆ. ಇದನ್ನು ಅಳವಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಯತ್ನ ಮಾಡಬಹುದು ಎಂದು ಕರ್ನಾಟಕ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಮುಸ್ಲಿಂ ಕುಟುಂಬದ ಆಸ್ತಿ ಹಂಚಿಕೆ ಕುರಿತು ಬೆಂಗಳೂರಿನ ಸಮೀವುಲ್ಲಾ ಖಾನ್ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹಂಚಾಟೆ ಸಂಜೀವ್‌ಕುಮಾರ್ ಅವರಿದ್ದ ಏಕ ಸದಸ್ಯ ಪೀಠ, ಪ್ರಜಾಪ್ರಭುತ್ವ, ಏಕತೆ, ಸಮಗ್ರತೆ ಮತ್ತು ಸರ್ವರಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳನ್ನು ಕಾರ್ಯಗತಗೊಳಿಸಲು ಸಂವಿಧಾನದ ಕಲಂ 44ರ ಆಶಯದಂತೆ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸಬೇಕಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಿದ್ದಾರೆ. ಆಸ್ತಿಯಲ್ಲಿ ಪಾಲು ಪಡೆಯಲು ಸಹೋದರನಂತೆ ಸಹೋದರಿಗೂ ಸಮಾನ ಹಕ್ಕು ಇದೆ. ಆದರೆ, ಪ್ರಕರಣದಲ್ಲಿ ಸಹೋದರ ಮತ್ತು ಸಹೋದರಿ ನಡುವೆ ತಾರತಮ್ಯವಾಗುವ ಪರಿಸ್ಥಿತಿ ಎದುರಾಗಿದೆ. ಆದರೆ, ಇಂತಹ ಪರಿಸ್ಥಿತಿ ಹಿಂದೂ ಕಾನೂನಿನಲ್ಲಿ ಇಲ್ಲ. ಸಹೋದರ ಮತ್ತು ಸಹೋದರಿಯರು ಸಮಾನ ಹಕ್ಕುಗಳನ್ನು ಹೊಂದಿರುತ್ತಾರೆ. ಏಕರೂಪ ನಾಗರಿಕ ಸಂಹಿತೆ ಅಗತ್ಯತೆಗೆ ಈ ಪ್ರಕರಣ ಉದಾಹರಣೆ ಎಂದು ಆದೇಶದಲ್ಲಿ ನ್ಯಾಯಮೂರ್ತಿಯವರು ಹೇಳಿದ್ದಾರೆ.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಕೂಡ ಏಕರೂಪ ನಾಗರಿಕ ಸಂಹಿತೆ ಪರವಾಗಿದ್ದರು. ಸುಪ್ರೀಂ ಸೇರಿ ವಿವಿಧ ಕೋರ್ಟ್‌ಗಳು ಅಭಿಪ್ರಾಯವನ್ನು ವ್ಯಕ್ತಪಡಿಸಿವೆ ಎಂದಿದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:06.04.2025

### 2. SC judgment on T.N. Governor addresses a Constitutional silence

The Supreme Court's deadlines for Governors to decide the fate of Bills sent to them for assent is a bid to plug a “Constitutional silence”. The text of the Constitution does not specify any time limits for Governors. This had led Governors in multiple non-BJP ruled States to sit on Bills.

The situation had prevailed despite a November 2023 Supreme Court order in State of Punjab versus Principal Secretary to the Governor of Punjab that "real power vests with the elected representatives of the people in a parliamentary form of democracy,

The Governor, as an appointee of the President, is a titular head of the State. The governments of West Bengal, Tamil Nadu, Punjab and Kerala had Governors of behaving like continued to accuse their “political rivals”.

On April 8, a Bench of Justices J.B. Pardiwala and R. Mahadevan declared that failure by Governors to comply with its maximum time limit of three months, if they want to with hold assent or reserve Bills for the consideration of the President, would invite judicial action.

With this, the April 8 judgment has gone a step further from earlier decisions of the court which had only cajoled Governors to act within a “reasonable time”. A week before this judgment in the Tamil Nadu Governor case, the Supreme Court had made stern remarks against another Constitutional silence which has facilitated Speakers to delay decisions in disqualification proceedings under the antidefection law.

The remarks came from a Bench headed by Justice B.R. Gaval on April 3, while reserving judgment on appeals challenging the months long delay shown by the Telangana Speaker to decide disqualification petitions filed under the antidefection law(Tenth Schedule of the Constitution) against 10 BRS MLAs who had shifted to the ruling Congress in the State.

Justice Gavai said the court would fix “specific time periods” for Speakers, or disqualification petitions may end up in the "dustbins" and the Tenth Schedule would be reduced to a mockery.

The Bench had referred to a 2020 judgment of the Supreme Court in the Keshab Meghachandra Singh case in which it had said disqualification petions under the Tenth Schedule ought to be decided by Speakers within three months. This has largely been, followed by Speakers in breach so far.

**Courtesty:**The Hindu, dated:11.04.2025

## 3. Make rules to act against officials who do not enforce law stopping transfer of SC/ST land: HC

The State government should adopt and implement proper mechanisms to take to task erring officials who fail to take immediate action under the provisions of the Karnataka Scheduled Castes and Scheduled Tribes (Prohibition of Transfer of Certain Lands) Act, 1978, by making suitable provisions in this Act and the rules, said the High Court of Karnataka.

A Division Bench comprising Justice V. Kameswar Rao and Justice T.M. Nadaf made this suggestion while pointing out that the court has been observing certain shortcomings in initiating action when land granted to SCs/STs is alienated in violation of the provisions of this law. The Bench upheld a single judge's 2022 verdict of setting aside the 2009 decision of the Special DC, Bengaluru, who had ordered for restoration of land, granted in 1981-82 to a SC person, which was alienated and sold in 1998. The Bench found that though there was no prior permission found that though there under the PTCL Act, 1978, when the sale deed was executed in 1996, the sale was legal as the deed was registered only in 1998 after permission was granted.

Meanwhile, the Bench said that though the State government had enacted the PTCL Act back in 1978 with all rigour of provisions, however, the officials enjoined

with the powers of the Act are very slow to respond, despite suo-moto powers given to take immediate actions.

"The lack of willingness on the part of the authorities to initiate proceedings at the earliest, with the lands granted being the Government land and waiting for the grantees or the descendants to approach the authorities to point out alienation of land in violation of conditions, shows the apathy with which the provisions are dealt with," the Bench observed.

A Beneficial Act, enacted with an object of providing a helping hand to the socially and economically depressed class, fails if the provisions of the PTCL Act are not properly implemented in line with the object with which it is enacted, the Bench said.

It pointed out that the PTCL Act was enacted after it was found that non-alie nation clauses on granted lands in the then laws were found insufficient to help the suppressed class whose ignorance and poverty has been exploited by the persons belonging to affluent and powerful sections.

**Courtesy:**The Hindu, dated:11.04.2025

## 4. Absence of ticket can't deny compensation in train accidents, says High Court

Not finding the journey ticket on the body is not a ground to say that the death was not because of a railway accident, the Karnataka High Court has observed in a recent judgment.

Justice Hanchate Sanjeevkumar made this observation while ordering a total compensation of Rs 8 lakh, inclusive of Rs. 4 lakh statutory compensation and interest to the family members of Aminasab Mulla.

The claimants are the family members of Mulla, who died in an accident on April 6, 2015. It was submitted that Mulla had bought ticket at the Vijayapura Railway Station to travel to Limbala. He accidentally fell from the moving train, sustained grievous injuries, and died on the spot.

On April 13, 2017, the claim petition was dismissed by the Railways Claims Tribunal, Bengaluru, on the grounds that no intimation was given to the Railway Police Station about the death and that no journey ticket was found to substantiate that he was a passenger. The claimants then filed an appeal challenging this order.

Justice Sanjeevkumar noted that, as per the records, the loco pilot of the train had sent a message on April 6, 2015, through walkie talkie, reporting that a male body was lying on the track between Bijapur and Minchinahal. An FIR was also registered in this regard.

The court further cited the post-mortem report, which stated that the cause of death was haemorrhagic shockasa result of multiple injuries to vital organs and auto amputation. The inquest report recorded the opinion of the panchas as "Deceased fell down from a moving train, got his hands and legs cut, suffered grievous injuries to his head, and accidentally got run over and died on the spot."

“When the death occurred and immediately the body was shifted to the hospital to conduct the postmortem, during the said time the ticket might have been lost. Therefore, the tribunal is not correct in dismissing the claim petition on the reason the railway ticket was not found on the dead body. Quite naturally, the claimants have not accompanied the deceased. Therefore, they could not produce the journey ticket. Further, it is proved that a dead body was found in the railway accident as discussed above. Therefore, the claimants are entitled to compensation,” the court said.

**Courtesty:**Deccan Herald, dated:19.05.2025

## 5. Digitally integrate details of all properties, PAN, Aadhaar of a person with death certificate: High Court

The High Court of Karnataka has said that whenever any application is filed before the Registrar of Births and Deaths (RoBD) for death certificates of any person, the details of all the properties which are in the name of such person should be automatically fetched from the database of the sub-registrar's office and the Revenue Department, should be made available to the RoBD.

Even the records in hospitals regarding the births and deaths should also be integrated with the RoBD, the court said. The court also said that the identity details, like PAN, Aadhaar, electoral ID, and other identity cards that may be available, should also be made available and integrated with the database of the RoBD,

Justice Suraj Govindaraj passed the order while dealing with a case of one Mahadevaiah of Tumakuru, who had obtained the death certificate of his mother several years after her demise by giving a false date of death ten years prior to her actual death, even though she had died in 1985.

The court directed the Principal Secretaries of the departments of E-governance, Revenue, Urban Development, and Municipal Administration to come out with the plan within six weeks to integrate these details. The court also found that Mahadevaiah had obtained an order from the Lok Adalat for the issuance of the death

certificate in the absence of revenue authorities by presenting a false "joint memo" before the adalat, giving the impression that the revenue authorities had accepted his claim on the mother's death certificate.

On securing the death certificate, which stated that his mother had died in 1975, he had questioned the sale deed executed by her in 1979 in favour of one Siddalingaiah. The falsification of the year of death came to light during the litigation between Siddalingaiah and Mahadevaiah.

**Courtesty:**The Hindu, dated:19.05.2025

### 6. Don't withhold RTE funds over| NEP row: Madras HC to Centre

The Madras High Court on dated:12.06.2025 directed the Union Ministry of Education to consider splitting the disbursal of funds to the Tamil Nadu government under its flagship Samagra Shiksha scheme, so that money needed to reimburse private schools under the Right of Children to Free and Compulsory Education (RTE) Act can be disbursed.

The RTE component amounts to about Rs.200 crore, while the total amount pending to Tamil Nadu under the SSS amounts to Rs.2,151.59 crore, amidst a row over the State's refusal to implement the National Education Policy, 2020.

The court also told the State government that non-receipt of funds from the Centre cannot be used as a "reason to wriggle out" of its own obligation to pay the private schools.

A Division Bench of Justices G.R. Swaminathan and V. Lakshminarayanan noted that the Centre had some issues in releasing SSS funds as the State government has not adopted the NEP. However, it has an independent obligation under the RTE Act of 2009, which has nothing to do with non-adoption of NEP, the judges said. "Section 7 of the RTE Act states that the Central government and the State governments have concurrent responsibility for providing funds for carrying out the provisions of the Act..." the Division Bench observed.

**Courtesty:** The hindu, Dated:11.06.2025

# ಭಾಗ–7

# ಹೊರ ರಾಜ್ಯಗಳ ಸುದ್ದಿಗಳು

## 1. Stalin request CMs to oppose Presidential Reference

Tamil Nadu Chief Minister M.K.Stalin has written to the Chief Ministers of seven States and a Union Territory, all ruled by non BJP parties, urging the to oppose the presidential Reference to the Supreme Court on the time frame for Governors and the president to act on Bills referred to them under Article 200 of the Constitution.

He underlined the need for a coordinated legal strategy before the court and presenting a united front to preserve and protect the Basic Structure of the Constitution. Mr. Stalin wrote to the Chief Ministers of Himachal Pradesh, Jharkhand, Karnataka, Kerala, Punjab, Telengana, West Bengal, and the Union Territtory of Jammu and Kashmir.

Pointing out that the President of India, under the advice of the Centre, has invoked the advisory jurisdiction of the Supreme Court under Article 143 of the Constitution on May 13 and raised 14 questions before the top court, Mr. Stalin contended: "Though the reference does not specifically refer to any State or judgment, its intent is to question the findings on law and interpretation of the Constitution given by the Supreme Court in the case of State of *Tamil Nadu v Governor of Tamil Nadu."*

"We must evolve a coordinated legal strategy before the Court and present a united front to preserve and protect the basic structure of the Constitution, as upheld by our Hon'ble Supreme Court in its historic judgment. I look forward to your immediate and personal intervention in this vital issue," Mr. Stalin said.

**'Against the judgment'** The Tamil Nadu Chief Minister said the BJP-led Union government is attempting to unsettle the judgment which can be invoked as a precedent by other States when faced with an obstinate Governor. "As the first limb of their ploy, the BJP government has advised the President to seek a reference before the Supreme Court. It is well known that the advisory jurisdiction of the Supreme Court cannot be invoked or exercised when the issue in question has already been decided by an authoritative pronouncement of the Court. Yet, the BJP government has pressed ahead with seeking a reference, which points to their sinister intent," Mr. Stalin said.

He said the "historic judgment obtained by his government was for all States since it upheld the federal structure and distribution of powers between the States and the Centre, thus effectively preventing the obstruction of legislation enacted by democratically State legislatures by an appointee of the Centre .

All of us have been witness to the way in which the BJP led Union government have used Governors to obstruct and impede functioning of opposition ruled States. They inordinately delay assent to Bills, withhold assent without valid constitutional or legal reasons, sit over routine files and government orders sent for signature, interfere in appointments to important posts and have abused their position as Chancellor of Universities to politicise educational institutions," Mr. Stalin said.

The CM further contended: "They have been able to do so by taking advantage of the fact that the Constitution is silent on certain issues, because the framers of the Constitution trusted that those holding high constitutional office would act in accordance with constitutional morality."

The historic judgment of the Supreme Court in *State of Tamil Nadu v. Governor of Tamil Nadu* would ensure that the Union Government did not unduly interfered with the State Governments performing our roles and responsibilities within the spheres given to us under the Constitution, Mr. Stalin said in his letter. As the guardian of our Constitution whose basic structure provides for a democratic republic with federal structure, the Supreme Court has rightly interpreted the Constitution, the letter said.

Recalling his request to all State Governments and leaders of regional parties, who were opposed to the BJP and committed to preserving our federal structure and state autonomy, to unite in the upcoming legal battle, Mr. Stalin further said: "I am now writing to you to personally request your goodself to oppose this reference sought by the President before the Supreme Court"

**Courtesty:** The hindu, Dated:19.05.2025

## 2. Arunachal declares 2025-35 as ‘decade of hydropower’

The Cabinet headed by Arunachal Pradesh Chief Minister Pema Khandu has declared 2025-2035 as the 'Decade of Hydropower to harness the State's potential to generate 58,000 megawatts (MW) of electricity.

The special Cabinet meeting held on dated:13.06.2025 termed the thrust on hydropower as a "strategic management of revenues generated through free power from the hydroelectric projects (HEPS).

During the Decade of Hydropower, the government aims to undertake strategic policy and governance measures not just to harness the hydropower potential through a judicious mix of mega, large, and small hydroelectric projects, but also to create a stable and supportive policy and regulatory frame work for the overall development of the industrial ecosystem in the State," a statement issued by the Chief Minister's Office said.

According to the agreement with power developers, Arunachal Pradesh will receive 12% free power from each HEP, and an additional 1% for a local area development fund.

Arunachal Pradesh expects ₹4,525 crore in annual revenue 2035 onwards from projects in various stages of completion. These projects, riding cumulative investments of more than Rs.2 lakh crore in the next 10 years, have a combined capacity of generating 19 gigawatts (GW) of electricity.

The State Cabinet approved the creation of an escrow account for "strategic management and effective utilisation of the revenue generated from the proceeds of free power from these HEPS.

."By effective management of these benefits, the State can make strategie and financial decisions about investing in the over all development of the State. This initiative will not only streamline financial processes but also ensure that the benefits of free power are maximised for the State's longterm sustainable growth and prosperity," the CMO said in the statement.

The Cabinet underscored the need to allay fears and build consensus among the people likely to be affected by the controversial Slang Upper Multipurpose Project (SUMP) that anti-dam activists said is targeted to generate 11,000 MW of electricity.

The Centre declared the SUMP as a national project in 2008, given its signifiance from the national security point of view. The project is being pursued as a counter to China's proposed 60,000 MW project on the Yarlung Tsangpo River in Tibet upstream.

The Cabinet sought regular and detailed interactions with the likely project affected families (PAFs) regarding the urgent need to conduct the pre-feasibility survey for the SUMP. Villagers three districts Siang, Fast Slang and Upper Siang have been resisting this survey. The Cabinet emphasised the need for continuous engagement with the PAFs to ensure fair, just, and equitable compensation and solatium, in case the SUMP is found to be feasible.

The Cabinet directed the State's Department of Urban Development to constitute a New Yingkiong Development Authority and a New Geku Development Authority to pursue "future ready alternate towns".

It accordingly approved the constitution of a committee to examine land and property compensation rates and suggest the mechanisms to be adopted for designing and implementing a robust rehabilitation and resettlement plan for the PAFs. Geku and Ying-kiong are towns in the Upper Siang district.

The Cabinet further directed the Public Works Department to initiate a survey for a necklace road along the Slang River, above the likely submergence area.

**Courtesty:** The Hindu, Dated:15.6.2025

## 3. ಶಾಲೆಗಳಲ್ಲಿ ದಿನಪತ್ರಿಕೆ ಓದು ಕಡ್ಡಾಯ

ಹಿಮಾಚಲ ಪ್ರದೇಶದ ಶಿಕ್ಷಣ ಇಲಾಖೆಯು ರಾಜ್ಯದ ಎಲ್ಲಾ ಸರಕಾರಿ ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನಾ ಸಭೆಯ ಸಮಯದಲ್ಲಿ ದಿನಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಿದೆ. ಸಿಎಂ ಸುಖ್ವಿಂದರ್ ಸಿಂಗ್ ಸುಖು ಅವರ ನಿರ್ದೇಶನದ ಮೇರೆಗೆ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಈ ಸಂಬಂಧ ಎಲ್ಲಾ ಶಾಲೆಗಳಲ್ಲಿ ಇಂಗ್ಲಿಷ್ ಮತ್ತು ಹಿಂದಿ ಪತ್ರಿಕೆಗಳ ನಿಯಮಿತ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು

ಶಾಲಾ ಮುಖ್ಯಸ್ಥರಿಗೆ ಸೂಚಿಸಲಾಗಿದೆ. ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ತಮ್ಮ ವಯಸ್ಸಿಗೆ ಸೂಕ್ತವಾದ ಸುದ್ದಿಗಳನ್ನು ಆಯ್ಕೆ ಮಾಡಬೇಕು ಎಂದು ತಿಳಿಸಲಾಗಿದೆ.

ಇತ್ತೀಚೆಗೆ ಕುಲು ಜಿಲ್ಲೆಯ ಬಾಗಾ ಸರಾಹನ್‌ನಲ್ಲಿರುವ ಸರಕಾರಿ ಹಿರಿಯ ಮಾಧ್ಯಮಿಕ ಶಾಲೆಗೆ ಸಿಎಂ ಅವರು ಅನಿರೀಕ್ಷಿತ ಭೇಟಿ ನೀಡಿದ್ದರು. ಈ ವೇಳೆ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಭಾರತದ ರಾಷ್ಟ್ರಪತಿ ಹೆಸರು ಅಥವಾ ದೇಶದ ರಾಜಧಾನಿಯಂತಹ ಸಾಮಾನ್ಯ ಜ್ಞಾನದ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗದೇ ಇರುವುದನ್ನು ಗಮನಿಸಿ ಅಸಮಾಧಾನಗೊಂಡಿದ್ದರು.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಜ್ಞಾನ ಹೆಚ್ಚಿಸಲು ದಿನ ಪತ್ರಿಕೆ ಓದಿಸುವ ಅಭ್ಯಾಸ ಮಾಡಿಸಲು ಕ್ರಮ ಕೈಗೊಳ್ಳಲಾಗಿದೆ.

**ಆಧಾರ:** ವಿಜಯ ಕರ್ನಾಟಕ, ದಿನಾಂಕ:26.6.2025

## 4. Maharashtra scraps three-language policy

The Thackeray cousins announced that a massive protest planned for July 5 would now be turned into a victory rally.

However, Mr. Uddhav Thackeray also said that the BJP was trying to draw a wedge between Marathis and non-Marathis in the State, while Mr. Raj Thackeray expressed reservations about the Narendra Jadhav led committee. "We are assuming that the three language policy for primary education has been scrapped. If the government tries to create any mess due to the committee report, we will not let this committee function in Maharashtra," he said in a post on Facebook

Experts who had campaigned against the government orders also reacted with scepticism about the government's intentions. "While we are very happy and the credit goes to the unity of Marathi people who stood behind us, it is likely that the government is still trying to push this decision. What was the need of a committee? They should have just announced the scrapping of the decision," said Laxmikant Deshmukh, who heads the Maharashtra government's own language consultation committee. "To me, it seems like the government is trying to push through the RSS agenda of 'Hindi, Hindu, Hindustan'. We need to be cautious," he told The Hindu.

Marathi Abhyas Kendra President Deepak Pawar, a prominent voice against the policy, also raised concerns about Dr. Jadhav's expertise. "Let the Government Issue a GR [government resolution) first, to the effect of the scrapping of the first two GRs. Let us see how clear and unambiguous the wording of the new order is. Only then can we rejoice. Till then, our agitation wills continue." he said.

**Courtesty:The Hindu,** Dated:30.06.2025

# ಭಾಗ–8

# ಅಂತರರಾಷ್ಟ್ರೀಯ ಸುದ್ದಿಗಳು

## 1. ಭಾರತ ನಿಯೋಗದ ಜಪಾನ್, ಯುಎಇ ಭೇಟಿ ಯಶಸ್ವಿ

ಉಗ್ರ ಪೋಷಕ ಪಾಕಿಸ್ತಾನದ ನೈಜ ಮುಖವಾಡ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಯಲು ಮಾಡಲು ಕೇಂದ್ರ ಸರ್ಕಾರ ಕಳುಹಿಸಿಕೊಟ್ಟಿರುವ ಸರ್ವಪಕ್ಷಗಳ ಸಂಸದರ 2 ನಿಯೋಗಗಳು ದಿನಾಂಕ:22.05.2025ರಂದು ಜಪಾನ್, ಯುಇಎಗೆ ಭೇಟಿ ನೀಡಿವೆ ಹಾಗೂ ಪಾಕಿಸ್ತಾನದ ಕೃತ್ಯಗಳ ವಿವರ ನೀಡಿವೆ. ಇದಕ್ಕೆ ಎರಡೂ ದೇಶಗಳು ಪೂರಕವಾಗಿ ಸ್ಪಂದಿಸಿ ಉಗ್ರರ ವಿರುದ್ಧದ ಹೋರಾಟಕ್ಕೆ ಬೆಂಬಲ ಘೋಷಿಸಿವೆ.

ಯುಎಇ ಸಹಿಷ್ಣುತೆಯ ಸಚಿವ ಶೇಖ್ ನಹ್ಯಾನ್ ಬಿನ್ ಮುಬಾರಕ್ ಅಲ್ ನಹ್ಯಾನ್ ಅವರ ಜತೆಗೆ ಶಿವಸೇನೆ ಸಂಸದ ಶಶಿಕಾಂತ್ ಶಿಂದೆ ನೇತೃತ್ವದ ನಿಯೋಗದ ಸಭೆ ಫಲಪ್ರದವಾಗಿದೆ. ಭಯೋತ್ಪಾದನೆ ವಿರುದ್ಧ ಹೋರಾಟದಲ್ಲಿ ಭಾರತದ ಜತೆಗೆ ನಿಲ್ಲುವುದಾಗಿ ಯುಎಇ ತಿಳಿಸಿತು. ಇದೇ ವೇಳೆ ನಿಯೋಗವು ವಿದೇಶಾಂಗ ವ್ಯವಹಾರಗಳ ಸಮಿತಿ ಮುಖ್ಯಸ್ಥ ಡಾ.ಅಲಿ ಅಲ್‌ನುಪ್ಪಿಮಿ ಅವರ ಜತೆಗೂ ಸಭೆ ನಡೆಸಿತು.

ಇನ್ನು ಜೆಡಿಯು ಸಂಸದ ಸಂಜಯ್ ಝಾ ನೇತೃತ್ವದ ನಿಯೋಗ ಜಪಾನ್ ವಿದೇಶಾಂಗ ಸಚಿವ ಹೆಚ್.ಇ. ತಕೇಶಿ ಇವಾಯ ಅವರ ಜತೆ ಕೆಲಕಾಲ ಮಾತುಕತೆ ನಡೆಸಿತು. ತಕೇಶಿ ಅವರು, ಭಯೋತ್ಪಾದನೆ ವಿರುದ್ಧದ ಭಾರತದ ಹೋರಾಟಕ್ಕೆ ಬೆಂಬಲ ನೀಡುವುದಾಗಿ ತಿಳಿಸಿದರು.

ಇನ್ನು ಡಿಎಂಕೆ ಸಂಸದೆ ಕನಿಮೋಳಿ ನೇತೃತ್ವದ 3ನೇ ನಿಯೋಗವು ರಷ್ಯಾಗೆ ಹೋಗಿದೆ. ತಂಡದಲ್ಲಿ ದಕ್ಷಿಣ ಕನ್ನಡ ಸಂಸದ ಚೌಟ ಇದ್ದಾರೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:23.05.2025

## 2. Colombia retracted message offering condolences to Pak. for loss of lives, says Tharoor

Colombia has withdrawn a statement offering condolences to Pakistan for the loss of lives following India's military strikes in response to the Pahalgam attack after an Indian parliamentary delegation explained Islamabad's relentless support for crossborder terrorism.

Congress MP Shashi Tharoor, leading an all party delegation to the South American country, confirmed Bogota's withdrawal of the controversial statement after meeting Vice Foreign Minister Rosa Yolanda Villavicencio.

In the last two days, the nine-member delegation held a series of meetings with Colombia's senior political brass, apprising India's policy of "zero tolerance for terrorism" and its retaliatory strikes against terror infrastructure on Pakistani soil following the April 22, 2025 Pahalgam attack.

"Began today with an excellent meeting with the Vice-Minister of Foreign Affairs of Colombia, Rosa Yolanda Villavicencio, and her senior colleagues dealing with the Asia-Pacific," Mr. Tharoor said in a social media post.

"I expressed India's view of recent events and voiced disappointment at Colombia's statement on May 8, conveying ‘heartfelt condolences' to Pakistan," he said.

"The Minister assured me that the statement had been withdrawn and that our position was now properly understood and strongly supported," the Congress MP added. However, there was no official word from New Delhi on Colombia's position following India's Operation Sindoor and its withdrawal of the statement.

In Bogota, the Indian delegation also met Alejandro Toro, the president of the Second Commission of the Chamber of Representatives and Jaime Raul Salamanca, president of the Chamber of Representatives. "Both dignitaries voiced strong support for India's right to defend itself, its territory and its sovereignty," Mr. Tharoor said on X.

**Courtesy**:The Hindu, Dated:01.06.2025

## 3. 7 NCP MLAs join NDPP, Rio gets absolute majority

All seven NCP MLAs in Nagaland joined the ruling NDPP on dated:31.05.2025 giving the Chief Minister Neiphiu Rioled party an absolute majority in the 60 member Assembly. With this merger, the Nationalist Democratic Progressive Party's (NDPP) tally increased from 25 to 32. According to an order issued by Speaker Sharingain Longkumer, the seven MLAs submitted formal letters, stating their decision to merge with the NDPP. The Speaker noted that the merger met the constitutional requirement under the Tenth Schedule.

State Minister K.G. Kenye said that the NDPP's increased strength will further reinforce the leadership of Chief Minister Rio and help the government serve the people effectively. Asked how this merger could impact seat sharing arrangements, he stressed that "no permanent formula exists".

**Courtesy**:The Hindu, Dated:01.06.2025

## 4. India’s population hits 146.39 crore:UNFPA

Replacement level TFR is the rate needed for each generation to replace the previous generation’s population. The UN report says that millions of people are not able to realize their real fertility goals. Calling this the “real” crisis, and not overpopulation or underpopulation, the report calls for the pursuit of reproductive agency a person’s ability to make free and informed choices about sex, contraception and starting a family in a changing world. India’s youth population remains significant, with about 24% of the population in the age bracket of 0-14, 17% in the age bracket 10-19, and 26% in the age group of 10-24. Further, the report estimates that 68% of the population in India is of working age (15-64 years).

The elderly population (65 and older) currently stands at 7% a figure that is expected to rise in the coming decades as life expectancy improve, it ads, confirming the projections the government in India has been working with. The UN report says that as of 2025, life expectancy at birth is projected to be 71 years for men and 4 years for women.

**Courtesy**:The Hindu, Dated:11.06.2025

# ಭಾಗ–9

# ಪ್ರಮುಖ ಲೇಖನಗಳು

## 1. ವಿಧಾನಸಭೆಯೆಂಬ ಅನುಭವ ಮಂಟಪದಲ್ಲಿ ಸಂಬಂಧಗಳ ಪಾತ್ರ

ಇತ್ತೀಚಿನ ವರ್ಷಗಳಲ್ಲಿ ನಮ್ಮ ರಾಜ್ಯದ ವಿಧಾನ ಮಂಡಲದ ಕಲಾಪಗಳಲ್ಲಿ ಆಡಳಿತ ಪಕ್ಷ ಹಾಗೂ ಪ್ರತಿಪಕ್ಷಗಳ ನಡುವೆ ದೊಡ್ಡ ಕಂದಕ ನಿರ್ಮಾಣವಾಗಿರುವುದು ಎಲ್ಲರ ಗಮನಕ್ಕೆ ಬಂದಿದೆ. ಶಾಸಕರು ಚುನಾಯಿತರಾದ ಮೇಲೆ ಅವರು ಜನಪ್ರತಿನಿಧಿಗಳು ಎಂಬರ್ಥದಲ್ಲಿ ಸರ್ಕಾರಗಳು ನೋಡುವುದುನ್ನು ಬಿಟ್ಟು "ಇವನಾರನವ ಇವನಾರನವ.. ಇವ ನಮ್ಮವನಲ್ಲ.. ಇವ ನಮ್ಮವನಲ್ಲ.." ಎಂದು ಹೇಳುತ್ತಾ ಒಟ್ಟಾರೆ ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳ ನಡುವೆ ಸಾಮಾನ್ಯ ಕನಿಷ್ಠ ಆರೋಗ್ಯಕರ ಸಂಬಂಧವೂ ಇಲ್ಲದಿರುವುದನ್ನು ನಾವು ಕಂಡಿದ್ದೇವೆ. ಕೆಲವರು ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳ ನಡುವೆ ಕಂದಕ ಇರುವುದು ನಿಜವಾದರೂ, ಉಭಯ ಕಡೆಯ ಸದಸ್ಯರುಗಳ ನಡುವೆ ಬೇರೆಬೇರೆ ರೀತಿ ಸಂಬಂಧ ಚೆನ್ನಾಗಿದೆ ಎಂದು ಹೇಳುವುದನ್ನೂ ಕೇಳಿದ್ದೇನೆ. ಅದನ್ನು ಬೇರೆ ಸಮಯದಲ್ಲಿ ಚರ್ಚೆ ಮಾಡೋಣ. ಈ ಹಿನ್ನೆಲೆಯಲ್ಲಿ ವಿಧಾನಸಭಾ ಸದಸ್ಯನಾಗಿ ಮೂರು ದಶಕಗಳ ಆಗಿರುವ ಅನುಭವದ ಹಿನ್ನೆಲೆಯಲ್ಲಿ ಮೂರು ಆರೋಗ್ಯಕರ ಘಟನೆಗಳನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ.

**ಘಟನೆ 1:** 1994ರಲ್ಲಿ ವಿಧಾನಸಭೆ ಚುನಾವಣೆಗಳು ನಡೆದ ನಂತರ 1995ರಲ್ಲಿ ನಾನು ಪ್ರತಿನಿಧಿಸುವ ರಾಜಾಜಿನಗರ ಕ್ಷೇತ್ರದಲ್ಲಿ ಒಂದಿಷ್ಟು ಅಭಿವೃದ್ಧಿ ಕಾಮಗಾರಿಗಳ ಚಾಲನೆಗಾಗಿ ಕಾರ್ಯಕ್ರಮ ಯೋಜಿಸಲಾಗಿತ್ತು. ಅದಕ್ಕೆ ಅಂದಿನ ಮುಖ್ಯಮಂತ್ರಿಗಳಾದ ದೇವೇಗೌಡರು ಬರುವುದಾಗಿ ತಿಳಿಸಿದ್ದರು. ರಾಜಾಜಿನಗರದ ರಾಮಮಂದಿರ ಮೈದಾನದಲ್ಲಿ ನಡೆಯಲಿದ್ದ ಕಾರ್ಯಕ್ರಮದ ಸಿದ್ಧತೆ ಭರದಿಂದ ಸಾಗಿದಾಗ ನನ್ನ ಕಿವಿಗೆ ಮುಖ್ಯಮಂತ್ರಿ ದೇವೇಗೌಡರು ಕಾರ್ಯಕ್ರಮಕ್ಕೆ ಬರುವುದಿಲ್ಲ ಎಂಬ ವಿಷಯ ತಿಳಿದು ತುಂಬಾ ಬೇಸರವಾಗಿತ್ತು, ಆದರೂ ಯಾರಿಗೂ ನನ್ನ ಬೇಸರ ತೋರಿಸಿಕೊಳ್ಳದೆ ಸಿದ್ಧತೆಯಲ್ಲಿ ತೊಡಗಿಸಿಕೊಂಡಿದ್ದೆ. ರಾತ್ರಿಯ 11.30ರ ಸಮಯಕ್ಕೆ ನಾನು ಮನೆ ತಲುಪದೆ (ಆಗಿನ್ನೂ ಮೊಬೈಲ್ ಫೋನ್ ಬಳಕೆಗೆ ಬಂದಿರಲಿಲ್ಲ). ನನಗಾಗಿ ಕಾಯುತ್ತಿದ್ದ ನನ್ನಮ್ಮ, " ನನಗೆ ಮುಖ್ಯಮಂತ್ರಿಗಳು ಫೋನ್ ಮಾಡಿದ್ದರು. ನೀನು ಅವರಿಗೆ ಫೋನ್ ಮಾಡಬೇಕಂತೆ, ನಿನ್ನ ಕರೆಗಾಗಿ ಅವರು ಕಾಯುತ್ತಿದ್ದಾರೆ," ಎಂದರು. ನಾನು ಕಾರ್ಯಕ್ರಮಕ್ಕೆ ತಮ್ಮ ಅನುಪಸ್ಥಿತಿಯನ್ನು ತಿಳಿಸುತ್ತಾರೆಂದು ಭಾವಿಸಿ ಫೋನ್ ಮಾಡಲು ನಿರಾಕರಿಸಿದೆ. ಆದರೆ ನನ್ನಮ್ಮ ಬಿಡಲಿಲ್ಲ. "ದೊಡ್ಡವರು ಫೋನ್ ಮಾಡಿದಾಗ ಅವರ ಕರೆಗೆ ಸ್ಪಂದಿಸುವುದು ನಿನ್ನ ಕರ್ತವ್ಯ," ಎಂದು ಕಿವಿಮಾತು ಹೇಳಿ ಮುಖ್ಯಮಂತ್ರಿಗಳ ಮನೆಗೆ ಫೋನ್ ಮಾಡಿಸಿದರು. ಆಗ ಸಮಯ ರಾತ್ರಿ 11.45/12.00ಗಂಟೆ, ಎರಡನೇ ರಿಂಗಿಗೆ ಮುಖ್ಯಮಂತ್ರಿಗಳು(ದೇವೇಗೌಡರು) ಫೋನ್‌ನ್ನು ಎತ್ತಿಕೊಂಡರು. ಅವರೇ ಮಾತನಾಡಲು ಪ್ರಾರಂಭಿಸಿದರು. "ಸುರೇಶ್‌ಕುಮಾರ್, ನಿಮ್ಮ ಕ್ಷೇತ್ರದಲ್ಲಿ ನಾಳೆ ಕಾರ್ಯಕ್ರಮ ನಡೆಯುತ್ತಿದೆ. ನಾನು ನಿಮ್ಮ ಕಾರ್ಯಕ್ರಮಕ್ಕೆ ಬರಬಾರದು ಎಂಬ ಬಲವಾದ ಒತ್ತಡವಿದೆ. ಗೊತ್ತಲ್ಲ ರಾಜಕೀಯ, ಡೋಂಟ್‌ವರಿ, ನಾನು ನಿಮ್ಮ ಕಾರ್ಯಕ್ರಮಕ್ಕೆ ಬರುತ್ತೇನೆ, ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲಿ, ಪೊಲೀಸ್ ಇಲಾಖೆಗೆ ಸೂಕ್ತ ಬಂದೋಬಸ್ತ್ ಮಾಡಲು ಸೂಚಿಸಿದ್ದೇನೆ," ಎಂದು ಮುಖ್ಯಮಂತ್ರಿ ದೇವೇಗೌಡರು ಆ ಮಧ್ಯರಾತ್ರಿ ಹೇಳಿದಾಗ ನನಗೆ ಆಶ್ಚರ್ಯ, ಸಂತಸ, ಸಮಾಧಾನ, ಧೈರ್ಯ ಎಲ್ಲವೂ ಉಂಟಾಯಿತು. ಮಾರನೇಯ ದಿನ ನನಗೆ ಮಾತುಕೊಟ್ಟಂತೆ ದೇವೇಗೌಡರು ಬಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟು ನನ್ನ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿದ್ದು ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿಯೇ ಇದೆ.

2000ನೇ ಇಸವಿ ಇರಬಹುದು ಎಸ್.ಎಂಕೃಷ್ಣ ಮುಖ್ಯಮಂತ್ರಿಗಳು, ವಿಧಾನ ಸಭೆಯಲ್ಲಿ ಮೈಸೂರಿನ ಶಾಸಕರಾಗಿದ್ದ ರಾಮದಾಸ್ ಅವರು ಪ್ರಸ್ತಾಪ ಮಾಡಿದ್ದ ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟ

ವಿಷಯದಲ್ಲಿ ನಾನು ಪಾಲ್ಗೊಂಡು ಒಂದಷ್ಟು ವಿಚಾರಗಳನ್ನು ತಿಳಿಸಿದ್ದೆ. ಮಾರನೆಯ ದಿನ ಬೆಳಗ್ಗೆ 7.30 ಗಂಟೆಗೆ ನನ್ನ ಮನೆಗೆ ಫೋನ್ ಕರೆಯೊಂದು ಬಂತು, ನಾನೇ ತೆಗೆದುಕೊಂಡು ಹಲೋ ಹೇಳಿದೆ. ಅತ್ತ ಕಡೆಯಿಂದ. "ಸುರೇಶ್‌ಕುಮಾರ್, ನಾನು ಎಸ್.ಎಂ.ಕೃಷ್ಣ ಮಾತಾಡ್ತಾ ಇರೋದು," ಎಂದಾಗ ನನಗೆ ದಿಗ್ಭ್ರಮೆ ಉಂಟಾಯಿತು. ಅವರೇ ಮುಂದುವರಿದು, ನಿನ್ನೆ ವಿಧಾನಸಭೆಯಲ್ಲಿ ನೀವು ಮಾತಾಡಿದ ಕೆಲವು ವಿಚಾರಗಳ ಬಗ್ಗೆ ಒಂದು ಸ್ಪಷ್ಟೀಕರಣ ಕೊಡಬಯಸಿದ್ದೇನೆ." ಎಂದು ಹೇಳಿ ಒಂದಿಷ್ಟು ವಿಷಯಗಳನ್ನು ವಿವರಿಸಿ ತಮ್ಮ ಮೇರು ವ್ಯಕ್ತಿತ್ವವನ್ನು ತೋರಿಸಿಕೊಟ್ಟರು.

ಸುಮಾರು 2002ನೇ ಇಸವಿ ಇರಬಹುದು. ಕರ್ನಾಟಕ ಸರ್ಕಾರದಿಂದ ಬೆಂಗಳೂರು ಜಲಮಂಡಳಿಯನ್ನು ವಿದೇಶಿ ಸಂಸ್ಥೆ ಬೈ ವಾರ್ಟ್ ಎಂಬ ಕಂಪನಿಗೆ ಹಸ್ತಾಂತರ ಮಾಡಿ ಖಾಸಗೀಕರಣ ಮಾಡುವ ಪ್ರಯತ್ನವೊಂದು ನಡೆದಿತ್ತು. ನಾನು ವಿಧಾನಸಭೆಯಲ್ಲಿ ಈ ವಿಚಾರವನ್ನು ಒಂದಷ್ಟು ಆಕ್ರೋಶದಿಂದಲೇ ಪ್ರಸ್ತಾಪಿಸಿ ಬಹಳ ಸುದೀರ್ಘ ಮಾತಾಡಿದ್ದೆ. ಅಂದು ನನಗೆ ಕತ್ತಿನಲ್ಲಿ ಬಹಳ ನೋವು ಇತ್ತು. ಬಲಗೈ ಎತ್ತಲು ಆಗುತ್ತಿರಲಿಲ್ಲ, ಆದರೂ ಸುಮಾರು ಒಂದೂಕಾಲು ಗಂಟೆ ಕಾಲ ಅನೇಕ ವಿಷಯಗಳನ್ನು ದಾಖಲೆಗಳ ಸಮೇತ ಮಂಡಿಸಿ ಬೆಂಗಳೂರು ಜಲಮಂಡಳಿಯ ಖಾಸಗೀಕರಣವನ್ನು ಬಲವಾಗಿ ವಿರೋಧಿಸಿದ್ದೆ. ಅದಕ್ಕೆ ಉತ್ತರಿಸುತ್ತ ಆಗಿನ ಕಾನೂನು ಮತ್ತು ಸಂಸದೀಯ ಸಚಿವರಾಗಿದ್ದ ಡಿ.ಬಿ.ಚಂದ್ರೇಗೌಡರು ನನ್ನನ್ನು ಸಮಾಧಾನಪಡಿಸಲು, ನನ್ನ ಆಕ್ರೋಶ ಶಮನಗೊಳಿಸಲು ಬಹಳಷ್ಟು ಪ್ರಯತ್ನ ಮಾಡಿದರು. ಆದರೆ ನಾನು ಸಮಾಧಾನಗೊಳ್ಳಲಿಲ್ಲ. ಅವರ ಪ್ರತಿ ಉತ್ತರಕ್ಕೆ ನಾನು ಅನೇಕ ಉಪಪ್ರಶ್ನೆಗಳನ್ನು ಕೇಳಿದ್ದೆ. ಡಿ.ಬಿ.ಚಂದ್ರೇಗೌಡರು ಬಹಳ ಅನುಭವಿ ರಾಜಕಾರಣಿ ಮತ್ತು ಸಂಸದೀಯ ಮೌಲ್ಯಗಳಲ್ಲಿ ನಂಬಿಕೆಯಿಟ್ಟಂತಹ ಸಚಿವರಾಗಿದ್ದರು. ನನ್ನ ಆಕ್ರೋಶ ಕಳವಳಿ ಎರಡನ್ನೂ ಗಮನಿಸಿ ಸಭಾಧ್ಯಕ್ಷರಿಗೆ, "ನಾಳೆ ಮುಖ್ಯಮಂತ್ರಿಗಳು ಸದನಕ್ಕೆ ಬರುತ್ತಾರೆ, ಅವರೇ ಉತ್ತರ ನೀಡುತ್ತಾರೆ. ಅಲ್ಲಿಯವರೆಗೂ ಈ ವಿಷಯವನ್ನು ಮುಂದೂಡಿ," ಎಂದು ಮನವಿ ಮಾಡಿಕೊಂಡಿದ್ದರು. ಅದರಂತೆಯೇ ಮಾರನೆಯ ದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಸದನದಲ್ಲಿ ನಾನು ಎತ್ತಿದ್ದ ಅನೇಕ ವಿಷಯಗಳ ಬಗ್ಗೆ ಸ್ಪಷ್ಟೀಕರಣ ಕೊಡಲು ಪ್ರಯತ್ನಿಸಿದರು.

ನಾನು ಇನ್ನಷ್ಟು ದಾಖಲೆಗಳನ್ನು ಸಭೆಯ ಮುಂದೆ ಇಟ್ಟು ಈ ಖಾಸಗೀಕರಣದಿಂದ ಯಾವ ಯಾವ ದೇಶದಲ್ಲಿ ಜನರಿಗೆ ಯಾವ ಯಾವ ರೀತಿ ಸಂಕಷ್ಟ ಬಂದಿದೆ ಎಂದು ವಿವರಿಸಿದಾಗ ಮುಖ್ಯಮಂತ್ರಿ ನನ್ನ ವಾದವನ್ನು ಒಪ್ಪಿ ಬೆಂಗಳೂರು ಜಲಮಂಡಳಿಯ ಖಾಸಗೀಕರಣದ ಪ್ರಸ್ತಾವನೆಯನ್ನು ಕೈ ಬಿಡುವುದಾಗಿ ಸದನದಲ್ಲಿ ಹೇಳಿಕೆ ನೀಡಿ ತಮ್ಮ ಹೃದಯ ವೈಶಾಲತೆ ಮೆರೆದರು. ಇದೇ ರೀತಿಯ ಅನುಭವ ದಿವಂಗತ ಜೆ.ಎಚ್.ಪಾಟೇಲರು ಮುಖ್ಯಮಂತ್ರಿಗಳಾಗಿದ್ದಾಗ ನನಗೆ ಅನೇಕ ಬಾರಿ ಆಗಿದೆ. ವಿಶೇಷವಾಗಿ ಸಿಇಟಿ ಕುರಿತು ನಾನು ಪ್ರಸ್ತಾಪಿಸಿದಾಗ ಅವರು ಪೂರಕವಾಗಿ ಸ್ಪಂದಿಸಿದ ರೀತಿ ನನ್ನ ನೆನಪಿನಲ್ಲಿ ಹಸಿರಾಗಿಯೇ ಇದೆ. ಒಮ್ಮೆಯಂತೂ ತುಂಬಿದ ಸದನದಲ್ಲಿ ಜೆ.ಹೆಚ್.ಪಟೇಲರು ನನ್ನನ್ನು ' ಮಾಡೆಲ್ ಲೆಜಿಸ್ಲೇಟರ್' ಎಂದು ಪ್ರಶಂಸಿಸಿದ್ದು ನನಗೆ ಜೀವನದಲ್ಲಿ ಸಿಕ್ಕ ಒಂದು ದೊಡ್ಡ ಪ್ರಮಾಣಪತ್ರ. ಒಮ್ಮೆ ವಿಧಾನಸಭೆಗೆ ಸದಸ್ಯರು ತಮ್ಮ ಪಕ್ಷದಿಂದ ಆಯ್ಕೆಯಾದ ಸದಸ್ಯರು, ಅವರು ಆಡಳಿತ ಪಕ್ಷದವರಿರಲಿ ಅಥವಾ ಪ್ರತಿಪಕ್ಷದವರೇ ಇರಲಿ, ಎಲ್ಲರೂ ಶಾಸಕಾಂಗದ ಸದಸ್ಯರೇ ಆಗಿರುತ್ತಾರೆ. ಜನಪ್ರತಿನಿಧಿಗಳಾಗಿದ್ದು ಜನರ ಆಶೋತ್ತರಕ್ಕೆ ತಕ್ಕಂತೆ ಕಾರ್ಯನಿರ್ವಹಿಸುತ್ತ, ಅವಶ್ಯವಿದ್ದಲ್ಲಿ ಆಡಳಿತ ಪಕ್ಷದ ಓರೆಕೋರೆಗಳನ್ನು ವಿಮರ್ಶೆಗೆ ಒಡ್ಡಿ ತಿದ್ದಬೇಕಿರುವುದು ಪ್ರತಿಪಕ್ಷದವರ ಕರ್ತವ್ಯವಾದರೆ, ಪ್ರತಿಪಕ್ಷದ ಸದಸ್ಯರು ಎತ್ತಿದಂತಹ ಗಂಭೀರ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಹುಡಕಬೇಕಾಗಿದ್ದು ಆಡಳಿತ ಪಕ್ಷದ

ಕರ್ತವ್ಯವಾಗಿದೆ. ಆದರೆ ಎಲ್ಲರಿಗೂ ತಮ್ಮತಮ್ಮ ಪ್ರತಿಷ್ಠೆಯೇ ಮೇಲಾಗಿ ಜನರ ಮೂಲ ಸಮಸ್ಯೆಗಳ ಕುರಿತು ಚರ್ಚಿಸದೆ, ಪರಿಹಾರ ಹುಡುಕದೆ ಒಬ್ಬರಿಗೊಬ್ಬರು ಕಾಲೆಳೆದುಕೊಂಡು ಆಡಳಿತ ನಡೆಸುತ್ತಿರುವುದು ಇತ್ತೀಚಿನ ವರ್ಷಗಳಲ್ಲಿ ಕಂಡು ಬರುತ್ತಿದೆ. ಇದೇ ದಿಕ್ಕಿನಲ್ಲಿ ಸಾಗಿದರೆ ನಿಜಕ್ಕೂ ಆದರ್ಶಪ್ರಾಯವಾಗಿರಬೇಕಾದ ನಾವು ಜನರಿಗೆ ನೀಡುವ ಕೊಡುಗೆಗಳಾದರು ಏನು? ನಮ್ಮ ಮುಂದಿನ ಪೀಳಿಗೆಯೂ ಇತಿಹಾಸದಲ್ಲಿ ನಮ್ಮನ್ನು ಏನೆಂದು ನೆನಪಿಸಿಕೊಳ್ಳುತ್ತಾರೆ? ಇದು ಗಂಭೀರವಾಗಿ ಆಲೋಚಿಸಬೇಕಾದಂತಹ ವಿಷಯವಾಗಿದೆ.

**ಲೇಖಕರು:** ಹಾಲಿ ಶಾಸಕರು ಮತ್ತು ಮಾಜಿ ಸಚಿವರು
**ಆಧಾರ:** ವಿಜಯ ಕರ್ನಾಟಕ, ದಿನಾಂಕ:27.04.2025

## 2. ಒತ್ತಡವೇ ಆಧುನಿಕ ಮಾನವನ ಪರಮಶತ್ರು

ಪೂರ್ವಜನ್ಮ ಸ್ಮರಣೆ(ರಿಗ್ರೆಷನ್) ನಂತರದಲ್ಲಿ ದೀರ್ಘಕಾಲ ಬಾಧಿಸಿದ ಜೀವನ ಸಮಸ್ಯೆಗಳು ಹಾಗೂ ಖಾಯಿಲೆಗಳು ಇಷ್ಟು ಶೀಘ್ರದಲ್ಲಿ ಸುಧಾರಣೆಯಾಗುವ ಕಾರ್ಯವಿಧಾನ ಏನು? ಎಂಬ ಪ್ರಶ್ನೆಗೆ ಎರಡು ವಿವರಣೆಗಳಿವೆ. ಮೊದಲನೆಯದಾಗಿ, ದಮನಿತ ಅಥವಾ ಮರೆತುಹೋದ ಆಘಾತಕಾರಿ, ಆಗಾಗ್ಗೆ ಗೋವಿನ ನೆನಪುಗಳ ಮರುಸ್ಥಾಪನೆಂದು ಸಾಮಾನ್ಯವಾಗಿ ಚಿಕಿತ್ಸೆಯೊಂದಿಗೆ ಸಂಬಂಧಿಸಿವೆ. ಈ ಮತ್ತು ಘಟನೆಗಳನ್ನು ಅವುಗಳ ಸಂಬಂಧಿತ ಭಾವನೆಗಳೊಂದಿಗೆ ನೆನಪಿಕೊಳ್ಳುವುದು ಮನೋವಿಶ್ಲೇಷಣೆ ಮತ್ತು ಇತರ ಸಾಂಪ್ರದಾಯಿಕ ಮಾನಸಿಕ ಚಿಕಿತ್ಸೆಗಳ ಮೂಲಾಧಾರವಾಗಿದೆ. ಅಂತಹ ಸಮಾಧಿಸ್ಥ ನೆನಪುಗಳನ್ನು ಪ್ರಜ್ಞೆಗೆ ತರುವ ಕ್ರಿಯೆಯು ರೋಗಿಯ ಚೇತರಿಕೆಯಲ್ಲಿ ಸಹಾಯಕವಾಗಿದೆ. ವ್ಯಕ್ತಿಯ ಪ್ರಸ್ತುತ ಜೀವನದ ಸಮಸ್ಯೆಯನ್ನು ಸಂಪೂರ್ಣ ಗುಣಪಡಿಸಲು ಆತನ ಹಿಂದಿನ ಜೀವನದ ಮಾದರಿಗಳನ್ನು ಮತ್ತು ನೆನಪುಗಳನ್ನು ಪೂರ್ವಜನ್ಮ ಸ್ಮರಣೆ ಮೂಲಕ ಉತ್ಖನನ ಮಾಡಿದಾಗಲೇ ಸಾಧ್ಯವಾಗುತ್ತದೆ. ಇನ್ನು ಎರಡನೆಯದಾಗಿ, ಹಿಂದಿನ ಹಲವಾರು ಜನ್ಮಗಳಲ್ಲಿ ಬೇರೆ ಬೇರೆ ದೇಹಗಳಲ್ಲಿ ನಾವು ಅನುಭವಿಸಿದ್ದ ಅನೇಕ ಹುಟ್ಟು-ಸಾವು-ಹುಟ್ಟುಗಳ ಸರಣಿಯನ್ನು ನೋಡುವಾಗ 'ನಾವು ಪ್ರತ್ಯೇಕ ಅಥವಾ ವೈಯಕ್ತಿಕವಲ್ಲ, ಶಾಶ್ವತ ಆತ್ಮಗಳು' ಎಂಬ ಖಚಿತ ಮತ್ತು ವಾಸ್ತವ ಅರಿವು ಮೂಡುತ್ತದೆ. 'ನಾವು ನಿಜವಾಗಿಯೂ ಸಾಯುವುದಿಲ್ಲ ಬದಲಿಗೆ ಕೇವಲ ನಮ್ಮ ಪ್ರಶ್ನೆಯ ಮಟ್ಟವನ್ನು ಮಾತ್ರವೇ ಬದಲಾಯಿಸುತ್ತೇವೆ. ಏಕೆಂದರೆ ನಮ್ಮ ಪ್ರೀತಿಪಾತ್ರರೂ ಸಹ ಅಮರರು, ನಾವೆಂದಿಗೂ ಅವರಿಂದ ಬೇರ್ಪಟ್ಟಿರುವುದಿಲ್ಲ' ಎಂಬ ಅರಿವುಂಟಾಗುತ್ತದೆ. ಇದು ನಮ್ಮ ನಿಜವಾದ ಆಧ್ಯಾತ್ಮಿಕ ಸ್ವಭಾವದ ಪೂರ್ವಜನ್ಮಸ್ಮರಣೆಯ ಮೂಲಕ ಮಾಡಿಕೊಳ್ಳುವ ಈ ಸಾಕ್ಷಾತ್ಕಾರವು ಪ್ರಸ್ತುತ ಜೀವನದಲ್ಲಿನ ದೀರ್ಘಾವಧಿ ಸಮಸ್ಯೆಗಳನ್ನು ಗುಣಪಡಿಸುವ ಪ್ರಬಲವಾದ ಶಕ್ತಿಯಾಗಿದೆ.

ಮಾನವ ಧರ್ಮವನ್ನು ಭಾರತೀಯ ಶಾಸ್ತ್ರಗಳು ವಿವರಿಸಿರುವಷ್ಟು ಚೆನ್ನಾಗಿ ಮತ್ತು ಕರಾರುವಕ್ಕಾಗಿ ಬೇರಾವ ಮತಗ್ರಂಥಗಳೂ ವಿವರಿಸಿಲ್ಲ. ನಮಗೆ ಯೋಚಿಸುವ ಸಾಮರ್ಥ್ಯವಿದ್ದಲ್ಲಿ ನಮ್ಮ ಪುರಾತನ ಋಷಿಮುನಿಗಳ ವಿದ್ವತ್ತಿನ ಬಗ್ಗೆ ಹೆಮ್ಮೆಪಡಲು ನೂರಾರು ಕಾರಣಗಳು ಸಿಗುತ್ತವೆ. 'ಹಿಂದಿನವರಿಗೆ ಏನೂ ತಿಳಿದಿರಲಿಲ್ಲ' ಎಂಬ ಪೂರ್ವಾಗ್ರಹಪೀಡಿತ ಮನೋಭಾವನೆಗೆ ಒಳಗಾದರೆ ನಮ್ಮನ್ನು ನಾನೇ ಮೂರ್ಖರಾಗಿಸಿಕೊಂಡಂತೆ ನಾವಿಲ್ಲಿ ಭೂಮಿಯ ಮೇಲಿರುವುದು ಪ್ರಕೃತಿಯ ಕಾಕತಾಳೀಯತೆಯಿಂದಲ್ಲ! ಈ ಮೇಲಿನ ವಿವರಣೆಯನ್ನು ಅರಿತಾಗ ಅರ್ಥವಾಗಬಹುದು. ನಾವೆಲ್ಲರೂ ದೈವಿಕಜೀವಿಗಳೆಂಬುದು ಸ್ವಲ್ಪಸಮಯಕ್ಕಷ್ಟೇ ಕಲಿಯುವ ಉದ್ದೇಶದಿಂದ ಈ ಭೂಗ್ರಹದಲ್ಲಿ ವಿದ್ಯಾರ್ಥಿಗಳಾಗಿ ದಾಖಲಾಗಿದ್ದೇವೆ ಮತ್ತು ಕಲಿಕಾಪ್ರಕ್ರಿಯೆಯನ್ನು ಹೆಚ್ಚಿಸುವ ಸಲುವಾಗಿ ನಾವೇ ನಮ್ಮ ಪಠ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆ.

ಪ್ರತಿಯೊಬ್ಬ ವ್ಯಕ್ತಿಯೂ ಮೂಲ ದೈವಿಕಬೆಳಕಿನಿಂದ ಬಂದವರಾದ್ದರಿಂದ ನಾವು ಸಾಮಾನ್ಯವಾಗಿ ಊಹಿಸಿಕೊಂಡಿರುವುದಕ್ಕಿಂತಲೂ ಹೆಚ್ಚು ಬುದ್ಧಿವಂತರಾಗಿದ್ದೇವೆ ಮತ್ತು ಪ್ರಜ್ಞಾವಂತರಾಗಿರುತ್ತೇವೆ. ಈ ಜನ್ಮದಲ್ಲಿ ನಾವು ಮಾಡಬೇಕಿರುವುದು ನಮ್ಮ ಜನ್ಮದ ಮೂಲ ಹಿನ್ನೆಲೆಯನ್ನು ಸ್ಮರಿಸುವುದಷ್ಟೇ! ಸಂತೋಷವು ಆಂತರಿಕ ಮೂಲದಿಂದ ಬರುತ್ತದೆ. ಇದು ಬಾಹ್ಯವಸ್ತುಗಳ ಮೇಲೆ ಅಥವಾ ಇತರ ಜನರ ಮೇಲೆ ಅವಲಂಬಿತವಾಗಿಲ್ಲ. ನಮ್ಮ ಸುರಕ್ಷತೆ ಮತ್ತು ಸಂತೋಷದ ಭಾವನೆಗಳು ಇತರ ಜನರ ನಡವಳಿಕೆ ಮತ್ತು ಕ್ರಿಯೆಗಳ ಮೇಲೆ ಅವಲಂಬಿತವಾದಾಗ ನಾವು ದುರ್ಬಲರಾಗುತ್ತೇವೆ ಮತ್ತು ಸುಲಭವಾಗಿ ವೇದನೆಗೆ ಒಳಗಾಗುತ್ತೇವೆ. ಹೀಗಾಗಿ ನನ್ನ ಶಕ್ತಿಯನ್ನು ಬೇರೆಯವರಿಗೆ ಅಡವಿಡದೆ ವಿಷಯ ಪ್ರಚೋದನೆಗಳಿಗೆ ಅಂಟಿಕೊಳ್ಳದಿರಲು ಪ್ರಯತ್ನಿಸಬೇಕು.

ಬಾಲ್ಯದಲ್ಲಿ ಅಥವಾ ಶೈಶಾವಸ್ಥೆಯಲ್ಲಿ ಶಿಶುವಿನಲ್ಲಿ ಅತೀಂದ್ರಿಯ ಮತ್ತು ಪೂರ್ವಜನ್ಮದ ಸ್ಮರಣೆ ಜಾಗೃತವಾಗಿರುತ್ತದೆ. ಆದರೆ ನಮಗೆ ಅದನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಭ್ರೂಣ, ಶಿಶುಗಳು ಅಥವಾ ಪುಟ್ಟಮಕ್ಕಳು ನಾವು ಅನುಮಾನಿಸುವುದಕ್ಕಿಂತ ಹೆಚ್ಚಿನದನ್ನು ತಿಳಿದಿರುತ್ತಾರೆ; ಹೆಚ್ಚಿನ ಮಾಹಿತಿಯನ್ನು ಗ್ರಹಿಸುತ್ತಾರೆ ಮತ್ತು ಸಂಯೋಜಿಸುತ್ತಾರೆ; ನಮ್ಮ ಭಾವನೆಗಳು ಮತ್ತು ಕ್ರಿಯೆಗಳ ಬಗ್ಗೆ ತಿಳಿದಿರುತ್ತಾರೆ. ಹುಟ್ಟುವ ಮೊದಲು ಮತ್ತು ನಂತರದ ಅವರಿಗೆ ನಮ್ಮ ಪ್ರೀತಿಯ ಭಾವನೆಗಳು ಮತ್ತು ಆಲೋಚನೆಗಳ ಹರಿವು ಅವರ ಆತ್ಮಗಳನ್ನು ಪೋಷಿಸುತ್ತದೆ ಮತ್ತು ಆರೋಗ್ಯಕರ ಬೆಳವಣಿಗೆಗೆ ಮುಖ್ಯವಾಗಿರುತ್ತದೆ. ಗರ್ಭಾಶಯದಲ್ಲಿನ ಅವಧಿಯ ನೆನಪುಗಳು ಅನೇಕ ಕಾರಣಗಳಿಗಾಗಿ ಮುಖ್ಯವಾಗಿವೆ. ಬಾಲ್ಯದ ಆಘಾತಗಳು ಮತ್ತು ಸಂಬಂಧಗಳ ಕಾರಣವಾಗಿ ರೋಗಲಕ್ಷಣಗಳನ್ನು ಪಡೆದ ರೋಗಿಗಳಲ್ಲಿ ಈ ನೆನಪುಗಳ ಮರುಸ್ಮರಣೆ ಸುಧಾರಣೆಯನ್ನು ಉತ್ತೇಜಿಸುತ್ತದೆ.

ಈ ನೆನಪುಗಳು ಜನನದ ಮೊದಲು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಪ್ರಜ್ಞೆಯು ಆದಾಗಲೇ ಅಸ್ತಿತ್ವದಲ್ಲಿದೆ ಎಂಬುದನ್ನು ತೋರಿಸುತ್ತದೆ. ಈ ಜ್ಞಾನದ ಬೆಳಕಿನಲ್ಲಿ ನಾವು ಅಂದರೆ ಪಾಲಕರು ಈ ಪುಟ್ಟಜೀವಿಗಳೊಂದಿಗೆ ಹೇಗೆ ಸಂವಹನ ನಡೆಸುತ್ತೇವೆ ಎಂಬುದನ್ನು ಮರುಚಿಂತನೆ ಮಾಡಬೇಕಿದೆ. ಪದಗಳು, ಆಲೋಚನೆಗಳು, ಭಾವನೆಗಳ ಮೂಲಕ ನಾವು ಅವರೊಂದಿಗೆ ಸಂವಹನ ಮಾಡುವ ಪ್ರೀತಿಯ ಅಭಿವ್ಯಕ್ತಿಗಳಿಗೆ ಪುಟಾಣಿಜೀವಗಳು ತೀವ್ರವಾಗಿ ಮೇಳೈಸುತ್ತದೆ.

ನಾವು ಜೀವಿಸುವ ಮೂರು ಆಯಾಮದ ಜಗತ್ತಿನಲ್ಲಿ ನಾವು ಸಂಬಂಧಗಳ ಮೂಲಕವೇ ಕಲಿಯುತ್ತೇವೆ ಕಲಿಯಬೇಕಾದ ಅನಿವಾರ್ಯತೆಯೂ ಕೂಡಾ. ನಾವು ನಮ್ಮ ಪಾತ್ರವನ್ನು ಪೂರೈಸಿ ಹೊರಡುವಾಗ ನಮ್ಮೊಂದಿಗೆ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗುವುದಿಲ್ಲ, ಅದರೆ ನಮ್ಮ ಕಾರ್ಯಗಳು ಮತ್ತು ನಡವಳಿಕೆಗಳಿಂದ ಹೊರಹೊಮ್ಮಿದ ಪರಿಣಾಮಗಳು; ಕಲಿತ ಜ್ಞಾನ ಮತ್ತು ಅನುಭವಿಸಿದ ಭಾವನೆಗಳು ನಮ್ಮೊಂದಿಗೇ ಬರುತ್ತವೆ ಮಾತ್ರವಲ್ಲ. ಮುಂದಿನ ಜನ್ಮದಲ್ಲೂ ನಮ್ಮೊಂದಿಗೇ ಇರುತ್ತವೆ! ಸಂಬಂಧಗಳಲ್ಲಿ ನಾವು ಇತರರನ್ನು ಹೇಗೆ ನಡೆಸಿಕೊಳ್ಳುತ್ತೇವೆ ಎಂಬುದು ನಾವು ಭೌತಿಕವಾಗಿ ಸಂಗ್ರಹಿಸಿದ್ದಕ್ಕಿಂತ ಅಪರಿಮಿತವಾಗಿ ಮುಖ್ಯವಾಗುತ್ತವೆ. ನಮ್ಮ ಜೀವಿತಾವಧಿಯಲ್ಲಿ ನಾವು ಅನೇಕ ಭೌತಿಕ ವಸ್ತುಗಳನ್ನು ಸಂಪಾದಿಸಬಹುದು; ಆದರೆ ಮರಣಾನಂತರದಲ್ಲಿ ನಮ್ಮನ್ನು ಭೇಟಿಯಾಗುವವರು ನಾವು ಮಾಡಿಟ್ಟ ಆಸ್ತಿಯಲ್ಲ; ಬದಲಿಗೆ ನಮ್ಮ ಪ್ರೀತಿಪಾತ್ರರು ಮಾತ್ರವೇ. ಸಾವಿನ ಸಮೀಪದ ಅಥವ ಸಾವಿನ ಅಚಿತಿಮ ಕ್ಷಣಗಳನ್ನು ಅನುಭವಿಸಿದ ರೋಗಿಗಳ ಈ ಅನುಭವ ನಮ್ಮ ಜೀವನ ಮೌಲ್ಯಗಳನ್ನು ಮತ್ತು ನಮ್ಮ ಭವಿಷ್ಯದ ಆದ್ಯತೆಗಳನ್ನು ಪುನರ್ವಿಮರ್ಶಿಸಲು ಒಂದು ಅವಕಾಶ ನೀಡುತ್ತದೆ.

ಅನಪೇಕ್ಷಿತ ಬದ್ಧತೆಗಳನ್ನು ನಿರಾಕರಿಸಲು ಸಾಧ್ಯವಾಗದಿದ್ದಾಗ ದೈಹಿಕ ಅನಾರೋಗ್ಯವು ಹೆಚ್ಚಾಗಿ ಕಾಡುತ್ತದೆ ಏಕೆಂದರೆ; ಇದು 'ಇಲ್ಲ' ಎಂದು ಹೇಳುವ ಹೆಚ್ಚು ಸ್ವೀಕಾರಾರ್ಹ ಮಾರ್ಗವಾಗಿದೆ. ನಿಮ್ಮ ದೇಹವು ನಿಮಗೆ ಬೇಡವೆಂದು ದೈಹಿಕ ಅನಾರೋಗ್ಯದ ಮೂಲಕ ಹೇಳುವುದರಿಂದ ನಿರಾಕರಿಸುವುದನ್ನು ಬಿಟ್ಟು ನಿಮಗೆ ಬೇರೆ ದಾರಿ ಉಳಿದಿರುವುದಿಲ್ಲ. ಯಾವುದೇ ಒಂದು ಅಪೇಕ್ಷೆ ಅಥವಾ ಆಕರ್ಷಣೆಯನ್ನು ಬಾಯಿತೆರೆದು ಬೇಕು ಎಂದಾಗಿ ಮನಸ್ಸು ಬೇಡವೆಂದರೆ ಆಗ ಸೃಷ್ಟಿಯಾಗುವುದೇ 'ಒತ್ತಡ'. ಈ ಒತ್ತಡವೇ ಆಧುನಿಕ ಮಾನವನ ಪರಮಶತ್ರು.

ಭವಿಷ್ಯದ ಕಲ್ಪನೆ ಭಯ ಮತ್ತು ಸುಪ್ತಾವಸ್ಥೆಯ ಪ್ರೇರಣೆಗಳನ್ನು ನಿರಾಕರಿಸುವ ಮಾನಸಿಕ ಪ್ರಕ್ರಿಯೆಯಾಗಿದೆ ಮತ್ತು ಈ ಭಯಗಳನ್ನು ಮತ್ತು ಉದ್ದೇಶಗಳನ್ನು ಇತರರಿಗೆ ದಾಟಿಸುವ ಪ್ರಯತ್ನವಾಗಿರುತ್ತದೆ. ನಿಮ್ಮ ಸುಪ್ತ ಯಾವ ಗುಪ್ತಭಾವನೆಗಳನ್ನು ಮತ್ತೊಬ್ಬರ ಮೇಲೆ ಪ್ರಕ್ಷೇಪಿಸದಂತೆ ಜಾಗರೂಕರಾಗಿರುವುದು ಅಥವಾ ಯಾವುದೂ ಇಲ್ಲದಿರುವಾಗ ಉದ್ದೇಶಗಳನ್ನು ಹೇಳಿಕೊಳ್ಳದಿರುವುದು ಯಾರಿಗೂ ಹಾನಿಯುಂಟುಮಾಡುವ ಸಂಭವವಿರುವುದಿಲ್ಲ, ಬಾಲ್ಯದ ಅನುಭವಗಳಿಂದ ಅಥವಾ ಪೂರ್ವಜನ್ಮಗಳ ಪುನರಾವರ್ತಿತ ಮಾದರಿಗಳ ಸ್ವರೂಪ ಮತ್ತು ಪ್ರಭಾವವನ್ನು ಅರ್ಥಮಾಡಿಕೊಳ್ಳುವುದು ರಿಗ್ರೆಷನ್‌ನಿಂದ ಸಾಧ್ಯ. ತಿಳುವಳಿಕೆಯಿಲ್ಲದಿರುವುದೇ ಪ್ರಸ್ತುತ ಜನ್ಮದಲ್ಲಿ ಈ ಮಾದರಿಗಳ ಪುನರಾವರ್ತನೆಗೆ ಕಾರಣ ಮತ್ತು ಅನಗತ್ಯವಾಗಿ, ಸಂಬಂಧಗಳನ್ನು ಹಾನಿಗೊಳಿಸುತ್ತಿರುತ್ತವೆ. ಸಂಬಂಧಗಳ ಮತ್ತು ಹದಗೆಡಹುವಿಕೆಗೆ ಕಾರಣವಾಗುತ್ತಿರುವ ಮದ್ಯಪಾನ ಮತ್ತು ನಮ್ಮ ಮಾದಕದ್ರವ್ಯಗಳ ವ್ಯಸನ ಈ ಮಾದರಿಗಳ ಪುನರಾವರ್ತನೆಗೆ ಒಂದು ಅತ್ಯುತ್ತಮ ಉದಾಹರಣೆ.

**ಲೇಖಕರು:** ಬಿ.ಎಲ್. ಶಂಕರ್, ಮಾಜಿ ಸಭಾಪತಿ

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ:06.05.2025

## 3. ಯೋಧನನ್ನೂ ದೇವರೆಂದು ಪೂಜಿಸುವ ಸಂಸ್ಕೃತಿ ನಮ್ಮದು!

ನದಿಗಳೂ ಸಹ ಮಂಜೇರಿ ಹರಿಯುತ್ತಿದ್ದ ಶೀತಲ ಸಮಯ ಅಕ್ಟೋಬರ್ 1968ರಲ್ಲಿ ನಾಥುಲಾ ಪಾಸ್ ಸಮೀಪ ಕರ್ತವ್ಯದಲ್ಲಿದ್ದ ಮೂವರು ಸೈನಿಕರು ಅಕಸ್ಮಾತ್ ನದಿಗೆ ಬಿದ್ದು ವೀರಮರಣವನ್ನಪ್ಪುತ್ತಾರೆ. ಯಾರ ದೇಹವು ಪತ್ತೆಯಾಗಿರುವುದಿಲ್ಲ. ಮೂರು ದಿನಗಳ ಬಳಿಕ, ಅಧಿಕಾರಿಯೊಬ್ಬರ ಕನಸಿನಲ್ಲಿ ಹರ್ಭಜನ್ ಸಿಂಗ್ ಬಂದು, ಶವ ಬಿದ್ದ ಸ್ಥಳವನ್ನು ಹೇಳುತ್ತಾರೆ. ಸೇನಾಧಿಕಾರಿಗಳು ಹುಡುಕಿದಾಗ ಅವರ ದೇಹ ಪತ್ತೆಯಾಗುತ್ತದೆ. ಸೇನೆಯ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಸಲಾಗುತ್ತದೆ. ಹೀಗೆ ಅಂತ್ಯವಾಗಬೇಕಿದ್ದ ಇವರ ಘಟನೆಯು ಇಲ್ಲಿಂದ ಹೊಸ ಆರಂಭಕ್ಕೆ ಮುನ್ನುಡಿ ಬರೆಯುತ್ತದೆ.

ಭಾರತೀಯ ಸೇನೆಯ ವೀರಯೋಧನೊಬ್ಬ ದೈವತ್ವ ಸ್ಥಾನ ಪಡೆದು, ಮರಣದ ನಂತರವೂ 'ಜೀವಂತ ಬಾಬಾ ಆದ ಅಪರೂಪದ ಘಟನೆಯಿದು. ಇಂದಿಗೂ, ಪೂರ್ವ ಹಿಮಾಲಯದ ಎತ್ತರದ ಪರ್ವತಗಳಲ್ಲಿ, ಗಡಿಗಳನ್ನು ಕಾಪಾಡುವ ಹೆಮ್ಮೆಯ ಗಾಥೆಗಳು. ಈ ಪ್ರದೇಶದಲ್ಲಿ ವ್ಯಾಪಕ ಇಂತಹ ಒಂದು ವಿಶಿಷ್ಟ ವ್ಯಕ್ತಿತ್ವ ಬಾಬಾ ಹರ್ಭಜನ್ ಸಿಂಗ್ ಅವರದ್ದು, ಭಾರತೀಯ ಸೇನೆಯ ಯೋಧರಾಗಿದ್ದು, ಮರಣಾನಂತರವೂ ತಮ್ಮ ಕರ್ತವ್ಯ ತ್ಯಜಿಸದೆ ಗಡಿ ರಕ್ಷಣೆಗೆ ಸದಾ ಮುಂದಿರುವ 'ದೇವಸ್ವರೂಪ ಯೋಧ' ಎನ್ನಿಸಿ ಕೊಂಡವರು. ಹರ್ಭಜನ್ ಸಿಂಗ್ ಅವರಿಗೆ ಸಾಮಾನ್ಯವಾಗಿ ನಾಥುಲಾದ ಯೋಧ ಅಥವಾ ಪ್ರೀತಿಯಿಂದ ಬಾಬಾ ಎಂದು ಕರೆಯುತ್ತಾರೆ. ಅವರ ಕಥೆ ಧೈರ್ಯದ ಜೊತೆಗೆ ಭಕ್ತಿ ಮತ್ತು ಅತೀಂದ್ರಿಯ

ಶಕ್ತಿಯ ಸಮನ್ವಯವಾಗಿದೆ. ಇದು ಭಾರತೀಯ ಸೇನೆಯಲ್ಲಿ ನಡೆದ ಸತ್ಯ ಘಟನೆಯು ಪೌರಾಣಿಕ ಕತೆಗಳಲ್ಲಿ ಒಂದು ಎಂಬಂತೆ ಅಪೂರ್ವವಾಗಿದೆ.

ಸಿಖ್ ಕುಟುಂಬದಲ್ಲಿ ಆಗಸ್ಟ್ 30, 1946ರಂದು ಜನಿಸಿದ ಹರ್ಭಜನ್ ಸಿಂಗ್ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸದ್ರಾನಾ ಗ್ರಾಮದಲ್ಲಿ (ಇಂದು ಪಾಕಿಸ್ತಾನದಲ್ಲಿದೆ) ಮುಗಿಸಿ, 1965ರಲ್ಲಿ ಪಟ್ಟಿ, ಪಂಜಾಬ್‌ನಲ್ಲಿ ಹೈಸ್ಕೂಲ್ ಶಿಕ್ಷಣ ಪೂರ್ಣಗೊಳಿಸಿದರು. ಅಮೃತಸರದಲ್ಲಿ ಸೇನೆಗೆ ಸಿಪಾಯಿಯಾಗಿ ಆಯ್ಕೆಯಾಗುವ ಮೂಲಕ, ಭಾರತೀಯ ಸೈನ್ಯದ ಅತ್ಯಂತ ಹಳೆಯ ಎರಡನೇ ರೆಜಿಮೆಂಟ್ ಆಗಿರುವ 23ನೇ ಪಂಜಾಬ್ ರೆಜಿಮೆಂಟ್‌ಗೆ ಸೇರಿದರು. ಸೇವೆಗಾಗಿ ಅವರನ್ನು 1966ರಲ್ಲಿ ಪೂರ್ವ ಸಿಕ್ಕಿಂನ ನಾಥುಲಾ ಪಾಸ್ ಹತ್ತಿರ ನಿಯೋಜಿಸಲಾಯಿತು.

ನಾಥುಲಾ ಪಾಸ್ ದ್ವಾರವು ಸಮುದ್ರಮಟ್ಟದಿಂದ 14,140 ಅಡಿಗಳಷ್ಟು ಎತ್ತರದಲ್ಲಿದ್ದು, ಸದಾ ಮಂಜಿನಿಂದ ಕೂಡಿರುತ್ತದೆ. ಸಹಜವಾಗಿಯೇ ಪರ್ವತಶ್ರೇಣಿಯಲ್ಲಿ ಎತ್ತರದ ಸ್ಥಾನದಲ್ಲಿರುವುದರಿಂದ, ಸಾಮಾನ್ಯ ಜನರಿಗೆ ಉಸಿರಾಡಲು ಸ್ವಲ್ಪ ಕಷ್ಟವೆನಿಸುವಂತಹ ಪ್ರದೇಶವಾಗಿದೆ.

ದೇಶದ ರಕ್ಷಣಾತ್ಮಕ ವಿಚಾರದಲ್ಲಿ ಬಹುಸೂಕ್ಷ್ಮತೆ ಹೊಂದಿರುವ, ಸೇನಾ ನೆಲೆಗಳ ತಾಣವಾಗಿರುವ ಸಿಕ್ಕಿಂ ರಾಜ್ಯದಲ್ಲಿ ಈ ನಾಥುಲಾ ಪಾಸ್ ಬರುತ್ತದೆ. ಉತ್ತರ ಮತ್ತು ಈಶಾನ್ಯ ಭಾಗಗಳಲ್ಲಿ ಬಹಳಷ್ಟು ಪಾಸ್(ಪರ್ವತ ಹಾದಿ)ಗಳು ಹಾಗೂ ಸುರಂಗಗಳು ಬರುತ್ತವೆ. ಅವುಗಳಲ್ಲಿ, ಪ್ರಮುಖ ಪರ್ವತಗಳಲ್ಲಿ ರೋಹ್ಟಾಂಗ್ ಪಾಸ್, ನಾಥುಲ ಪಾಸ್ ಮತ್ತು ಝೋಜಿಲಾ ಪಾಸ್ ಸೇರಿವೆ.

ರೋಹ್ಟಾಂಗ್ ಪಾಸ್ ಎಂಬುದು ಹಿಮಾಚಲ ಪ್ರದೇಶದಲ್ಲಿದ್ದು, ಮನಾಲಿಯನ್ನು ಲೌಹೌಲ್ ಮತ್ತು ಸ್ಪಿತಿ ಕಣಿವೆಗಳಿಗೆ ಸಂಪರ್ಕಿಸುತ್ತದೆ. ಆಗಾಗ್ಗೆ ಭಾರೀ ಹಿಮಪಾತಗಳುಂಟಾಗುವ ಜಾಗವೂ ಆಗಿದೆ. ಶ್ರೀನಗರ ಮತ್ತು ಲೇಹ್ ನಡುವೆ ಮಹತ್ತರ ಸಂಪರ್ಕ ವ್ಯವಸ್ಥೆಯಾಗಿದೆ ಝೋಜಿಲಾ ಪಾಸ್, ಲಡಾಖ್‌ನಲ್ಲಿನ ಸಿಂಧೂ ಕಣಿವೆಯನ್ನು ಪ್ಯಾಂಗೊಂಗ್ ಸರೋವರಕ್ಕೆ ಸಂಪರ್ಕಿಸುವ ಮತ್ತು ವಿಶ್ವದ ಅತಿ ಎತ್ತರದ ಮೋಟಾರು ಪಾಸ್‌ಗಳಲ್ಲಿ ಒಂದಾಗಿದೆ ಚಾಂಗ್ಲಾ ಪಾಸ್. ಭಾರತವನ್ನು ಟಿಬೆಟ್‌ನೊಂದಿಗೆ ಸಂಪರ್ಕಿಸುವ ಮನ ಪಾಸ್ ಎಂಬುದು ಉತ್ತರಾಖಂಡದಲ್ಲಿದೆ. ಶಿಪ್ಕಿಲಾ ಪಾಸ್, ಹಿಮಾಚಲವನ್ನು ಟಿಬೆಟ್‌ನೊಂದಿಗೆ ಸಂಪರ್ಕಿಸುತ್ತದೆ. ಜೆಲೆಪ್ಲಾ ಪಾಸ್ ಸಿಕ್ಕಿಂನಲ್ಲಿದ್ದು, ಲ್ಹಾಸಾ, ಟಿಬೆಟ್‌ನೊಂದಿಗೆ ಸಂಪರ್ಕಿಸುತ್ತದೆ. ವಿಶ್ವದ ಅತಿ ಎತ್ತರದ ಮೋಟಾರು ರಸ್ತೆಯೆಂದು ಕರೆಯಲ್ಪಡುವ ಉಮ್ಲಿಂಗ್ ಲಾ ಪಾಸ್ ಲಡಾಖ್‌ನಲ್ಲಿದೆ.

ಆರು ತಿಂಗಳು ಮನುಷ್ಯರಿಗೆ ಸಂಪರ್ಕ ಹೊಂದಿದ್ದು, ಇನ್ನುಳಿದ ಆರು ತಿಂಗಳು ಈ ಭಾಗವು ಸಂಪರ್ಕ ರಹಿತವಾಗಿರುವ ಮೂಲಕ, ಬೇರೆಯದ್ದೇ ಪ್ರಪಂಚವೇನೋ ಎಂದೆನಿಸುತ್ತಿತ್ತು. 2014ರ ನಂತರ, ನರೇಂದ್ರ ಮೋದಿ ಸರಕಾರ ಬಂದ ಮೇಲೆ, ದೇಶದ ಈಶಾನ್ಯ ಭಾಗಕ್ಕೆ ಎಂದೂ ಸಿಗದಂತಹ ಪ್ರಾಶಸ್ತ್ಯ ನೀಡುತ್ತ ಬಂದಿದ್ದರಿಂದ, ಅಭಿವೃದ್ಧಿಯ ಜೊತೆಗೆ ಇಲ್ಲಿನ ಜನತೆ ವರ್ಷಪೂರ್ತಿ ದೇಶದ ಇತರೆ ಭಾಗಗಳೊಂದಿಗೆ ಸಂಪರ್ಕ ಹೊಂದಲು ಸಾಧ್ಯವಾಗುವಂತಾಗಿದೆ.

ಅಟಲ್ ಸುರಂಗ, ಡಾ.ಶ್ಯಾಮಪ್ರಸಾದ್ ಮುಖರ್ಜಿ ಸುರಂಗ, ಪಿರ್ ಪಂಡಾಲ್ ರೈಲ್ವೆ ಸುರಂಗ, ಬನಿಹಾಲ್ ಸುರಂಗ, ಸೋನ್ ಮಾರ್ಗ್ ಸುರಂಗ ಸೇರಿದಂತೆ ಬಹುತೇಕ ಸುರಂಗಗಳು ಈಗ ಸರ್ವ ಋತುಮಾನದ ಅಹೋರಾತ್ರಿ ಸಂಚರಿಸಬಹುದಾದ ಸುರಂಗ ಮಾರ್ಗ ಮಾರ್ಗಗಳಾಗಿವೆ.

ಈ ಪಾಸ್‌ಗಳು ಮತ್ತು ಸುರಂಗಗಳು ಭಾರತದ ಮೂಲ ಸೌಕರ್ಯದಲ್ಲಿ ದೇಶದಾದ್ಯಂತ ಸಂಪರ್ಕ, ವ್ಯಾಪಾರ ಮತ್ತು 'ಕಾರ್ಯತಂತ್ರದ ವಿಶೇಷವಾಗಿ ರಕ್ಷಣೆಯಂತಹ ಸವಾಲಿನ ಪರ್ವತ ಪ್ರದೇಶಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಹಿಮಾಲಯದ ಪರ್ವತಮಾಲೆಯ ನಡುವೆ ಒಂದು ಐತಿಹಾಸಿಕ ಮತ್ತು ರಕ್ಷಣಾ ಕಾರ್ಯತಂತ್ರಾತ್ಮಕ ದಾರಿಯಾಗಿ ನಿಂತಿರುವ ನಾಥುಲಾ ಪಾಸ್, ಭಾರತದ ಸಿಕ್ಕಿಂ ಮತ್ತು ಚೀನಾದ ಟಿಬೆಟ್ ಪ್ರದೇಶವನ್ನು ಸಂಪರ್ಕಿಸುತ್ತದೆ. ಪ್ರಾಚೀನ ಸಿಲ್ಕ್ ರೋಡ್ (Silk Route) ಪ್ರಮುಖ ಮಾರ್ಗವಾಗಿತ್ತು. ಇವತ್ತಿಗೆ ನಾಥುಲಾ ಪಾಸ್ ಒಂದು ಕೇವಲ ಸೇನೆಯ ಗಡಿ ಚೌಕಿಯಷ್ಟೆ ಅಲ್ಲದೆ, ವ್ಯಾಪಾರ, ಸಂಸ್ಕೃತಿ, ರಾಜಕೀಯ ಹಾಗೂ ಪ್ರವಾಸೋದ್ಯಮದ ತಾಣವೂ ಆಗಿದೆ.

ಈ ಪಾಸ್ ಅನ್ನು 1873ರಲ್ಲಿ ಎಡ್ಗರ್ ಎಂಬಾತ ಆಧುನಿಕವಾಗಿ ಮೊದಲ ಬಾರಿಗೆ ಸಮೀಕ್ಷೆ ನಡೆಸಿದರು ಎನ್ನಲಾಗುತ್ತಿದೆ. 1936ರಲ್ಲಿ ಲಾಸಾಗೆ ಭೇಟಿ ನೀಡಲು ಬ್ರಿಟಿಷ್ ರಾಜತಾಂತ್ರಿಕ ನಿಯೋಗ ಈ ಮಾರ್ಗ ಬಳಸಿತು. ಐವತ್ತರ ದಶಕದಲ್ಲಿ ಸಿಕ್ಕಿಂ ಸಾಮ್ರಾಜ್ಯವು ವ್ಯಾಪಾರದ ಉದ್ದೇಶದಿಂದ ಇದನ್ನು ಬಳಸುತ್ತಿತ್ತು. ಸಂಪೂರ್ಣವಾಗಿ ಈ ಮಾರ್ಗ ಬಳಕೆಯಾದರೆ, ಕೈಲಾಸ ಮಾನಸ ಸರೋವರ ತೀರ್ಥಯಾತ್ರೆಗೆ ಪರ್ಯಾಯ ಮಾರ್ಗ ತೆರೆದಂತಾಗುತ್ತದೆ. ಈ ವಿಚಾರದಲ್ಲಿ ಒಳ್ಳೆಯ ದಿನಮಾನಗಳನ್ನು ಆಶಿಸೋಣ.

ಪಂಜಾಬ್ ರೆಜಿಮೆಂಟ್‌ಗೆ ಸೇರಿದ ಬಳಿಕ ಯೋಧ ಹರ್ಭಜನ್ ಸಿಂಗ್, ಗಡಿಯ ಹಿಮಯುಕ್ತ ಪ್ರದೇಶದಲ್ಲಿ ಮ್ಯೂಲ್ ದಳವನ್ನು ಕರೆದೊಯ್ಯುವ ಹೊಣೆ ಹೊತ್ತಿದ್ದರು. ಆಗ ಈ ದುರಂತ ಸಂಭವಿಸಿತು. ಅವರ ಸಾವಿನ ನಂತರ, ನಿಗೂಢ, ಆಶ್ಚರ್ಯಕರ ಘಟನೆಗಳು ಸಂಭವಿಸತೊಡಗಿದವು. ಹಲವಾರು ಯೋಧರು ಹರ್ಭಜನ್ ಸಿಂಗ್ ತಮ್ಮ ಸ್ವಪ್ನಗಳಲ್ಲಿ ಪ್ರತ್ಯಕ್ಷವಾಗಿ, ಶತ್ರುಗಳ ಚಲನೆಗಳ ಕುರಿತು ಎಚ್ಚರಿಕೆ ನೀಡಿದ್ದಾರೆ ಎಂಬುದಾಗಿ ಹೇಳುತ್ತಾರೆ. ಭಾರತೀಯ ಸೈನಿಕರು ಈ ಭಾಗದಲ್ಲಿ ಆಪತ್ಕಾಲದಲ್ಲಿದ್ದಾಗ, ಬಾಬಾ ಅಲ್ಲಿಗೆ ಬಂದು ರಕ್ಷಿಸಿದ ಹಲವು ಪ್ರತ್ಯಕ್ಷ, ಅಪ್ರತ್ಯಕ್ಷ ಘಟನೆಗಳು ನಡೆದಿವೆ. ಈ ಘಟನೆಗಳು ಬಾಯಿಯಿಂದ ಬಾಯಿಗೆ ಹರಡಿ, ಸೇನೆಯು ಅವರು ಮರಣಾನಂತರವೂ ಗಡಿಯ ರಕ್ಷಣೆಯಲ್ಲಿ ತೊಡಗಿದ್ದಾರೆ ಎಂಬ ನಂಬಿಕೆಗೆ ಕಾರಣವಾಯಿತು. ಬಾಬಾ ಅವರ ಪವಿತ್ರ ಆತ್ಮವು ನಮ್ಮ ಸೈನ್ಯಕ್ಕೆ ನೆರವಾಗುತ್ತಿದೆ ಎಂಬ ಭಾವಕ್ಕೆ ಧಾರ್ಮಿಕ ರೂಪ, ಗೌರವಕೊಟ್ಟು ಅವರ ಗೌರವಾರ್ಥ ಬಾಬಾ ಮಂದಿರ ದೇವಾಲಯವನ್ನು ಭಾರತೀಯ ಸೇನೆಯು ನಾಥುಲಾ ಪಾಸ್ ಹತ್ತಿರ ನಿರ್ಮಿಸಿತು.

ಬಾಬಾ ಮಂದಿರಲ್ಲಿ ಒಟ್ಟು ಮೂರು ಕೊಠಡಿಗಳಿದ್ದು, ಒಂದರಲ್ಲಿ ಅವರು ಬಳಸುತ್ತಿದ್ದ ಹಾಸಿಗೆ, ಬೂಟುಗಳು, ಪೋಷಾಕುಗಳನ್ನು ಇಡಲಾಗಿದೆ. ದಿನವೂ ಅವರ ಕೋಣೆಯನ್ನು ಶುಚಿಗೊಳಿಸಲಾಗುತ್ತದೆ. ಇನ್ನೊಂದರಲ್ಲಿ ಅವರ ಭಾವಚಿತ್ರವನ್ನಿಟ್ಟು ನಿತ್ಯ ಪೂಜೆ ಕೈಗೊಳ್ಳಲಾಗುತ್ತಿದೆ. ಮತ್ತೊಂದು ಕೊಠಡಿಯಲ್ಲಿ ಇಲ್ಲಿನ ಯೋಧರು ಬಂದು ತಮ್ಮ ಕೋರಿಕೆಗಳನ್ನು ಪುಸ್ತಕದಲ್ಲಿ ಬರೆದಿಟ್ಟು ನೀರು ತುಂಬಿದ ಪಾತ್ರೆ, ಬಾಟಲಿಗಳನ್ನಿಟ್ಟು ಕೆಲ ದಿನಗಳ ಬಳಿಕ ಬಂದು ಆ ನೀರನ್ನು ಪವಿತ್ರ ಜಲವೆಂದು ತಮ್ಮ ಮನೆಗಳಲ್ಲಿಟ್ಟು

ಪ್ರತಿನಿತ್ಯ ಸೇವಿಸುತ್ತಾರೆ. ತಮ್ಮ ಕೋರಿಕೆಗಳನ್ನು ಬರೆದಿಟ್ಟಿದ್ದ ಪುಸ್ತಕಗಳನ್ನು ತೆಗೆದಿಟ್ಟುಕೊಳ್ಳುತ್ತಾರೆ, ಹೀಗೆ ಮಾಡುವುದರಿಂದ ಬಾಬಾ ತಮ್ಮ ಎಲ್ಲಾ ಕೋರಿಕೆಗಳನ್ನು ಈಡೇರಿಸುತ್ತಾರೆ ಎಂಬ ವಿಶ್ವಾಸ ಇಲ್ಲಿನ ಸೈನಿಕರದು. ಇಲ್ಲಿನ ಸೈನಿಕರು ಮಂದಿರದಲ್ಲಿ ಆಶೀರ್ವಾದ ಪಡೆದು ಸೈನ್ಯದ ಕಾರ್ಯಾಚರಣೆಗೆ ಹೊರಡುತ್ತಾರೆ. ಇದು ಜಗತ್ತಿನ ಸೇನಾ ವಿಚಾರದಲ್ಲೇ ಅತ್ಯಂತ ಅಪರೂಪದ ಘಟನೆ ಎನ್ನಬಹುದಾಗಿದೆ. ಎಲ್ಲ ಸೈನಿಕರು ಮಾಡುವಂತಹ ನಿಯಮಿತ ಕರ್ತವ್ಯದ ಭಾಗವಾಗಿ, ನಾಥುಲಾದ ಸೈನಿಕರು ಇಂದಿಗೂ ಒಂದಿಷ್ಟು ಹಣ ಸಂಗ್ರಹಿಸಿ, ಬಾಬಾ ಅವರ ತಾಯಿಗೆ ಕಳುಹಿಸಿ ಕೊಡುವ ಮೂಲಕ, ಮಾತೃಪ್ರೇಮ ಮೆರೆಯುತ್ತಾರೆ.

ಇಂದಿಗೂ, ಇಲ್ಲಿನ ಗಡಿಕಾವಲು ಯೋಧರು, ಗಡಿ ರಕ್ಷಣೆಯಲ್ಲಿ ಬಾಬಾ ಆತ್ಮವು ಸಹಕಾರ ನೀಡುತ್ತಿದೆ ಎಂದು ನಂಬುತ್ತಾರೆ. ಭಾರತ ಚೀನಾ ಧ್ವಜಸಭೆಗಳಲ್ಲಿ(Flag Meetings) ಒಂದು ಖಾಲಿ ಕುರ್ಚಿಯನ್ನು ಬಾಬಾ ಅವರಿಗಾಗಿ ಇಡಲಾಗುತ್ತದೆ. ಜೊತೆಗೆ, ಗಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಯೋಧರು ಬಾಬಾ ಅವರಿಗೆ ಪತ್ರ ಬರೆಯುವ ಸಂಪ್ರದಾಯವನ್ನು ಇಂದಿಗೂ ಮುಂದುವರೆಸಿದ್ದಾರೆ.

ಪ್ರತಿವರ್ಷ, ಸೆಪ್ಟೆಂಬರ್ 11ರಂದು ಬಾಬಾ ಧರಿಸುತ್ತಿದ್ದ ಬಟ್ಟೆ ಮತ್ತು ಇತರೆ ವಸ್ತುಗಳನ್ನು ಹತ್ತಿರದ ರೈಲ್ವೆಯಾದ ನ್ಯೂಜಲ್ಪಾಯ್ ಗುರಿ ರೈಲು ನಿಲ್ದಾಣದ ಮೂಲಕ ಕಪುರ್ತಲ ಜಿಲ್ಲೆಯ ಕುಕ ಹಳ್ಳಿಗೆ ಕಳುಹಿಸಿಕೊಡಲಾಗುತ್ತದೆ. ಇವರಿಗಾಗಿ, ರೈಲಿನಲ್ಲಿ ಒಂದು ಸೀಟು ಖಾಲಿಯಾಗಿರಿಸಿ ಕಾದಿರಿಸಲಾಗಿರುತ್ತದೆ. ಈ ಒಂದು ಕಾರ್ಯಕ್ಕೆ ಮೂರು ಜನ ಸೈನಿಕರು ಸಹಾಯಕರಾಗಿ ನಿಂತಿರುತ್ತಾರೆ ಕೂಡ!

ಇದೊಂದು ಕಾರ್ಯವು ಸೇನೆಯ ಗೌರವ ಮಾತ್ರವಲ್ಲ, ಇದು ಈಗ ಅಧ್ಯಾತ್ಮಿಕ ನಂಬಿಕೆಗೆ ರೂಪಾಂತರಗೊಂಡಿದೆ. ಚೀನಾದ ಸೇನೆ ಕೂಡಾ ಬಾಬಾ ಅವರ ಆತ್ಮದ ಮಹತ್ವವನ್ನು ಗೌರವಿಸುತ್ತಿದೆ ಎನ್ನಲಾಗುತ್ತದೆ.

ನಾಥುಲಾ ಪಾಸ್ ಬಗ್ಗೆ, ನಮ್ಮ ವೀರಯೋಧರ ಬಲಿದಾನದ ಪೂರ್ಣ ಮಾಹಿತಿ ಕೇಳುತ್ತಿದ್ದಂತೆ, ನಾವೆಲ್ಲ ಭಾವೋದ್ವೇಗಕ್ಕೊಳಗಾದೆವು. ಇಂತಹ ಪುಣ್ಯಭೂಮಿಯಲ್ಲಿ ಬಾಬಾನಂತೆಯೇ ಸಾವಿರಾರು ಸೈನಿಕರು ದೇಶಕ್ಕಾಗಿ ತಮ್ಮ ಆತ್ಮತರ್ಪಣಗೈದಿದ್ದಾರೆ. ಬಾಬಾ ಹರ್ಭಜನ್ ಸಿಂಗ್ ಅವರ ಕಥೆ ಮಾನವ ಸಾಮರ್ಥ್ಯ ಮತ್ತು ಭಕ್ತಿ ತುಂಬಿದ ಕಥೆಯಾಗಿದೆ. ಸಾವಿನ ನಂತರವೂ ಸೇವೆಯಲ್ಲಿ ಮುಂದಿರುವ ಇವರ ದೇಶಪ್ರೇಮಗಾಥೆ, ಪ್ರತಿಯೊಬ್ಬ ಭಾರತೀಯ ಯೋಧನಿಗೂ, ಪ್ರಜೆಗೂ ಪ್ರೇರಣೆಯಾಗಿದೆ. ಇಲ್ಲಿಗೆ ಭೇಟಿ ಕೊಟ್ಟವರಿಗೆ ರಾಷ್ಟ್ರಜಾಗೃತಿ, ರಾಷ್ಟ್ರಾಭಿಮಾನ ಇಮ್ಮಡಿಸದಿರದು!

**ಲೇಖಕರು:** ಗುರುರಾಜ್ ಗಂಟಿಹೊಳೆ

**ಆಧಾರ:** ವಿಜಯ ವಾಣಿ, ದಿನಾಂಕ:16.06.2025

# 4. ಎಲ್ಲರೆದೆಯಲ್ಲಿ ಒಂದು ಹಣತೆ ಹಚ್ಚಿದ ಬಾನು

ದಿಗ್ಗನೆ ಆಗಸದಲ್ಲಿ ಸಾವಿರಾರು ಮಿಂಚು ಹುಳುಗಳು ಹೊಳೆದಂತಾಯ್ತು. ಇದು ಅಂತರ್‌ರಾಷ್ಟ್ರೀಯ ಬೂಕರ್ ಪ್ರಶಸ್ತಿ ಸ್ವೀಕರಿಸಿ ಬಾನು ಮುಷ್ತಾಕ್ ಆಡಿದ ಮಾತು ಹಾಗೆ ಸಾವಿರ ಮಿಂಚು ಹುಳುಗಳು ಹೊಳೆದದ್ದು ಬಾನು ಮುಷ್ತಾಕ್ ಅವರಿಗೆ ಮಾತ್ರವಲ್ಲ. ಇಡೀ ಕನ್ನಡ ಜಗತ್ತಿಗೆ ಅಷ್ಟೇ ಅಲ್ಲ. ಇಡೀ ಭಾರತಕ್ಕೆ. ಕನ್ನಡಕ್ಕೆ ಮೊದಲ ಬೂಕರ್ ತಂದುಕೊಟ್ಟ ಬೂಕರ್ ಇತಿಹಾಸದಲ್ಲಿ ಮೊದಲ ಬಾರಿಗೆ ಸಣ್ಣ ಕಥೆಗಳಿಗೆ ಪ್ರಶಸ್ತಿ ತಂದುಕೊಟ್ಟ ಹಿರಿಮೆ ಬಾನು ಮುಷ್ತಾಕರದ್ದು.

ವಿಶ್ವಾಸದಿಂದ ಶಿಕ್ಷಾರ ಮುಂದೆ ನಿಂತಿದ್ದಳು, ಕನ್ನಡವನ್ನು ಬರೆಯಾಗಿಸಿಕೊಂಡ ಕೂರಿಸಿದರು. ಆ ಹುಡುಗಿ ಅಭಿಮಾನಕ್ಕೆ ಧಕ್ಕೆ ಉಂಟು ಮಾಡಲಿಲ್ಲ ಬದಲಿಗೆ ಮನೆಯಲ್ಲಿ ಮುನಿ ಭಾಷೆ ಮಾತನಾಡಿದರೂ 7 ನೋಡುವಂತೆ ಎತ್ತರಿಸಿಯೇಬಿಟ್ಟರು.

"ಪ್ರಶ್ನೆ ಕೇಳುವುದಕ್ಕೆ ಹೆದರದಿರು ಒಡನಾಡಿ," ಎಂದ ಕವಿ ಬ್ರೆಕ್ಟ್, ಬಾನು ಮುಸ್ತಾಕ್‌ಗೆ ಪ್ರಶ್ನೆಗಳಿದ್ದವು. ಅವರು ಅದನ್ನು ಮಂಡಿಸಲು ಹುಡುಕಿಕೊಂಡದ್ದು ಅಕ್ಷರದ ಹಾದಿಯನ್ನು ಶಾಲೆಯಲ್ಲಿರುವಾಗಲೇ ಕಥೆ ಬರೆದಿದ್ದ ಬಾನು ಮತ್ತೆ ಅಕ್ಷರ ಕೈಗೆತ್ತುಕೊಳ್ಳಲು ಸುಮಾರು ವರ್ಷಗಳೇ ಕಾದರು. 29 ವಯಸ್ಸಿನಲ್ಲಿ ಮತ್ತೆ ಬರೆಯಲು ಆರಂಭಿಸಿದ ಇವರ ಜೋಳಿಗೆಯಲ್ಲಿ ಈಗ 6 ಕಥಾ ಸಂಕಲನಗಳು, ಒಂದು ಕಾದಂಬರಿ, ಒಂದು ವಿಚಾರ ಬರಹ ಹಾಗೂ ಒಂದು ಕವನ ಸಂಕಲನವಿದೆ.

ಬೂಕರ್ ಪ್ರಶಸ್ತಿ ಪಡೆಯುವ ಒಂದು ತಿಂಗಳು ಮುಂಚೆ ಇರಬೇಕು. ಹಾಸನದಲ್ಲಿ 'ಕಾವ್ಯ ಸಂಸ್ಕೃತಿ ಯಾನವಿತ್ತು. ಎರಡು ದಿನ ಹಿಂದೆಯಷ್ಟೆ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ಮುಗ್ಧ ಜೀವಗಳ ಬಲಿ ತೆಗೆದುಕೊಂಡಿದ್ದರು. ವೇದಿಕೆಯಲ್ಲಿ ಬೂಕರ್ ಶಾರ್ಟ್ ಲಿಸ್ಟ್‌ಗಾಗಿ ಗೌರವ ಸ್ವೀಕರಿಸಲು ಬಂದಿದ್ದ ಬಾನು ಕಳವಳವನ್ನು ಹೊತ್ತು ಕುಳಿತಿದ್ದರು. "ನಾನು ಈ ಕೃತ್ಯವನ್ನು ಅತ್ಯಂತ ಕಟುವಾದ ಶಬ್ದಗಳಲ್ಲಿ ಖಂಡಿಸುತ್ತೇನೆ. ಯಾವ ಧರ್ಮವೂ ಮನುಷ್ಯನ ಹತ್ಯೆಯನ್ನು ಬಯಸುವುದಿಲ್ಲ ಎಂದು ನೊಂದು ನುಡಿದರು.

'ಆ ದಶಕ' ಎಂದು ನಾವು ಕಣ್ಣರಳಿಸಿ ಬಣ್ಣಿಸುವ 70 ಹಾಗೂ 80ರ ದಶಕವೇ ಹಾಗಿತ್ತು. ರೈತ, ಕಾರ್ಮಿಕ, ದಲಿತ, ಸಾಹಿತ್ಯ, ಸಾಂಸ್ಕೃತಿಕ ಚಳವಳಿಗಳು ಕುಡಿಯೊಡೆದು ಹೊಸ ಅರಿವನ್ನು ಬಿತ್ತಿದ್ದವು. ನಮ್ಮ ಸುತ್ತಲಿನ ಸಮಾಜದ ಬಗ್ಗೆ ಮಾತನಾಡುವುದನ್ನು ಕಲ್ಪಿಸಿದ್ದವು. ಬಾನು ಬರೆಯಲು ಆರಂಭಿಸಿದ್ದು ಇಂಥ ಬಂಡಾಯದ ಚಳವಳಿಯ ಘಟ್ಟದಲ್ಲಿ ಹೇಗೆ ಬರೆಯುತ್ತಾರೆ ಎನ್ನುವುದಕ್ಕಿಂತ ಏನು ಬರೆಯುತ್ತಾರೆ ಎನ್ನುವುದು ಮುಖ್ಯವಾಗಿದ್ದ ಕಾಲ. ಒಡಲ ಸಂಕಟವನ್ನು ಹೊರ ಹಾಕಲು ಕಲಿಸಿದ ಆ ಚಳವಳಿ, ಹಾಗೂ ತಾನೇ ಒಂದು ಚಳವಳಿಯಂತಿದ್ದ 'ಲಂಕೇಶ್ ಪತ್ರಿಕೆ'ಯ ಬೆನ್ನು ತಟ್ಟುವಿಕೆಯಿಂದ ಬಾನು ತಮ್ಮ ಸುತ್ತಲಿನ ಕತೆಗಳನ್ನೇ ಕೈಗೆತ್ತಿಕೊಂಡರು. ತಮ್ಮ ಬದುಕಲ್ಲಿ ನಡೆದದ್ದು, ತಾವು ಕಂಡದ್ದು ಹಲವರು ಹೇಳಿದ್ದು ಎಲ್ಲವೂ ಕಥೆಯಾಗಿ ಹೊರಗೆ ಬಂದವು.

ಆರು ಕಥಾ ಸಂಕಲನಗಳಿಂದ ಹೆಕ್ಕಿದ 12 ಕತೆಗಳನ್ನು ಇಂಗ್ಲಿಷ್ ಓದುಗ ಲೋಕದ ಕೈಗಿತ್ತ ದೀಪಾ ಭಾಸ್ತಿ ಹೇಳುತ್ತಾರೆ. ಬಾನು ಹೇಳುತ್ತಿದ್ದರು, ನಾನು ಒಂದು ಧರ್ಮದ ಒಂದೇ ರೀತಿಯ ಮಹಿಳೆಯರ ಬಗ್ಗೆ ಬರೆದದ್ದು ಅಲ್ಲ. ಮಹಿಳೆಯರು ಎಲ್ಲೆಡೆಯೂ ಬಹುತೇಕ ಒಂದೇ ರೀತಿಯ ಸಮಸ್ಯೆಯನ್ನು ಎದುರಿಸುತ್ತಾರೆ. ನಾನು ಬರೆದದ್ದು ಆ ಎಲ್ಲರ ಕತೆಗಳನ್ನು ಎಂದು.

ಬಾನು ಮುಷ್ತಾಕ್‌ಗೆ ಬಂಡಾಯದ ಚಳುವಳಿಯ ಒಡಲಲ್ಲಿಯೇ ಅರಳಿದ ಕವಿತೆ' ಒಂದೆಜ್ಜೆ ಮುಂದಾ ಇಡವ್ವ ಗಂಗಾಳ ಬೆಳಗೋ ತಂಗ್ಯವ್ವ ಅಂಗಳ ದಾಟಿದರೆ ಅಕ್ಷರ ಲೋಕ ಅಂಗಳದೆದುರೆ ಅರಿವಿನ ದಾರಿ, ದಾರಿ ದೂರ ಇಲ್ಲ ಓದು ಭಾರ ಅಲ್ಲ ಎನ್ನುವಂತೆ ಅರಿವಿನ ದಾರಿಯತ್ತ ಒಂದು ಹೆಜ್ಜೆ ಮುಂದೆ ಇಟ್ಟೇ ಬಿಟ್ಟರು. ಅವರು ಪತ್ರಕರ್ತರಾಗಿದ್ದಾಗ, ವಕೀಲರಾಗಿ, ಹಾಸನದ ಮುನಿಪಾಲಿಟಿಯ ಸದಸ್ಯೆಯಾಗಿ ಅರಿವಿನ ಬೀಜವನ್ನು ಬಿತ್ತಿದರು.

ಬೂಕರ್ ಶಾರ್ಟ್ ಲಿಸ್ಟ್‌ಗೆ ಸೇರಿದ ಆಸುಪಾಸಿನಲ್ಲಿ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಬಾನು ಸಂವಾದದಲ್ಲಿ ಮಾತನಾಡುತ್ತಾ "ಕತೆಗಿಲ್ಲ ಭಾಷೆಯ ಕಟ್ಟುಪಾಡು" ಎಂದಿದ್ದರು. ತಮ್ಮ ಅಷ್ಟೂ ಕಥೆಗಳನ್ನು ಒಳಗೊಂಡ 'ಹಸೀನಾ ಮತ್ತು ಇತರ ಕಥೆಗಳು ಕೃತಿಯ ಬಗ್ಗೆ ಅವರಿಗೆ ಸಂಭ್ರಮವಿತ್ತು. ಹಾರ್ಟ್ ಲ್ಯಾಂಪ್' ಕೃತಿಯನ್ನು ಇಂಗ್ಲಿಷ್ ಓದುಗರ ಮುಂದಿಟ್ಟ ಅನುವಾದಕಿ ದೀಪಾ ಭಾಸ್ತಿ ತಮ್ಮ ಅನುವಾದದ ಮಾತು 'ಇಟಾಲಿಕ್‌ನ ವಿರುದ್ಧವಾಗಿ, ಎಂದು ಕೆಲವು ಮಾತುಗಳನ್ನು ಹೇಳಿದ್ದಾರೆ. ಅನುವಾದದ ಸಮಯದಲ್ಲಿ ಬೇರೆ ಭಾಷೆಯದ್ದು.

ಸಮುದಾಯದ್ದೇ ಆದರೂ ಆ ಕಥೆಗಳ ಸ್ತ್ರೀಪಾತ್ರಗಳು ಎದುರಿಸುವ ಕಷ್ಟಗಳು ಪುರುಷ ಪ್ರಧಾನ ಸಮಾಜದಲ್ಲಿ ಎಲ್ಲ ಮಹಿಳೆಯರೂ ಎದುರಿಸುವ ಸಮಸ್ಯೆಗಳೇ ಆಗಿವೆ. ಆ ಸವಾಲುಗಳನ್ನು ಭರಿಸುವ, ಅವರ ಜತೆಗೂ ಬದುಕನ್ನೂ ತೂಗಿಸಿಕೊಂಡು ಹೋಗುವ ಅವರ ಸಾಮರ್ಥ್ಯವೂ ಸಾರ್ವತ್ರಿಕವಾಗಿ ಒಂದೇ.

ಬಾನು ಅವರ ಕಥೆಗಳ ಅನುವಾದದಲ್ಲಿ ಭಾಷೆ ಕಷ್ಟದ್ದು ಅನಿಸಲಿಲ್ಲ. ಹಾಸನದ ಸ್ಥಳೀಯವಾದ ಕೆಲವೊಂದು ಶಬ್ದಗಳನ್ನು ಬಳಸುತ್ತಾರಷ್ಟೆ. ಆದರೆ, ಅವರ ಕೃತಿಯನ್ನು ಅನುವಾದಿಸುವಾಗ ಭಾಷೆಗಿಂತ ಕಷ್ಟ ಅನಿಸಿದ್ದು ಸಾಂಸ್ಕೃತಿಕ ಸಂದರ್ಭಗಳು. ಅವರದು ಜಾಗತಿಕ ಪರಿಕಲ್ಪನೆಯ, ಎಲ್ಲರಿಗೂ ಕನೆಕ್ಟ್ ಆಗುವ ಕಥೆಗಳೇ ಆದರೂ ಕಲ್ಚರಲ್ ರೆಫರೆನ್ಸ್‌ಗಳನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ಸಮಯ ಬೇಕಾಯ್ತು. ಇಸ್ಲಾಮಿಕ್ ಆಚರಣೆಗಳು, ಅಲ್ಲಿಗೇ ನಿರ್ದಿಷ್ಟವೆನಿಸುವ ಸೂಕ್ಷ್ಮತೆಗಳನ್ನು ಸ್ವಲ್ಪ ಸಮಯ ತೆಗೆದುಕೊಂಡು ಅರ್ಥ ಮಾಡಿಕೊಂಡು ಅನುವಾದಿಸಿದೆ.

**ಲೇಖಕರು:** ಜಿ.ನ್.ಮೋಹನ್

**ಆಧಾರ:** ವಿಜಯ ಕರ್ನಾಟಕ, ದಿನಾಂಕ:16.06.2025

# ಭಾಗ–9

# ಶ್ರದ್ಧಾಂಜಲಿ

## 1. ಶ್ರೀ ಬೇಗಾನೆ ರಾಮಯ್ಯ, ಮಾಜಿ ವಿಧಾನಸಭಾ ಸದಸ್ಯರು



ಹಿರಿಯ ರಾಜಕಾರಣಿ ಶ್ರೀ ಬೇಗಾನೆ ರಾಮಯ್ಯ ಅವರು ದಿನಾಂಕ:24.04.2025ರಂದು ನಿಧನ ಹೊಂದಿರುತ್ತಾರೆ.

ಶ್ರೀಯುತ ಬೇಗಾನೆ ರಾಮಯ್ಯ ಅವರು ಚಿಕ್ಕಮಗಳೂರು ಜಿಲ್ಲೆ ಬೇಗಾನೆಯಲ್ಲಿ ಜನಿಸಿದ್ದು, ಎಂ.ಎ ಹಾಗೂ ಬಿ.ಎಲ್. ಪದವಿಯನ್ನು ಪಡೆದಿದ್ದರು. 1978ರಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರದಿಂದ 6ನೇ ವಿಧಾನಸಭೆಗೆ ಚುನಾಯಿತರಾಗಿದ್ದ ಅವರು ಗ್ರಾಮೀಣಾಭಿವೃದ್ಧಿ ಮತ್ತು ಗ್ರಾಮೀಣ ನೀರು ಪೂರೈಕೆ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ತಮ್ಮ ಅಧಿಕಾರಾವಧಿಯಲ್ಲಿ ಕುಡಿಯುವ ನೀರಿಗಾಗಿ ಹಳ್ಳಿ ಹಳ್ಳಿಗಳಲ್ಲಿ ಬೋರ್‌ವೆಲ್ ಕೊರೆಸಿ "ಬೋರ್‌ವೆಲ್ ರಾಮಯ್ಯ" ಎಂದೇ ಹೆಸರು ವಾಸಿಯಾಗಿದ್ದರು.

## 2. ಶ್ರೀ ಡೆರ್ರಿಕ್ ಎಂ.ಬಿ. ಫುಲಿನ್‌ಫಾ, ವಿಧಾನಸಭಾ ಮಾಜಿ ಸದಸ್ಯರು



ಶ್ರೀಯುತ ಡೆರ್ರಿಕ್ ಎಂ.ಬಿ. ಫುಲಿನ್‌ಫಾರವರು ದಿನಾಂಕ:28.05.2025ರಂದು ನಿಧನ ಹೊಂದಿರುತ್ತಾರೆ.

ಶ್ರೀ ಡೆರ್ರಿಕ್ ಎಂ.ಬಿ. ಫುಲಿನ್‌ಫಾ ಅವರು ದಿನಾಂಕ:07.12.1957ರಂದು ಬೆಂಗಳೂರಿನಲ್ಲಿ ಜನಿಸಿದ್ದು, ಬಿ.ಕಾಂ., ಎಲ್.ಎಲ್.ಬಿ, ಡಿ.ಎಂ.ಎಸ್.ಎಸ್.ಐ ಪದವಿಗಳನ್ನು ಪಡೆದಿದ್ದರು. ವೃತ್ತಿಯಲ್ಲಿ ಉಪನ್ಯಾಸಕರಾಗಿದ್ದ ಅವರು ಬೆಂಗಳೂರು ವಿಶ್ವವಿದ್ಯಾಲಯ ಸೆನೆಟ್ ಹಾಗೂ ಬೆಂಗಳೂರು ದೂರವಾಣಿ ಅಡ್ವೈಸರಿ ಕಮಿಟಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಅಖಿಲ ಭಾರತ ಪ್ರಗತಿಪರ ಆಂಗ್ಲೋ–ಇಂಡಿಯನ್ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ ಶ್ರೀಯುತರು 1990ರಲ್ಲಿ ಮೊದಲ ಬಾರಿಗೆ 9ನೇ ವಿಧಾನಸಭೆಯ ಆಂಗ್ಲೋ–ಇಂಡಿಯನ್ ಸದಸ್ಯ ಸ್ಥಾನಕ್ಕೆ ನಾಮನಿರ್ದೇಶನಗೊಂಡಿದ್ದು, ನಂತರ 2008ರಲ್ಲಿ 13ನೇ ವಿಧಾನಸಭೆಗೆ 2ನೇ ಬಾರಿಗೆ ಪುನರ್ ನಾಮನಿರ್ದೇಶಿತಗೊಂಡಿದ್ದರು.

**3. ಶ್ರೀ ಡೇವಿಡ್ ಸಿಮೆಯೋನ್, ಮಾಜಿ ಉಪ ಸಭಾಪತಿಗಳು**



ಶ್ರೀಯುತ ಶ್ರೀ ಡೇವಿಡ್ ಸಿಮೆಯೋನ್‌ರವರು ದಿನಾಂಕ:10.06.2025ರಂದು ನಿಧನ ಹೊಂದಿರುತ್ತಾರೆ.

ಶ್ರೀಯುತ ಡೇವಿಡ್ ಸಿಮೆಯೋನ್ ಅವರು ದಿನಾಂಕ:11.06.1950ರಂದು ಗುಲ್ಬರ್ಗಾ ಜಿಲ್ಲೆಯ ಮಲ್ಹಾರ ಗ್ರಾಮದಲ್ಲಿ ಜನಿಸಿದ್ದು, ಎಂ.ಎ. ಪದವೀಧರರಾಗಿದ್ದರು. ಕಲಬುರ್ಗಿಯ ಜಿಮ್‌ಖಾನಾ ಉನ್ನತ ಶಿಕ್ಷಣ ಕೇಂದ್ರದ ಪ್ರಧಾನ ಕಾರ್ಯದರ್ಶಿಯಾಗಿ, ನಗರ ಸಭೆಯ ಸದಸ್ಯರಾಗಿ ಹಾಗೂ ಕಲಬುರ್ಗಿ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. 1996 ರಿಂದ 2002ರವರೆಗೆ ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರಾಗಿದ್ದ ಶ್ರೀಯುತರು ಆ ಅವಧಿಯಲ್ಲಿ ವಿಧಾನ ಪರಿಷತ್ತಿನ ಉಪ ಸಭಾಪತಿಗಳಾಗಿ ಹಾಗೂ ಹಂಗಾಮಿ ಸಭಾಪತಿಗಳಾಗಿ ಕಾರ್ಯನಿರ್ವಹಿಸಿದ್ದರು.

## 4. ಶ್ರೀ ಎನ್. ರಾಜಣ್ಣ, ವಿಧಾನಸಭೆ ಮಾಜಿ ಸದಸ್ಯರು



ದೀನ ದಲಿತರ ದನಿಯಾಗಿದ್ದ ಶ್ರೀಯುತ ಎನ್. ರಾಜಣ್ಣರವರು ದಿನಾಂಕ:15.06.2025ರಂದು ನಿಧನ ಹೊಂದಿರುತ್ತಾರೆ.

ಶ್ರೀ ಎನ್. ರಾಜಣ್ಣ ಅವರು ದಿನಾಂಕ:10.10.1940ರಂದು ಜನಿಸಿದ್ದರು. ರಕ್ಷಣಾ ಇಲಾಖೆಯಲ್ಲಿ C.L ಆಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದು, ಹೈನುಗಾರಿಕೆ ನಡೆಸುತ್ತಿದ್ದರು. ದಂಡು ಪ್ರದೇಶದ ಗೋಪಾಲಕರ ಸಂಘದ ಅಧ್ಯಕ್ಷರು, ಪ್ರಾಣಿ ದಯಾ ಸಂಘದ ಪ್ರತಿನಿಧಿ ಹುದ್ದೆ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳ ಪೋಷಕರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಎರಡು ಬಾರಿ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗಿ ಆಯ್ಕೆಗೊಂಡು ದಲಿತರ, ಬಡ ಜನರ ಮತ್ತು ಕೊಳಚೆ ಪ್ರದೇಶಗಳಲ್ಲಿನ ಜನರ ಯೋಗಕ್ಷೇಮಕ್ಕಾಗಿ ಶ್ರಮಿಸಿದ್ದರು. ಪರಿಸರದ ಬಗ್ಗೆ ಅತೀವ ಕಾಳಜಿ ಹೊಂದಿದ್ದ ಅವರು ಬೆಂಗಳೂರು ನಗರದ ಉದ್ಯಾನವನಗಳು ಮತ್ತು ಆಟದ ಮೈದಾನಗಳನ್ನು ಉಳಿಸಲು ಹಲವಾರು ಚಳುವಳಿಗಳನ್ನು ನಡೆಸಿದ್ದರು. 1994ರಲ್ಲಿ ಭಾರತೀನಗರ ಕ್ಷೇತ್ರದಿಂದ 10ನೇ ವಿಧಾನಸಭೆಗೆ ಚುನಾಯಿತರಾಗಿದ್ದರು.

## 5. ಶ್ರೀ ಕಾಕಸೋ ಪಾಂಡುರಂಗ ಪಾಟೀಲ್, ವಿಧಾನಸಭಾ ಮಾಜಿ ಸದಸ್ಯರು



ಹಿರಿಯ ರಾಜಕಾರಣಿ ಶ್ರೀ ಕಾಕಸೋ ಪಾಂಡುರಂಗ ಪಾಟೀಲ ಅವರು ದಿನಾಂಕ:18.06.2025ರಂದು ನಿಧನ ಹೊಂದಿರುತ್ತಾರೆ

ಶ್ರೀ ಕಾಕಸೋ ಪಾಂಡುರಂಗ ಪಾಟೀಲ್‌ರವರು ದಿನಾಂಕ:25.11.1955ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ವಾಳಕಿ ಗ್ರಾಮದಲ್ಲಿ ಜನಿಸಿದ್ದು, ಬಿ.ಎ(ಆನರ್ಸ್) ಪದವಿಯನ್ನು ಪಡೆದಿದ್ದರು. ಹುಕ್ಕೇರಿ ತಾಲ್ಲೂಕಿನ ಕಣಗಲಾ ಜಿಲ್ಲಾ ಪಂಚಾಯಿತಿ ಸದಸ್ಯರಾಗುವ ಮೂಲಕ ರಾಜಕೀಯ ಪ್ರವೇಶಿಸಿದ್ದ ಶ್ರೀಯುತರು ಬೆಳಗಾವಿಯ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಕೃಷಿ ಮಾರುಕಟ್ಟೆ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಸಹಕಾರಿ, ಪಂಚಾಯತ್‌ರಾಜ್ ಮತ್ತು ನೀರಾವರಿ ಕ್ಷೇತ್ರಗಳಲ್ಲಿ ಅತೀವ ಆಸಕ್ತಿ ಹೊಂದಿದ್ದ ಅವರು ನಿಪ್ಪಾಣಿ ವಿಧಾನಸಭಾ ಕ್ಷೇತ್ರದಿಂದ 1999ರಲ್ಲಿ ಮೊದಲ ಬಾರಿಗೆ 11ನೇ ವಿಧಾನಸಭೆಗೆ ಚುನಾಯಿತರಾಗಿ, ನಂತರ 12 ಮತ್ತು 13ನೇ ವಿಧಾನಸಭೆಗೆ ಪುನರ್ ಆಯ್ಕೆಗೊಂಡಿದ್ದರು.

* * * * *